ಬೆಲೆ ಎರಡು ಆಣೆ

ಕರ್ಮವೀರ


ಸಂಪಾದಕರು:
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor,
H. R. PUROHIT, M. A.

[ಸಂಪುಟ ೨೦] ಹುಬ್ಬಳ್ಳಿ, ಸೋಮವಾರ ತಾರೀಖು ೩—೫—೧೯೪೮ [ಸಂಚಿಕೆ ೪]

ಅ. ಭಾ. ಕಾಂಗ್ರೆಸ್ ದೃಶ್ಯಗಳು:




ಗಾಂಧೀನಗರ: ತಾ. ೨೪—೨೫ ಜರಗಿದ ಅ. ಭಾ. ಕಾಂಗ್ರೆಸ್ ಮುಂಬಯಿ ಅಧಿವೇಶನದ ಮುಖಮಂಟಪ





ಬಲಕ್ಕೆ ವ್ಯಾಸಪೀಠದಲ್ಲಿ ಅಧ್ಯಕ್ಷ ರಾಜೇಂದ್ರರು ಮತ್ತು ಮುಖ್ಯ ಮಂತ್ರಿ ಪಂ॥ ಜವಾಹರರು.

ಎಡಕ್ಕೆ: ಅಧಿವೇಶನದ ಪ್ರೇಕ್ಷಕರ ಸಂದಣಿ.



ನಮ್ಮ ಆಹಾರ

ಪ್ರಕಾಶಕರು, ಸಿವಿಲ್ ಸಪ್ಲಾಯಿಜ ಡಿಪಾರ್ಟಮೆಂಟ್, ಸರ್ಕಾರ್‌ಮೆಂಟ್ ಆಫ ಬಾಂಬೆ ಪುಟಗಳು ೩೩ ಬೆಲೆ ೧೨ ಆಣೆ.

ಮುಂಬಯಿ ಸರಕಾರದವರು ಪ್ರಕಟಿಸಿದ ಪುಸ್ತಿಕೆಯಿದು. ಇದರಲ್ಲಿ ಏನು, ಏಕೆ, ಎಷ್ಟು ತಿನ್ನಬೇಕೆಂಬ ವಿಷಯಗಳನ್ನು ಜನಸಾಮಾನ್ಯರಿಗೆ ಸಚಿತ್ರವಾಗಿ ತಿಳಿಸಿ ಕೊಡಲಾಗಿದೆ. ಹುಡುಗರು, ಹಿರಿಯರು ಎಲ್ಲರೂ ಓದಿ ಅರಿತು ವಿಷಯವನ್ನು ಅಗತ್ಯ ಅರಗಿಸಿಕೊಂಡು ದೇಹಾರೋಗ್ಯವನ್ನು ಕಾಪಾಡಿಕೊಳ್ಳಬೇಕು. ಭಾಷೆಯು ಸುಲಭವಾಗಿದೆ. ಸರ್ವ ಸಂಗ್ರಾಹ್ಯ ಪುಸ್ತಿಕೆಯಿದು.

ಮಕ್ಕಳೇ ದೇವರು

ಲೇಖಕರು, ಜಿ. ಸದಾಶಿವಯ್ಯ, ಪ್ರಕಾಶಕರು, ಶ್ರೀ ದತ್ತರಾಜ ಪ್ರಕಟನ ಮಂದಿರ, ಚಾಮರಾಜ ಪೇಟೆ, ಬೆಂಗಳೂರು ನಗರ. ಪುಟಗಳು ೧೪, ಬೆಲೆ ೪ಆಣೆ.

ಇದೊಂದು ಚಿಕ್ಕ ದೃಶ್ಯ. ಬಹು ದಿನಗಳ ಹಿಂದೆ ಬೆಂಗಳೂರಿನ ದೇಶೀಯ ವಿದ್ಯಾಶಾಲೆಯ ವಾರ್ಷಿಕೋತ್ಸವದ ಕಾಲಕ್ಕೆ ಇದು ಅಭಿನಯಿಸಲ್ಪಟ್ಟಿತ್ತು. ಸದಾಶಿವಯ್ಯನವರು ಮಕ್ಕಳ ಆಟಕ್ಕೆ ತಕ್ಕ ನಾಟಕ ಬರೆವಲ್ಲಿ ಪ್ರಖ್ಯಾತರಾಗಿದ್ದಾರೆ. ಇದೂ ಸೊಗಸಾಗಿದೆ.

ವನಿತಾ ಗೀತ ಭಾಂಡಾರ

ಲೇಖಕರು ಆತ್ಮಾರಾಮ, ಪ್ರಕಾಶಕರು ಆತ್ಮಾರಾಮ, ಅಮ್ಮನಕ್ಕಿ, ಪರಮಾನಂದಮಠ ಹೀರೇಹಳ್ಳಿ ಶಿರಸಿ ಪುಟಗಳು ೯೪+೨೦ ಬೆಲೆ ೧ ರೂಪಾಯಿ

ಇದರಲ್ಲಿ ೧೫೫ ಹಾಡುಗಳಿವೆ. ಹೆಣ್ಣುಮಕ್ಕಳು ಮುಖಪಾಠ ಮಾಡಿಕೊಳ್ಳಬೇಕೆಂದು ಈ ಹಾಡುಗಳನ್ನು ಬರೆದ ಆತ್ಮಾರಾಮರು ಹಾರೈಸಿದ್ದಾರೆ. ಬಾಸಿಗವಿಟ್ಟ ಹಾಡು, ಸೋಸಿಲಳೆದ ಹಾಡು, ಉಡುಗೆರೆ ಜೋಡಿಸಿದ ಹಾಡು, ಹೆಸೊಪ್ಪಿಸಿದ ಹಾಡು ಇವೇ ಮೊದಲಾದವು ಹೆಂಗಳಿಗೆ ಆಯಾ ಪ್ರಸಂಗಗಳಲ್ಲಿ ತುಂಬ ಪ್ರಯೋಜನಕಾರಿಯಾಗುವ ಹಾಗಿವೆ. ಮೌಂಜಿಬಂಧನ ಪ್ರಕರಣ ವಿವಾಹ ಪ್ರಕರಣ, ನಾಗವಲ್ಲಿ, ಗೃಹಪ್ರವೇಶ, ಶೋಧನಪ್ರಸ್ತ ಎಂದು ಪಾಂಚಾಗಿ ವಿಭಾಗಗಳನ್ನು ಕಲ್ಪಿಸಿ ಅವಕ್ಕೆ ತಕ್ಕಂತೆ ಹಾಡುಗಳನ್ನು ಸಂಗ್ರಹಿಸಲಾಗಿದೆ. ಪ್ರತಿ ಹಾಡಿಗೂ ಘಾಟಿಗಾಗಿ ಒಂದು ಚರಣವನ್ನು ಉಲ್ಲೇಖಿಸಲಾಗಿದೆ. ಈ ಅಜ್ಞಾತ ಹಾಡನ್ನು ಎಲ್ಲರೂ ಬಲ್ಲರೆಂದು ಗ್ರಹಿಸಲಾಗುವದಕ್ಕಿಂತ ರಾಗತಾಳಗಳನ್ನು ಸೂಚಿಸಿದ್ದರೆ ಹಾಡುವವರಿಗೆ ಅನುಕೂಲವಾಗುತಿತ್ತು.

I Lived with Gandhi

By LOUIS FISCHER. Publishers, International Book House Ltd. Ash Lane, Mahatma Gandhi Road Bombay. Pages 8. Price Re. 1/8

ಲೂಯಿಫಿಶರರು ವಿಖ್ಯಾತ ಲೇಖಕರು. ಈ ಚಿಕ್ಕ ಲೇಖನದಲ್ಲಿ ಗಾಂಧೀಜಿಯ ಬಗ್ಗೆ ಸ್ವಾನುಭವದ ಮಾತುಗಳಿವೆ. ಬಳಸಿದ ಕಾಗದ ಅತ್ಯುತ್ತಮವಿದ್ದು ೧೨ ಒಳ್ಳೆಯ ಚಿತ್ರಗಳಿವೆ. ಇದಕ್ಕೆ ಇಟ್ಟಿರುವ ಬೆಲೆ ಬಹಳ ಭಾರವಾದದ್ದೆಂದು ಹೇಳದಿರಲಾರೆವು.

Growing Our Food

(Government of Bombay)

Obtainable from, The superintendent, Govt Printing and Stationery. Bombay.

Pages 30, Price 3 Ans,

ಸರಿಯಾಗಿ ಹೇಗೆ ಆಹಾರವನ್ನು ಬೆಳೆಯಬೇಕೆಂಬ ಬಗ್ಗೆ ಮುಂಬಯಿ ಸರಕಾರದವರು ಈ ಚಿಕ್ಕ ಪುಸ್ತಕ ಪ್ರಕಟಿಸಿದ್ದಾರೆ. ಗೊಬ್ಬರ, ನೀರಾವರಿ, ಬೀಜ, ಇವೇ ಮೊದಲಾದ ವಿಷಯಗಳನ್ನು ಕುರಿತ ೧೦ ಪ್ರಕರಣಗಳಿವೆ. ಸರಕಾರದ ಒಕ್ಕಲತನದ ತಜ್ಞರು ಅವರ ಅನುಭವವನ್ನು ಜನಸಾಮಾನ್ಯರಿಗೆಲ್ಲ ಈ ಮೂಲಕ ಹಂಚಿದ್ದಾರೆ. ರೈತರು ಇದರ ಪ್ರಯೋಜನ ಪಡೆದು ಅಧಿಕ ಆಹಾರೋತ್ಪಾದನ ಮಾಡಬೇಕೆಂದು ಸೂಚಿಸುತ್ತೇವೆ.

ವಚನ ಸಂಗೀತ ಸುಧಾ

ಲೇಖಕರು, ಜಿ. ಎಸ್. ಜುಕ್ತಿಮಠ, ಗಾಯನ ಅಧ್ಯಾಪಕರು, ವಿಜಾಪುರ. ಪುಟಗಳು ४೧, ಬೆಲೆ ೧೨ಆಣೆ.

ಇದರಲ್ಲಿ ೧೫ ವಚನಗಳಿಗೆ ಸ್ವರಲಿಪಿ ಹಾಕಿ ಪ್ರಕಟಿಸಲಾಗಿದೆ. ವಚನಗಳನ್ನು ಹಾಡಿ ಹೇಳುವದು ಇತ್ತೀಚೆಗೆ ಹೆಚ್ಚು ಬಳಕೆಗೆ ಬರಹತ್ತಿದೆ. ಈ ಪುಸ್ತಕವು ಹಾಡುಗಾರರಿಗೂ ಶಾಲೆಯ ಹುಡುಗರಿಗೂ ಉಪಯುಕ್ತವಾಗಿದೆ.

ಜೈಭಾರತ ಗೀತೆಗಳು

ಪ್ರಕಾಶಕರು, ವಿಚಾರ ಸಾಹಿತ್ಯ, ಲಿಮಿಟೆಡ್ ಬೆಂಗಳೂರ ಸಿಟಿ. ಪುಟಗಳು ೫೨, ಬೆಲೆ ೮ ಆಣೆ.

ಇದು ದ್ವಿತೀಯ ಮುದ್ರಣ. ಇದರಲ್ಲಿ ಸುಪ್ರಸಿದ್ಧ ಕವಿಗಳು ಬರೆದ ४೪ ರಾಷ್ಟ್ರೀಯ ಗೀತೆಗಳಿವೆ. ಸರ್ವ ಸಂಗ್ರಾಹ್ಯವಾಗಿದೆ.

ಮೈಸೂರು ರಾಜ್ಯಾಂಗ ಹೇಗೆ ರೂಪುಗೊಳ್ಳಬೇಕು?

ಲೇಖಕರು, ಗ. ಸ. ಹಾಲಪ್ಪ, ಎಂ. ಎ. ಮೈಸೂರು ವಿಶ್ವವಿದ್ಯಾಲಯ. ಪ್ರಕಾಶಕರು ಎಂ. ಸಿ. ಮಹದೇವಸ್ವಾಮಿ, ತ್ಯಾಗರಾಜ ರಸ್ತೆ ಮೈಸೂರು. ಪುಟಗಳು ೫೧, ಬೆಲೆ ೮ ಆಣೆ.

ರಾಜ್ಯಾಂಗರಚನೆಯ ಈ ದಿನಗಳಲ್ಲಿ ಈ ಬಗೆಯಾಗಿ ವಿವಿಧ ದೃಷ್ಟಿಕೋನದಿಂದ ವಿಚಾರಿಸಿ ವಿವೇಚನೆಮಾಡುವ ಪ್ರಬಂಧಗಳ ಅಗತ್ಯ ಬಹಳವಾಗಿದೆ. ಈ ಚಿಕ್ಕ ಪುಸ್ತಕವನ್ನು ರಾಜ್ಯಾಂಗ ರಚನೆಯಲ್ಲಿ ಆಸಕ್ತಿಯುಳ್ಳವರೆಲ್ಲ ಸ್ವಾಗತಿಸುವರೆಂದು ಆಶಿಸುತ್ತೇವೆ.

ಪ್ರಗತಿ (ರಾಷ್ಟ್ರೀಯ ವಾರಪತ್ರಿಕೆ)

ಚಾಮರಾಜಪೇಟೆ ಬೆಂಗಳೂರ ನಗರ. ಸಂಪಾದಕರು, ಎಂ. ಎಸ್. ಭಾರದ್ವಾಜ ಬಿ. ಎ. ವಾರ್ಷಿಕ ಚಂದಾ ३॥ರೂ. ಬಿಡಿ ಸಂಚಿಕೆ ೧ ಆಣೆ. ಪುಟಗಳು ಡೆಮಿ ಒಂದುನಾಲ್ಕಾಂಶ ೮

ಇದು ಮೊದಲನೆ ಸಂಪುಟದ ಮೊದಲನೆ ಸಂಚಿಕೆ. ಇದರಲ್ಲಿ ರಾಜ್ಯಾಂಗ ರಚನೆಗೆ ಇರುವ ತೊಡಕುಗಳು, ಬೇಸಾಯದ ಭೂಮಿ ಚೂರು ಪಾರಾಗಬಾರದು, ಕುಸುಮಾ (ಜೀವನಚಿತ್ರ) ಪಾಕಿಸ್ತಾನ (ಒಂದು ಅನುಭವ) ಜಗದೀಶ್ವರನು ಒಬ್ಬನೇ (ಅಧ್ಯಾತ್ಮ) ಎಂಬಿವೇ ಮೊದಲಾದ ಲೇಖನಗಳಿವೆ. ಈ ಹೊಸ ಪತ್ರಿಕೆಯನ್ನು ಆದರದಿಂದ ಬರಮಾಡಿಕೊಳ್ಳುತ್ತೇವೆ.

ಮಹಾತ್ಮಾ ಗಾಂಧಿ (ಜ್ಞಾಪಕಪದ್ಯ ಸಂಗ್ರಹ)

ಬರೆದವರು ಡಿ. ವಿ. ಜಿ. ಪ್ರಕಾಶಕರು, ಕಾರ್ಯದರ್ಶಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಪುವ್ಯಾಸಂಗಗೋಷ್ಠಿ, ಬಸವನಗುಡಿ, ಬೆಂಗಳೂರು ಪುಟ ೧೪, ಬೆಲೆ ೨ಆಣೆ.

ಮಹಾತ್ಮಾ ಗಾಂಧಿಯವರನ್ನು ನೆನೆದು ಬರೆದ ಈ ಪದ್ಯಗಳು ಕನ್ನಡನಾಡಿನ ಹೆಸರಾಂತ ಕವಿ ಡಿ. ವಿ. ಜಿ. ಯವರಿಂದ ಬಂದಿವೆಯೆಂದ ಮೇಲೆ ಕೇಳುವದೇನು? 'ಹಿಡಿವೆನೇನದುವೆ ತಿರುಳ್, ನುಡಿವೆನೇನದುವೆ ಹುರುಳ್' ಎಂಬ ಪ್ರಾಸಾದಿಕ ಕವಿಗಳ ಮಾಲಿಕೆಗೆ ಸೇರಿದವರು ಇವರು. ಇವರ ಈ ಪದ್ಯಗಳು ಎಲ್ಲರ ಬಾಯಲ್ಲಿಯೂ ಹೊರಳಲು ಗೊಡಲಿ.

ನಾಡ—ನುಡಿ (ಭಾಷಣ ಸಂಗ್ರಹ)

ಭಾಷಣಕಾರರು: ಪ್ರೊ. ರಾ. ಯ. ಧಾರವಾಡಕರ, ಪ್ರೊ. ವೈದೇಹಿ ಚಂಬಳ, ಪ್ರೊ. ರಂ. ಶ್ರೀ ಮುಗಳಿ, ಪ್ರೊ. ದ ರಾ. ಬೇಂದ್ರೆ, ಪ್ರೊ ಕೆ. ಎಸ್. ಸನದೂರ, ಶ್ರೀ. ಎನ್. ಕೆ. ಕುಲಕರ್ಣಿ, ಶ್ರೀ. ಶಂ. ಬಾ. ಜೋಶಿ, ಪ್ರಕಾಶಕರು ನಾಡಹಬ್ಬ ಉತ್ಸವ ಸಮಿತಿ, ಸರ್ಕಾರಿ ಹಾಯಸ್ಕೂಲ, ಬಾಗಿಲಕೋಟೆ, ಪುಟ ೬೭, ಬೆಲೆ ೧ ರೂ.

ಸಂಗ್ರಹದಲ್ಲಿ ಅನುಕ್ರಮವಾಗಿ, ಇಂದಿನ ಕಾವ್ಯದ ಹಿಲವುಗಳು, ವೃತ್ತಪತ್ರಿಕೆಗಳು ಮತ್ತು ಜನಮತ, ಏಕೀಕರಣ ಮತ್ತು ಗಡಿಯ ಪ್ರಶ್ನೆ ಏಕೀಕರಣದ ಎರಡು ಸೂತ್ರಗಳು, ವಿಜ್ಞಾನದ ಮಹತಿ, ರಂಗಭೂಮಿ ಮತ್ತು ತ್ರಿಕಾಲ ಜ್ಞಾನದ ಶಕ್ಯಾಶಕ್ಯತೆ ಎಂಬ ೭ ಭಾಷಣಗಳಿವೆ. ಇವನ್ನು ಅವಲೋಕಿಸಿದರೆ ಈ ಸಂಗ್ರಹಕ್ಕೆ 'ನಾಡ-ನುಡಿ' ಎಂಬ ಅನ್ವರ್ಥವಾದ ಹೆಸರಿಟ್ಟಂತೆ ತೋರುತ್ತದೆ. ಇಷ್ಟರಮೇಲೆ ಅದರಲ್ಲಿರುವ ನುಡಿಸೊಬಗನ್ನು ನೋಡಹೋದರೆ ವಿವಿಧ ಪ್ರಪಂಚವೇ ಕಣ್ಣಿಗೆದುರಾಗುವುದು. ಶ್ರೀ. ಬೇಂದ್ರೆಯವರ ಮಾತನ್ನು "ಅಡಿದಂತೆ" ಅಚ್ಚು ಹಾಕಿಸಿದ್ದು ಕನ್ನಡಕ್ಕೂ ಭಾಷಣಕಾರರಿಗೂ ಮಂಗಳಾರತಿ ಎತ್ತಿದಂತಾಗಿದೆ. ಇದಲ್ಲದೆ ಶ್ರೀ. ಎನ್. ಕೆ. ಕುಲಕರ್ಣಿಯವರ ರಂಗಭೂಮಿಯ ಜ್ಞಾನ, ಭಾಷಣ ಶೈಲಿಯ ಗಾಂಭೀರ್ಯ, ಶಬ್ದವ್ಯುತ್ಪತ್ತಿ ಇವುಗಳನ್ನವಲೋಕಿಸಿದರೆ ಸಂಗ್ರಹದ ಉಳಿದ ಭಾಷಣಗಳ ಮಾಲೆಯಲ್ಲಿ ಇದೊಂದು ನಿರ್ಗಂಧ ಕುಸುಮವಾಗಿ ತೋರುತ್ತದೆ. ಮೊದಲನೆಯ, ೩ನೆಯ ಮತ್ತು ೭ನೆಯ ಭಾಷಣಗಳು ವಿಚಾರ ಪರಿಪ್ಲುತವಾಗಿ ನಾಡಹಬ್ಬದ ಹಿರಿಮೆಗೆ ಒಪ್ಪುವಂತಿವೆ. ಹ್ಯಾಸ್ಕೂಲಿನವರು ಮುಂದೆಯೂ ಯಥಾಪ್ರಕಾರ ಉತ್ತಮ ಭಾಷಣಗಳನ್ನು ಪ್ರಕಾಶಿಸಲಿ.

ಮುಂದಾಳುಗಳಿಗೊಂದು ಮುಂದಾಳು

(ಬರೆದವರು — ಅಜ್ಞಾತ ಬಂಟ)

ಮುಂದಾಳಾಗುವದೆಂದರೆ ಬಹು ಜನರಿಗೆ ಇಂದು— ಅಗಸ್ಟ ಹದಿನೈದರ ನಂತರ – ಬಾಯಿ ನೀರೊಡೆಯುವ ಮಾತಾಗಿದೆ. ಮುಂದಾಳುಗಳಿಗೊಮ್ಮೊಮ್ಮೆ ತಲೆಯೊಡೆಯುವದೂ ಉಂಟು. ಅನುಗಾಲವೂ ಕೊರಳಿಗೆ ಹೂಮಾಲೆಯಾದರೆ, ಆಗಾಗ್ಗೆ ತಲೆಗೆ ಕಲ್ಲಿನೇಟಾದರೂ ಬೇಡವೆ? ಹಲವು ಮುಂದಾಳುಗಳಿಗೆ ಈ ಅಪಾಯವೆ ಇಲ್ಲ. ತಲೆ ಇದ್ದವರಿಗೆ ಮಾತ್ರ ತಾನೇ, ವಹಿಸಿಕೊಳ್ಳುವ ಭಯ. ಮುಂದಾಳುಗಳ ಗುಂಪಿನಲ್ಲಿ ಮುಂದಾಳಾಗುವದು ಅಷ್ಟೇನೂ ಕಷ್ಟದ ಕೆಲಸವಲ್ಲ. ಮುಖ್ಯವಾಗಿ ಈ ಕೆಳಗಿನ ಅಂಶಗಳನ್ನು ನೆನಪಿನಲ್ಲಿಟ್ಟರೆ ಮುಂದಾಳು ಯಾರೂ ಆಗಬಹುದು.

೧. ಸಭೆಯಲ್ಲಿ ಮಾತನಾಡುವಾಗ ಯಾರನ್ನೂ ಅಧ್ಯಕ್ಷರನ್ನಾಗಿ ಕೂಡಿಸಕೂಡದು. ಒಂದು ವೇಳೆ ಒಂದು ಅಧ್ಯಕ್ಷ ಪ್ರಾಣಿ ಇರಲೇಬೇಕಾದರೆ, ಸ್ಫೂರ್ತಿ ತೀಳಿರಿಮೆಯುಳ್ಳದುದನ್ನೇ ಆರಿಸಿ, ಕೊನೆಗೆ ಅಧ್ಯಕ್ಷರ ಅಂತ್ಯ ಭಾಷಣವನ್ನಿಟ್ಟು, ಅದಕ್ಕೆ ಸಮಯ ದೊರೆಯದಂತೆ ಮಾಡತಕ್ಕದ್ದು.

೨. ಸರಿಯಾದ ಸಮಯಕ್ಕೆ ಸಭೆಗೆ ಬರಕೂಡದು. ಸೇರಿದವರಿಗೆ ಬೇಸರವಾಗುವಷ್ಟು ಕಾಯಿಸಿ, ಅವರು ಏಳುವ ಹೊತ್ತಿಗೆ ಅವಸರದಿಂದ ಸಭೆಯಲ್ಲಿ ಪ್ರವೇಶಿಸಬೇಕು.

೩. ತನ್ನ ಭಾಷಣವು ಮುಗಿದ ತಕ್ಷಣವೇ ಎದ್ದು ಹೊರಡಬೇಕು. ಬೇರೆಯವರ ಉಪನ್ಯಾಸಗಳನ್ನು ಕೇಳುತ್ತ ಕೂಡುವದು ಮುಂದಾಳುತನಕ್ಕೇ ಅಗೌರವ.

೪. ಸಭೆಯು ವಿಸರ್ಜನೆಯಾಗುವ ಮೊದಲೆ ತೆರಳಿದುದಕ್ಕೆ ಕ್ಷಮೆಯನ್ನು ಸ್ವತಃ ಕೇಳಕೂಡದು. "ಕಾರ್ಯಬಾಹುಳ್ಯದ ಮೂಲಕ ಶ್ರೀ..... ಯವರು ಈಗಲೇ ಹೊರಡಬೇಕಾಗಿದೆ" ಎಂದು ಬೇರೆ ತರರ ಬಾಯಿಂದ ಅಡಿಸಬೇಕು.

೫. ತನ್ನ ಮಾತೃಭಾಷೆಯಲ್ಲಿ ಉಪನ್ಯಾಸ ಮಾಡುವದಂತೂ ಶುದ್ಧ ದಡ್ಡತನ. ಸಭೆಗೆ ಬಂದ ಬಹುಜನರ ಭಾಷೆಯೂ ಕೂಡದು. "ನನ್ನದೂ ನಿಮ್ಮದೂ ಕೂಡ ಅಲ್ಲದ ಬೇರೆ ಭಾಷೆಯಲ್ಲಿ (ಇಂಗ್ಲೀಷಿನಲ್ಲಿ) ಮಾತನಾಡುವ ದುಸ್ಥಿತಿಯು ಬಂದಿರುವುದು ತುಂಬ ವಿಷಾದಕರವೆಂದು" ಹೇಳಿ ಭಾಷಣವನ್ನು ಪ್ರಾರಂಭಿಸುವದು ಉತ್ತಮ.

೬. ಬಹು ಜಾಣನಲ್ಲದವನೊಬ್ಬನನ್ನು ಭಾಷಾಂತರ ಮಾಡಲು ನಿಲ್ಲಿಸಬೇಕು. ಆ ವ್ಯಕ್ತಿಯು ಅರೆಬರೆಯೂ ಕೀಳರಿಮೆಯಿಂದ ತುಂಬಿ ಹುಳುಕಿ, ಸರಿಯಾದ ಶಬ್ದಗಳನ್ನು ಹುಡುಕಲು ಭಯದಿಂದ ಕಂಪಿತನಾಗುತ್ತಿರಬೇಕು. ಹಿರಿ ಸಂಗೀತಗಾರರು ತಾಳತಪ್ಪುವ ತಬಲದವನನ್ನು ಹಿಂದೆ ತರುವದರಲ್ಲಿಯೂ ಇದೇ ಗುಟ್ಟು. ಅವನ ತರ್ಜುಮೆಯಲ್ಲಿ ಆಗಾಗ್ಗೆ ತಪ್ಪು ಹಿಡಿದಂತೆ ಮಾಡಿ ತಿದ್ದಿದಂತೆ ತೋರಿಸಬೇಕು.

೭. ಕಡೆಗೊಮ್ಮೆ ಪುರಜನರ ಭಾಷೆಯಲ್ಲಿ ತಪ್ಪು ಎರಡು ಮಾತುಗಳನ್ನಾಡಬೇಕು. ಆ ವಾಕ್ಯವನ್ನು ಬೇರೆ ಭಾಷೆಯ ಅಕ್ಷರಗಳಲ್ಲಿ ಬರೆದುಕೊಂಡು ತಪ್ಪು ತಪ್ಪು ಓದಬೇಕು. (ಸಭೆಯಲ್ಲಿ ನಗೆ) ಎಂದು ವೃತ್ತಪತ್ರಿಕೆಗಳಲ್ಲಿ ಬರುತ್ತದೆ.

೮. ಮಾತಿಗೊಮ್ಮೆ 'ನಾನು' 'ನನಗೆ' 'ನನ್ನ ಅಭಿಪ್ರಾಯ' ನನ್ನ 'ಅಭಿಮತ' ಎಂಬ ಶಬ್ದಗಳನ್ನು ಪ್ರಯೋಗಿಸಬೇಕು ಇಲ್ಲದಿದ್ದರೆ ಶಾತ್ಯವೆಷ್ಟೂ ಬೆಳೆಯಲಾರದು.

೯. ಒಂದು ಬಾರಿ ಕರಿ ನೀರಿನ ಶಿಕ್ಷೆಯೂ ಗಿದ್ದರೆ ಸಾಕು "ನಾನು ವಿದೇಶ ಪ್ರವಾಸ ಮಾಡುತ್ತಿದ್ದಾಗ....." ಎಂದು ಹೇಳಿಕೊಳ್ಳಬಹುದು.

೧೦. ಮನೆಯ ಪಕ್ಕೆಯಲ್ಲಿ ಪರಿಷತ್ತುಗಳಾದರೂ ಅನಧ್ಯಕ್ಷರಾಗಿ ಹೋಗಕೂಡದು. ದೊಡ್ಡಸ್ತಿಕೆಯ ಆಶೀರ್ವಾದಗಳಿಂದ ಸಂದೇಶವನ್ನು ಮಾತ್ರ ಕಳಿಸಬೇಕು.

ಇದುರಿನಲ್ಲಿ ಬಂದರೆ ಯಾರ ಕಣ್ಣಿಗೂ ಬೀಳದಿದ್ದರೂ ಸಂದೇಶವನ್ನು ಕಳಿಸಿದರೆ ಎಲ್ಲರ ಕಿವಿಯಲ್ಲೂ ಬಿದ್ದಾರು.

೧೧. ಭಾಷಣದಲ್ಲಿ ಪರದೇಶೀಯರ ಹೆಸರುಗಳನ್ನು ಮಂತ್ರದಂತೆ ಉಚ್ಚರಿಸಬೇಕು. ಹೋಟೆಲ ಮಾಣಿಯು ತಿಂಡಿಯ ದಿನಸುಗಳನ್ನು ಹೇಳುವಂತೆ, ಒಂದೇ ಉಸುರಿನಲ್ಲಿ ನೀವೂ ವಿಚಿನಿಸ್ಕಿ, ಮಾಯಾಕೋವಿಸ್ಕಿ, ಸ್ಪಾನಿಸ್ಲವಾಸ್ಕಿ, ಟ್ರಾಟಸ್ಕಿ, ವಿಕ್ಕಿ" ಎಂದು ನೀವು ನುಡಿಯುತ್ತಿದ್ದರೆ ಸಭಿಕರೆಲ್ಲರೂ ಬಾಯಿಬಿಟ್ಟು ಕೇಳುತ್ತಾರೆ.

೧೨. ಯಾರಾದರೂ ದೊಡ್ಡೊಬ್ಬ ಮುಖಂಡರನ್ನು—ನೆಹರೂ ಪಟೇಲರಂತಹರನ್ನು ಸಿಕ್ಕಾಬಟ್ಟೆ ಟೀಕಿಸಿ ಬೈಯಬೇಕು. ಇದು ಮುಂದಾಳಾಗುವ ಮಹಾಮಂತ್ರ.

ಇಷ್ಟೆಲ್ಲವನ್ನು ಅನುಸರಿಯಾಗಿ ನೀವು ಮುಂದಾಳುಗಳ ಮಧ್ಯೆ ಮುಂದಾಳಾಗದಿದ್ದರೆ, ಹಿಂದಾಳುಗಳು ಮುಂದಾಳುಗಳಲ್ಲ, ಮುಂದಾಳಾಗಲು ಆಂದೋಲನ ಮಾಡಿದ ಮುಂದಾಳಾದ ನೀವೇ ಹಿಂದಾಳಾಗಿ ಎಂದಿಗೂ ಉಳಿದಿರೆಂದು ಉಳಿದ ಸಮಯವನ್ನು ಕಳೆಯತಕ್ಕದ್ದು.

(ಮಡಿಕೇರಿ ಕರ್ನಾಟಕ ಸೇವಾಸಂಘದ ಕೈ ಬರೆಹದ 'ಸೇವಾ' ಪತ್ರಿಕೆಯಿಂದ)

ವಿಶ್ವರೂಪ ದರ್ಶನ

ಅನಂತ ಕೋಟಿ ಜನ್ಮಗಳಲ್ಲಿ ತಪೋಯಜ್ಞ ದಾನಾದಿಗಳಿಂದ ಭಾವಶುದ್ಧಿಯನ್ನು ಪಡೆದು, ಗುರುಕೃಪೆ ಹರಿಕೃಪೆಗಳಿಗೆ ಅರ್ಹರಾಗಿ ಜ್ಞಾನ ಭಕ್ತಿ ವೈರಾಗ್ಯಗಳನ್ನು ಸಾಧಿಸಿಕೊಂಡು ಕರ್ಮ ಭಕ್ತಿ, ರಾಜ, ಜ್ಞಾನ ಯೋಗಗಳ ಮೂಲಕ ತತ್ವ ಸಾಕ್ಷಾತ್ಕಾರ ಮಾಡಿಕೊಳ್ಳದೆ ಮೋಕ್ಷ ಸಿಗದು ಎಂದು ಹಿರಿಯರು ಹೇಳುತ್ತ ಬಂದುದುಂಟು; ಕಿರಿಯರು ನಂಬಿದ್ದೂ ಉಂಟು. ಆದರೀಗ ಡಾ. ಎರಿಕ್ ಗಟ್‌ಮನ್ ಎಂಬವರು ಔಷಧವೊಂದನ್ನು ೬೦ ಜನರ ಮೇಲೆ ಪ್ರಯೋಗ ಮಾಡಿ ಅವರಿಗೆ ವಿಶ್ವರೂಪ ದರ್ಶನ ಮಾಡಿಸಿಕೊಟ್ಟಿದ್ದಾರೆಂದು ಎಡ್ವರ್ಡ ಪೊಡೊಲ್‌ಸ್ಕಿ ಬರೆಯುತ್ತಾನೆ.

'ಮನಸ್ಸಿನಂತೆ ಮಹಾದೇವ' 'ಯದ್ಭಾವಸ್ತದ್ಭವತಿ' 'ಮನ ಏವ ಮನುಷ್ಯಾಣಾಂ....' '....ಸಿದ್ಧಿರ್ಭವತಿ ತಾದೃಶೀ' ಇತ್ಯಾದಿ ವಾಕ್ಯಗಳಿಂದ ಮಾನಸಿಕ ಪ್ರತ್ಯಕ್ಷಕ್ಕೆ ಇಚ್ಛಾಜನ್ಯ ಕಲ್ಪನೆಯೇ ಕಾರಣ. ಆ ಕಲ್ಪನೆ ಎಚ್ಚತ್ತ ಮನಸ್ಸಿನ ಪ್ರಯತ್ನದಿಂದ ಹುಟ್ಟಬಹುದು, ಇಲ್ಲವೆ ಸುಪ್ತ ಚೇತನದ ಪ್ರಚೋದನದಿಂದ ಉಂಟಾಗಬಹುದು. ಮೆಸ್ಮರಿಜಂ, ಭೂತಾವೇಶ, ಮಹಾತ್ಮ ಪ್ರಭಾವ, ಭಕ್ತಿಯೋಗ, ಹುಚ್ಚು, ಮೌಢ್ಯ, ಅತಿಬುದ್ಧಿ, ಇತರ ಭೌತಿಕ ಕಾರಣಗಳು ಇರಬಹುದು. ಇವುಗಳಿಂದ ಸತ್ಯ ಸೃಷ್ಟಿ ಅತಿಸತ್ಯ ಇಲ್ಲವೆ ಅಸತ್ಯವಾಗಿ ಕಾಣುವುದು ಅನುಭವಸಿದ್ಧವಾದುದು. ಇದೇ ಮೇರೆಗೆ ಮೇಲೆ ಹೇಳಿದ ಔಷಧವನ್ನು ಕುಡಿದರೆ ಇಲ್ಲವೆ ರಕ್ತಕ್ಕೆ ಚುಚ್ಚಿಕೊಂಡರೆ ಜಗದ್ವಸ್ತುಗಳ ಅಸಾಮಾನ್ಯವಾದ ದರ್ಶನ ಉಂಟಾಗುವುದು ನಿದರ್ಶನಕ್ಕೆ ಬಂದಿದೆ. ೬೦ ಜನರ ಅನುಭವ ೬೦ ವಿಧವಾದುದಾಗಿದೆ. ಒಬ್ಬನಿಗೆ ನೀರು ಲಿಕ್ವಿಡ್ ಪ್ಯಾರಾಫಿನ್ನಿನ ವಾಸನೆಯುಳ್ಳಂತೆ ತೋರಿತು. ಅವರಿವರು ಮಾತಾಡಿದರೆ ಅದು ಕುಂಭಕರ್ಣನ ಸ್ವರದಂತೆ ಕೇಳಿಸಿತು. ತನ್ನ ಕೈಯು ಉಳಿದ ಆಕಾಶದೊಡನೆ ಒಂದಾಗಿ ಬೆಸೆದುಕೊಂಡಂತೆ ಕಂಡಿತು; ಅಖಂಡವಾಗಿ ಅದ್ವೈತವಾಗಿ ತೋರಿತು!

ಮತ್ತೊಬ್ಬನಿಗೆ ಎಲ್ಲ ವಸ್ತುಗಳೂ ಅರ್ಧ ದ್ರವ ರೂಪಕ್ಕಿಳಿದಂತೆ ಎನಿಸಿತ; ಜಗತ್ತು ಚಿತ್ರ ವಿಚಿತ್ರವೂ ಸದಾ (ನಿಮಿಷನಿಮಿಷಕ್ಕೆ) ಪರಿವರ್ತಿಸುವಂತೆಯೂ ತೋರಿತು. ವಸ್ತುಗಳು ಸಂಖ್ಯಾಂತರ ವರ್ಣಾಂತರ, ರೂಪಾಂತರ ಹೊಂದುತ್ತಿರುವಂತೆ ನಿಮಿಷಾರ್ಧದಲ್ಲಿ ಭಾಸವಾಯಿತು. ಹೀಗೆ ಆ ೬೦ ಮಂದಿಗೆ ಕಾಣದ್ದೆಲ್ಲ ಕಂಡಿತು. ಕಂಡದ್ದು ಕಾಣದ ಹಾಗಾಯಿತು! ಬ್ರಹ್ಮಸತ್ಯ ಜಗನ್ಮಿಥ್ಯೆಯೆಂಬ ಶಾಂಕರ ದರ್ಶನ ಅವರಿಗೆ ಸಾಕ್ಷಾತ್ಕಾರವಾಯಿತೆಂದು ನಾವು ಇದರಿಂದ ಹೇಳಬಹುದೇ? ಪ್ರತ್ಯಕ್ಷವಲ್ಲದ್ದು ಪರೋಕ್ಷ; ಪರೋಕ್ಷವಲ್ಲ, ಆದರೆ ಪ್ರತ್ಯಕ್ಷಕ್ಕಿಂತಲೂ ಪ್ರತ್ಯಕ್ಷ— ಅದು ಅಪರೋಕ್ಷಾನುಭವ. ಅಂದರೆ ಜಗತ್ತು ಇದ್ದಂತೆ ಕಾಣಿಸದೆ ಸೂಕ್ಷ್ಮವಾದ, ನಿಜಕ್ಕೂ ನಿಜವಾದ ರೂಪದಲ್ಲಿ ಪ್ರತಿಭಾಸವಾಗುವುದೆಂದರ್ಥ. ಈ ಔಷಧ ಪ್ರಯೋಗದಿಂದ ಸತ್ಯಜ್ಞಾನವಾಗುವುದಾದರೆ ಯೋಗಾದಿ ಕಷ್ಟನಿಷ್ಠುರಮಾರ್ಗಗಳನ್ನು ಅನುಸರಿಸಿ ಬ್ರಹ್ಮಾನಂದ ಹೊಂದುವ ಪ್ರಯತ್ನವೇಕೆ? ಎಂದು ಸಾಮಾನ್ಯ ಉದಾಸೀನ ಮನಸ್ಕನು ಕೇಳದಿರನು. ಎಂದ ಮೇಲೆ ಪರೀಕ್ಷಿಸಿ ನೋಡಬೇಕಾಯಿತಲ್ಲವೆ? ಈ ಔಷಧ ಸಿಕ್ಕಿದರೆ, ಅದು ಸತ್ಫಲ ಕೊಡುವುದು ಹೌದಾದರೆ, ಜಗತ್ತಿನ ದಡ್ಡರೆಲ್ಲರೂ ಪ್ರಾತಿಭ ಇಲ್ಲವೆ ಯೌಗಿಕ ಚಕ್ಷುಸ್ಸನ್ನು ಸುಲಭವಾಗಿ ಪಡೆಯಬಹುದಲ್ಲವೆ? ನೋಡಿ, ನೋಡಿ!

\+ × ×

ನಿಶ್ಚಿಂತರ ನಾಡು

ಜಗತ್ತು ವಿಶಾಲವಾಗಿರುವಂತೆ ವಿವಿಧವಾಗಿಯೂ ಇದೆ. ಅದರಿಂದಲೇ ಯಾವ ಮಾತಾಡಿದರೂ 'ಎಲ್ಲ ಹಾಗೆ, ಎಲ್ಲ ಹೀಗೆ' ಎಂದರೆ ತರ್ಕ ವಿರುದ್ಧವಾಗುತ್ತದೆ. ಉತ್ತರ ಧ್ರುವ ಪ್ರದೇಶದ ಎಸ್ಕಿಮೋಗಳ ನಾಡು ಅಂತಹ ವಿಚಿತ್ರ ಭೂವಲಯವೆನಿಸಿದೆ. ಅಲ್ಲಿ ಕೋಳಿ ಮೊಟ್ಟೆಯನ್ನು ಕಲ್ಲಿನಂತೆ ಬೀಸಾಡಿದರೂ ಅದು ಒಡೆಯದು. ದ್ರವ ಪದಾರ್ಥಗಳನ್ನು ತುಂಬಿದ ಸೀಸೆಗಳನ್ನು ಬೆಚ್ಚನೆಯ (ಕಾಯಿಸಿದ) ಕೊಠಡಿಗಳಲ್ಲೇ ಇಡಬೇಕು, ಇಲ್ಲವಾದರೆ ಇದ್ದಕ್ಕಿದ್ದಂತೆಯೇ ಅವು ಸಿಡಿದು ಹಾರಹೋಗುವುವು. ಜನರು ಬಿಳಿಯ ಕರಡಿಯ ತುಪ್ಪಟದ ಇಜಾರುಗಳನ್ನು ಧರಿಸುತ್ತಾರೆ, ಹೆಂಗಸರು ನರಿಯ ಚರ್ಮದ ಸುಂದರವಾದ ಇಜಾರುಗಳನ್ನು ಹಾಕಿಕೊಳ್ಳುತ್ತಾರೆ. ಅವುಗಳ ಒಂದು ಕಾಲು ಬಿಳಿಯ ಚರ್ಮದ್ದು, ಇನ್ನೊಂದು ಕಪ್ಪಿನದು.

ವಿವಿಧ ಪ್ರಪಂಚ

ಊಟವಾತಗಳನ್ನು ಎಸ್ಕಿಮೋಗಳು ಬಹಳ ಶುಚಿ, ರುಚಿಯಾಗಿ ಇಟ್ಟಿರುತ್ತಾರೆಂದು ಡಾ. ಗಿಲ್ಬರ್ಗರು ಬರೆಯುತ್ತಾರೆ. ಹಕ್ಕಿಗಳನ್ನೂ ಇತರೆ ಬೃಹದಾಕಾರದ ಜಲಚರಗಳನ್ನೂ ಬೇಟೆಯಾಡಿ ಅವುಗಳ ಮಾಂಸವನ್ನು ಅವರು ಬಳಸುತ್ತಾರೆ.

ಮನೆಯೆಂದರೆ ಒಂದೇ ಕೋಣೆ. ಅವುಗಳು ಕಲ್ಲಿಂದ ಮತ್ತು ಮಂಜುಗಡ್ಡೆಯಿಂದ ನಿರ್ಮಿಸಲ್ಪಟ್ಟವು. ಆದರೆ ಅವು ಬಹಳ ಸ್ವಚ್ಛವಾಗಿರುತ್ತವೆ. ಇದನ್ನು ಕಂಡು ಶ್ರೀಮತಿ ಗಿಲ್ಬರ್ಗರಂತೂ ಜಗತ್ತಿನ ಇತರರಿಗಿಂತ ಎಸ್ಕಿಮೋಗಳೇ ಹೆಚ್ಚು ನಾಗರಿಕರೆಂದು ಉದ್ಗರಿಸಿದ್ದಾರೆ.

ಬೇಟೆಗಳಲ್ಲಿ ವ್ಹಾಲ್ರಸ್ ಮತ್ತು ಸೀಲ್ ಎಂಬ ಜಲಚರಗಳು ಬಹು ಮುಖ್ಯವಾದುವು. ಅವುಗಳನ್ನು ಹಿಡಿಯಲು ಬಹಳ ಜಾಣಚಕ್ಕತೆ ಬೇಕು. ಎಸ್ಕಿಮೋಗಳು ಅದರಲ್ಲಿ ಬಹಳ ನಿಪುಣತೆಯನ್ನು ಪ್ರದರ್ಶಿಸುತ್ತಾರೆ.



ಡಾ. ಗಿಲ್ಬರ್ಗರು ಹೋದಾಗ ಉತ್ಸಾಹದಿಂದ ಎದೆ ಪರೀಕ್ಷೆ ಮಾಡಿಸಿಕೊಳ್ಳಲು ಎದೆಚಾಚಿ ನಿಂತ ಎಸ್ಕಿಮೋ ಮಕ್ಕಳು!

ಈ ಜನರ ನಾಗರಿಕತೆಯ ಶ್ರೇಷ್ಠತೆಗೆ ಅವರ ಸತ್ಯಸಂಧತೆ ಮತ್ತು ಅಸ್ತೇಯ ಗುಣಗಳು ಕಿರೀಟಪ್ರಾಯವಾಗಿವೆ. ಅವರು ಕಲಹವನ್ನು ಅತಿಶಾಂತರೀತಿಯಿಂದ ಬಗೆಹರಿಸಿಕೊಳ್ಳುತ್ತಾರೆ. ಮತ್ತು ಅವರ ಕುಟುಂಬ ಜೀವನವು ಜಗತ್ತಿಗೇ ಒಂದು ಆದರ್ಶವಾಗಿದೆ.

ರೋಗರುಜೆಗಳು ಈ ಧ್ರುವವಾಸಿಗಳ ಹತ್ತಿರ ಸೋಂಕುವುದಿಲ್ಲ ಇವರು ಅರೋಗ ದೃಢಕಾಯರು, ಸದಾ ಉತ್ಸಾಹಿಗಳೂ ಪ್ರಸನ್ನರೂ ಆಗಿರುವರು. ಕಾಡುಪ್ರಾಣಿಗಳಷ್ಟು ನಿಸರ್ಗಸಹಜ ಜೀವನವೇ ಅದಕ್ಕೆ ಕಾರಣ. ಕ್ಷಯವೊಂದು ಅವರನ್ನು ಕೆಲವೊಮ್ಮೆ ಕಾಡಿಸುತ್ತದೆ.

ನಾಗರಿಕ ಜಗತ್ತು ಎಸ್ಕಿಮೋಗಳಿಂದ ನೈಸರ್ಗಿಕವೂ ಪ್ರಸನ್ನವೂ ಆದ ಜೀವನವನ್ನು ಕಲಿತುಕೊಳ್ಳಬೇಕಾಗಿದೆ. ನಾಗರಿಕರು ದಿನ ದಿನವೂ ತಾವೇ ಸೃಜಿಸಿಕೊಂಡ ಜಟಿಲ ಸಮಸ್ಯೆಗಳಲ್ಲಿ ತಲೆ ಹಾಕಿಕೊಂಡು ವೃಥಾ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿರುವುದನ್ನು ನೋಡಿ ಈ ನಿಶ್ಚಿಂತರನ್ನು ನೋಡಿದರೆ, ಕನಿಕರ ಮತ್ತು ಸಂತೋಷಗಳು ಏಕಕಾಲದಲ್ಲಿ ಉತ್ಪನ್ನವಾಗುವುವು. ಲಿಂಗ ಸಮಸ್ಯೆ, ಧರ್ಮ ಸಮಸ್ಯೆ, ಜಾತೀಯ ಸಮಸ್ಯೆಗಳಿಂದ ತಲೆ ಕೆಡಿಸಿಕೊಂಬ ಜನತೆ ಸ್ವಲ್ಪ ಧ್ರುವವಾಸಿಗಳತ್ತ ಕಣ್ತೆರೆದು ನೋಡಲಿ!

× × ×

ವಿಚಿತ್ರ ಸೃಷ್ಟಿ

ಒಂದು ರತ್ತಲು ಚಿನ್ನಕ್ಕಿಂತ ಒಂದು ರತ್ತಲು ಹಕ್ಕಿಯ ಪುಕ್ಕಗಳೇ ಹೆಚ್ಚು ತೂಕ ತೂಗುತ್ತದೆ!

ಕಾರಣ ಗೊತ್ತೇ?

ಪುಕ್ಕಗಳ ತೂಗುವಾಗ ರತ್ತಲಿಗೆ ೧೬ ಔನ್ಸಿನ ಕಲ್ಲನ್ನಿಡುತ್ತಾರೆ, ಚಿನ್ನ ತೂಗುವಾಗ ೧೨ ಔನ್ಸಿನ ಕಲ್ಲನ್ನಿಡುತ್ತಾರೆ!

\+ + +

'ಕಿಂಗ್ಸ್ ಇಂಗ್ಲಿಷ್' ಎಂದರೆ ಅತ್ಯುತ್ತಮವಾದ ಇಂಗ್ಲೀಷು ಭಾಷೆ ಎಂದು ಅರ್ಥ ವಿದೆ ಇಂಗ್ಲೆಂಡಿನ ರಾಜರೆಲ್ಲ ಅಷ್ಟು ಶುದ್ಧವಾದ ಇಂಗ್ಲೀಷು ಮಾತನ್ನು ಆಡುತ್ತಿರಬಹುದೆಂದು ಮೇಲಿನ ಮಾತಿನಿಂದ ಯಾರಾದರೂ ಊಹಿಸಬಹುದು

ಆದರೆ ವಸ್ತುಸ್ಥಿತಿ?

ಇಂಗ್ಲೆಂಡಿನ ೧ನೆಯ ಜಾರ್ಜ್‌ದೊರೆಗೆ ಇಂಗ್ಲೀಷು ಭಾಷೆಯ ಒಂದು ಶಬ್ದದ ಪರಿಚಯವೂ ಇದ್ದಿಲ್ಲ!

× + ×

ಅಪರಾಧಿಗಳು ಕೆಲವೊಮ್ಮೆ ಬೇರೆಯವರ ಹೊಣೆ ಕೊಟ್ಟು ಜೈಲಿನಿಂದ ಹೊರಗುಳಿವ ಸವಲತ್ತನ್ನು ಪಡೆಯುತ್ತಾರೆ. ಅಫೀಸುಗಳಲ್ಲಿ 'ಮೇಲಧಿಕಾರಿಗಾಗಿ' ಎಂದು ಕೆಳ ಅಧಿಕಾರಿ ಸಹಿಮಾಡಿ ವ್ಯವಹಾರ ನಡೆಸುತ್ತಾರೆ. ಇನ್ನೊಬ್ಬರಿಗೆ ಅಧಿಕಾರದ ಚೀಟಿ ಕೊಟ್ಟು ಅವರ ಮೂಲಕ ಮನಿ ಆರ್ಡರ್ ಮುಂತಾದ ಹಣ ಪಡೆಯುತ್ತೇವೆ.

ಆದರೆ ಜರ್ಮನಿಯಲ್ಲಿ?

೧೯ನೆಯ ಶತಮಾನದಲ್ಲಿ ರಾಜಕುಮಾರರೆಲ್ಲರಿಗೂ ಒಬ್ಬೊಬ್ಬ ಹುಡುಗನನ್ನು ಗೆಳೆಯನನ್ನಾಗಿ ಕೊಟ್ಟಿರುತ್ತಿದ್ದರು. ಅವನಿಗೆ ರಾಜಕುಮಾರನಿಗಿರುವ ಎಲ್ಲ ಸವಲತ್ತುಗಳನ್ನೂ ಕೊಡಲಾಗುತ್ತಿತ್ತು. ಆದರೆ ರಾಜಕುಮಾರ ತಪ್ಪುಮಾಡಿದಾಗಲೆಲ್ಲ ಆ ತಪ್ಪಿಗೆ ಕೊಟ್ಟ ಶಿಕ್ಷೆಯನ್ನು ಆ ಹುಡುಗ ಅನುಭವಿಸಬೇಕಾಗಿತ್ತು; ರಾಜಕುಮಾರನು ತನ್ನಬದಲು ಶಿಕ್ಷೆ ತೆಗೆದುಕೊಳ್ಳಲು ತನ್ನ ಗೆಳೆಯನಿಗೆ ಅಧಿಕಾರ ಪತ್ರ ಕೊಡುತ್ತಿದ್ದನು!

\+ + +

ಒಂದು ಮಳೆಗಾಲಿಯಲ್ಲಿ ಫ್ರಾನ್ಸ್ ದೇಶದ ಲಾಪ್ಲಾ ಎಂಬಲ್ಲಿ ಕುರಿಮಂದೆಯೊಂದರ ಮೇಲೆ ಸಿಡಿಲು ಬಡಿದಿತು. ಅವುಗಳಲ್ಲಿ ಬಹಳ ಕುರಿಗಳು ಮಡಿದವು.

ಯಾವ ಬಣ್ಣದವು?

ಮಂದೆಯಲ್ಲಿಯ ಪ್ರತಿಯೊಂದು ಕರಿಕುರಿಯೂ ಮರಣಕ್ಕೆ ತುತ್ತಾಯಿತು, ಆದರೆ ಬಿಳಿಕುರಿಗಳೆಲ್ಲವೂ ಜೀವಂತ ಉಳಿದಿದ್ದವು. ನೋಡಿದಿರಾ ನಿಸರ್ಗದ ಪಕ್ಷಪಾತ ಬುದ್ಧಿಯನ್ನು! ಅದರಿಂದಲೇ ಬಿಳಿಯರು ಬಣ್ಣದವರಿಗಿಂತ ಶ್ರೇಷ್ಠರೆಂದುಕೊಳ್ಳಲು ಕಲಿತಿದ್ದರೂ ಕಲಿತಿರಬಹುದಲ್ಲವೆ?

\+ + ×

ಅಮೇರಿಕೆಯಲ್ಲಿ ಭಾರತೀಯರು

ಭಾರತೀಯರ ವಿಷಯಕ್ಕೆ ಅಮೇರಿಕೆಯಲ್ಲಿ ಹಬ್ಬಿರುವ ಅಜ್ಞಾನ, ಅಪಜ್ಞಾನಗಳು ಆಶ್ಚರ್ಯಕರವಾಗಿವೆ. ಶ್ರೀ. ಮಹೇಶಚಂದ್ರ ಜುಗುರಾಮರು ತಮ್ಮ ಕೆಲ ಅನುಭವಗಳನ್ನು "ಸ್ಟೇಟ್ಸ್‌ಮನ್" (ಕಲಕತ್ತೆ) ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅವರು ನಿತ್ಯ ಸಂಜೆ ಫಲಾಹಾರಕ್ಕೆಂದು ಹೋಗುತಿದ್ದ ಅಂಗಡಿಯವನೊಬ್ಬನೊಡನೆ ಒಂದು ರಾತ್ರಿ ಹಿಂದೀ ಸಮಸ್ಯೆಗಳ ಚರ್ಚೆಗೆ ಬಿದ್ದರು. ಬುದ್ಧನಂಥ ದಾರ್ಶನಿಕರನ್ನೂ ಅಶೋಕನಂಥ ಚಕ್ರವರ್ತಿಗಳನ್ನೂ ಹಿಂದುಸ್ತಾನ ಹಡೆದಿದೆಯೆಂದು ಅವನಿಗೆ ಅವರು ತಿಳಿಸಿದರು. ಆದರೆ ಅದನ್ನು ಅವನು ನಂಬಲೇ ಇಲ್ಲ. ಸುಮ್ಮನೆ ಸ್ವದೇಶವನ್ನು ಅಟ್ಟಕ್ಕೇರಿಸಲು ಅವರು ಸುಳ್ಳು ಸುಳ್ಳೇ ಹೇಳುತಿದ್ದರೆಂದು ಆತ ಭಾವಿಸಿದ್ದ. "ಬಡಾಯಿ ಸಾಕು ಮಗೂ ಅಷ್ಟು ನನಗೂ ಗೊತ್ತಿದೆ ಬುದ್ಧ ಚೀನದವನು," ಎಂದನಾತ. ಅಮೇರಿಕೆಯಲ್ಲಿ ಜನಪ್ರಿಯವಾಗಿರುವ ಚೀನಿಯರು ಮಾಡಿ ಮಾರುವ ಬುದ್ಧನ ಪ್ರತೀಕಗಳ ಮೇಲಿಂದಲೇ ಅವನು ಬುದ್ಧನನ್ನು ತಿಳಿದಿದ್ದ. ಬುದ್ಧ ಭಾರತೀಯ, ಭಾರತೀಯರೇ ಚೀನದ ಮೇಲೆ ಸಾಂಸ್ಕೃತಿಕ ಪ್ರಭಾವ ಬೀರಿದ್ದರಲ್ಲದೆ ಹಿಂದೀಯರ ಮೇಲೆ ಚೀನೀಯರಲ್ಲವೆಂದು ಜುಗೇರಾಮರು ಹೇಳಿದರೆ ಕೇಳದೆ ಅವನು ಸಹನೆ ಕಳೆದುಕೊಂಡು "ಸಾಕು ಸಾಕು, ನಿನ್ನ ರೊಕ್ಕ ತೆಗೆ," ಎಂದು ಗದರಿಸಿ, ರೊಕ್ಕ ಒಳಗೆ ಹಾಕುತ್ತ, "ಅಬ್ಬಾ ಎಷ್ಟು ಧೈರ್ಯ! ಬುದ್ಧ ಚೀನೀಯನಲ್ಲಂತೆ!" ಎಂದು ಗೊಣಗುಟ್ಟಿದ.

ಅಮೇರಿಕೆಯಲ್ಲಿರುವ ಭಾರತೀಯರನ್ನು ಕುರಿತು ಮಹೇಶಚಂದ್ರರು, ಚೀನೀಯರಷ್ಟು ಸಂಖ್ಯೆಯಲ್ಲಿ ಅಲ್ಲಿ ಹಿಂದೀಯರಿಲ್ಲ; ಇದ್ದವರೂ ಕಳೆದ ವರ್ಷದ ವರೆಗೆ ನಾಗರಿಕ [ಹಕ್ಕುಗಳಿಲ್ಲದೆ ಶಾಶ್ವತ ನಿವಾಸಿ ಪರದೇಶಿ"ಗಳಾಗಿದ್ದರೆಂದು ಹೇಳಿದ್ದಾರೆ. ಇಂಥ ಶಾಶ್ವತ ನಿವಾಸಿ ಹಿಂದೀಯರಲ್ಲಿ ಸೀಖರು ಒಳ್ಳೆ ಕಾಯಿಪಲ್ಲೆ ಬೆಳೆಸುವವರೆಂದು ಪ್ರಸಿದ್ಧರಾಗಿದ್ದಾರೆ. ಅವರಲ್ಲಿ ಗಂಡಸರು ಇನ್ನೂ ಗಡ್ಡದ ಕೂದಲುಗಳನ್ನು ಬೋಳಿಸುವದಿಲ್ಲಾದರೂ ಹೆಂಗಸರು ಮಾತ್ರ ಹಿಂದೀಉಡುಪು ಬಿಟ್ಟು ಗೌನು ಹಾಕಿಕೊಳ್ಳುತ್ತಾರೆ.

ಆದರೆ ಅಮೇರಿಕನ್ನರಿಗೆ ಹಿಂದೀಯರ ಪರಿಚಯವಾಗಿರುವದು ಈ ಸೀಖರಿಂದಲ್ಲ. ಅಲ್ಲಿರುವ ಇಂಡಿಯಾ ಲೀಗ್ ಮತ್ತು ಹಿಂದೀ ಸ್ವಾತಂತ್ರ್ಯ ಸಮಿತಿಯೆಂಬ ರಾಜಕೀಯ ಸಂಸ್ಥೆಗಳಿಂದಲೂ ಅಲ್ಲ. ಆದರೆ ಅವೆರಡರ ಧೋರಣೆ ಒಂದು ದೊಡ್ಡಕ್ಕರದ ಇನ್ನೊಂದು ಬಯಲಿಗೆಳೆಯುವಂತಿದೆ.

ಇನ್ನು ಭಾರತದ ವಿಷಯ ಅಮೇರಿಕನ್ನರಿಗೆ ಭಾಷಣ ಮಾಡುವ ಕೆಲವರಿದ್ದಾರೆ. ಇವರು ಭಾರತದ ಮೇಲ್ಮೆಯನ್ನು ಹೇಳುವದಕ್ಕಿಂತಲೂ ಬ್ರಿಟಿಶರನ್ನು ದ್ವೈಷಿಸುತ್ತ ಭಾಷಣಮಾಡಿ ಹಣ ಸಂಪಾದಿಸುತ್ತಿದ್ದರು. ಈಗ ಬ್ರಿಟಿಶರು ಹೊರಟು ಹೋಗಿರುವದರಿಂದ ಇವರಿಗೆ ಗತಿ ಇಲ್ಲದಾಗಿದೆ. ಇಂಥ ಒಬ್ಬ ಭಾಷಣಕಾರ ಈಗ ಚರ್ಮದ ವ್ಯಾಪಾರವನು ಪ್ರಾರಂಭಿಸಿದ್ದಾನೆ!

ಇನ್ನು ಔಷಧಜ್ಞರು, ಯೋಗಿಗಳೆಂಬ ಸೋಗು ಹಾಕಿಕೊಂಡು ಸರಳ ಮನಸಿನ ಅಮೇರಿಕನ್ನರಿಂದ ಹಣವನ್ನೂ ಭೂದಾನವನ್ನೂ ಪಡೆದು ಕೆಲವರು ಬೇಳೇಯಿಸಿಕೊಳ್ಳುತಿದ್ದಾರೆ.

ಇವರಲ್ಲದೆ ಪುಲಿಟ್ಸರ್ ಬಹುಮಾನ ಪಡೆದ ಲೇಖಕ ಗೋವಿಂದ ಬಿಹಾರಿಲಾಲ, ಚಿಕಾಗೋ ವಿಶ್ವವಿದ್ಯಾಲಯದ ವೈಜ್ಞಾನಿಕ ಚಂದ್ರಶೇಖರ ರಾಮನ್ ಮೊದಲಾದ ಕೆಲವರೂ ಇದ್ದಾರೆ. ಆದರೆ ಅವರ ಸಂಖ್ಯೆ ಅಲ್ಪ. ಅವರು ಅಷ್ಟು ಪ್ರಸಿದ್ಧರೂ ಇಲ್ಲ.

× × ×

ಪ್ರಜೋತ್ಪತ್ತಿ

ತಪ್ಪು ತಪ್ಪಾಗಿ ನಡೆಸಿಕೊಳ್ಳಲಾಗುತ್ತಿರುವ ಈ ಜಗತ್ತು ಇನ್ನು ಕೆಲವೇ ಕಾಲದಲ್ಲಿ ವೃದ್ಧಿ ಹೊಂದುತ್ತಿರುವ ಜನಸಂಖ್ಯೆಯ ಹೊಟ್ಟೆಗೆ ಹಾಕಿ ಪೂರೈಸಲಾರದು— ಎಂದು ನ್ಯೂಯಾರ್ಕ ಪ್ರಾಣಿಶಾಸ್ತ್ರ ಸಂಘದ ಅಧ್ಯಕ್ಷರಾದ ಫೇರ್ ಫೀಲ್ಡ ಆಸ್ಬೋರನ್ನರು ಎಚ್ಚರಿಕೆ ಕೊಟ್ಟಿದ್ದಾರೆ.

೧೬೫೦ರಲ್ಲಿ ಪ್ರಪಂಚದ ಜನಸಂಖ್ಯೆ ೫೦ ಕೋಟಿ ಇತ್ತು. ೧೮೫೦ ರ ಹೊತ್ತಿಗೆ ಅದು ದ್ವಿಗುಣಿತವಾಯಿತು. ೧೯೦೦ ರಲ್ಲಿ ಪುನಃ ೨ ರಷ್ಟು ವೃದ್ಧಿಯಾಯಿತು; ಅಂದರೆ ೧೬೦ ಕೋಟಿಗೇರಿತು. ಈಗ ಒಟ್ಟು ೨೦೦ ಕೋಟಿಯ ವರೆಗೆ ಜನರು ಹೆಚ್ಚಿದ್ದಾರೆ.

ಈ ವರೆಗೆ ಹೆಚ್ಚಾದ ಸಂಖ್ಯೆಗೆ ಹೆಚ್ಚು ನೆಲದ ಸಾಗುವಳಿಯಿಂದ ಬದುಕಲು ನೆರವೀಯಲಾಗುತ್ತಿದೆ. ಆದರೆ ಈ ಸಾಗುವಳಿಯ ಕೆಲಸ ಬಹಳ ಕಾಲದವರೆಗೆ ಹೆಚ್ಚುತ್ತ ಹೋಗಲಾರದು; ನೆಲವೇ ಸಿಗದು ಎಂದು ಅಸಾರನ್ನರ ಹೆದರಿಕೆ.

ಮೇಲಿನದಕ್ಕೆ ವಿರುದ್ಧವಾಗಿ ಶ್ರೀಮತಿ ಹಬ್ಬಕ್ಕ ಈಗಿನ ನ್ಯೂನಪ್ರಮಾಣದಲ್ಲಿ ಜನನ ಸಾಗಿದರೆ ಸುಮಾರು ೨೦೩೫ ರ ಹೊತ್ತಿಗೆ ಈಗ ಇಂಗ್ಲಂಡಿನಲ್ಲಿರುವ ೪ ಕೋಟಿ ೨೦ ಲಕ್ಷ ಜನಸಂಖ್ಯೆ ೧ ಕೋಟಿ ೪೦ ಲಕ್ಷಕ್ಕಿಳಿಯಬಹುದೆಂದು ತರ್ಕಿಸುತ್ತಾಳೆ ಅಂದರೆ ವಿಕ್ಟೋರಿಯ ಯುಗದಲ್ಲಿ ಕುಟುಂಬವೊಂದರಲ್ಲಿ ೫ ಮಕ್ಕಳಿರುತ್ತಿದ್ದರೆ ಈಗ ಕೇವಲ ೨ ಇರುತ್ತವೆ. ಈಗಿನ ಪ್ರಜೋತ್ಪತ್ತಿ ಪ್ರಮಾಣವು ಕೇವಲ ೦.೮— ಅಂದರೆ— ಜನಸಂಖ್ಯೆ ಇದ್ದಕ್ಕಿದ್ದಷ್ಟೇ ಉಳಿಯಬೇಕಾದರೆ ಬೇಕಾಗುವದಕ್ಕಿಂತ ೦.೨ ಅಂಶ ಕಡಿಮೆ ಇದೆಯೆಂದು ಕಂಡುಹಿಡಿಯಲಾಗಿದೆ. ಇದರಿಂದ ಹಬ್ಬಕ್ಕ ಗಾಬರಿಯಾಗಿದ್ದಾಳೆ— ಇಂಗ್ಲೆಂಡೆಂಬ ರಾಷ್ಟ್ರವೇ ಅಳಿಸಿಹೋಗಿಬಿಡಬಹುದೆಂದು!

ಈ ಎರಡು ಮತಗಳು ಪಾಕ್ಷಿಕ ಸತ್ಯಗಳು. ಮಾನವನ ಸುಖದ ಕಲ್ಪನೆ ಮತ್ತು ಸಾಧನ ಇವು ಅವನ ದೃಷ್ಟಿಯನ್ನು ಕಾಲಕಾಲಕ್ಕೆ ಬದಲಾಯಿಸುತ್ತವೆ. ಆದುದರಿಂದ ಕೇವಲ ಮಾನಸಿಕವೆನಿಸಿದ ಸುಖ-ಶಾಂತಿಗಳು ಕಾಲಮಾನದ ಪರಿವರ್ತನದಿಂದ ಸ್ವಯಂ ಪರಿವರ್ತನ ಹೊಂದುತ್ತ ವಿರುದ್ಧ ಮತಗಳಿಗೆ ಆಸ್ಪದ ಕೊಡುತ್ತವೆ ಎಂಬುದು ಮನಃಶಾಸ್ತ್ರಿಗಳಿಗೆ ಅರಿಯದ ಮಾತೇ?

\+ + +

ದಿಗಂಬರರ ಫಜೀತಿ

ಏನೂ ಬಟ್ಟೆಬರೆಯಿಲ್ಲದೆ ಹೆಣ್ಣು-ಗಂಡು ಬರಿಮೈಲೆ ತಿರುಗುವದು ಆರೋಗ್ಯಕರವೆಂದು ವಾದಿಸುವ ಗುಂಪುಗಳು ಅಮೇರಿಕೆಯಲ್ಲಿಯೂ ಯುರೋಪಿನಲ್ಲಿಯೂ ಇವೆ ಅಂಥವರು ಸಾಮಾನ್ಯವಾಗಿ ತಮ್ಮದೊಂದು ಬೇರೆಯ ಉದ್ಯಾನ ಮಾಡಿಕೊಂಡು ಅದರ ಆವಾರದೊಳಗೆ ವಸ್ತ್ರ ತೊಡಕಿಲ್ಲದೆ ತಿರುಗುವದುಂಟು. ಅಮೇರಿಕೆಯ ಇಂಥ ದಿಗಂಬರ ವಾದಿಗಳು ಕೆಲವರು ಸೇರಿ ತಮ್ಮ ವಿಹಾರಕ್ಕೆ ಯಾವ ಅಡ್ಡಿಯೂ ಬರಬಾರದೆಂದು ಪನಾಮದ ಸಮೀಪದ ಒಂದು ಚಿಕ್ಕ ದ್ವೀಪವನ್ನು ಕೊಂಡುಕೊಂಡರು. ಆ ದ್ವೀಪಕ್ಕೆ ಅವರು "ಸ್ವಚ್ಛಂದ" ಎಂದು ಹೆಸರಿಟ್ಟಾಗ ಅದು ತಮ್ಮ ಆದರ್ಶ ವಿಹಾರ ತಾಣವೆಂದು ಆಶಿಸಿದ್ದರೇನೊ. ಆದರೆ ಪ್ರಕೃತಿ ಬೇರೆಯೇ ಆಟ ಹೂಡಿದಳು. ಆ ದ್ವೀಪದಲ್ಲಿ ಇರುವೆಗಳ ಪಿಡುಗು ವಿಪರೀತವಾಗಿತ್ತು. ಪಾಪ, ಆ ದಿಗಂಬರರು ಮೈಯೆಲ್ಲ ಎಣ್ಣೆಯ ರಾಡಿ ಬಳಿದುಕೊಳ್ಳಬೇಕು, ಇಲ್ಲದಿದ್ದರೆ ತಮ್ಮ ಸಂಪ್ರದಾಯ ಬಿಟ್ಟು ಬಟ್ಟೆ ಧರಿಸಬೇಕು, ಎಂಬಲ್ಲಿಗೆ ಬಂತು. ಈಗ ಅವರು ಬೇರೆಯ ವಿಹಾರ ಸ್ಥಾನ ಹುಡುಕುತ್ತಿದ್ದಾರಂತೆ.

ರಾಷ್ಟ್ರದಲ್ಲಿ ಧಾರ್ಮಿಕ ಶಿಕ್ಷಣ

[ಕಿ. ಘ. ಮಶ್ರುವಾಲಾ]

ಹಿಂದುಸ್ತಾನದ ಘಟನೆಯನ್ನು ಕೊನೆಗೊಮ್ಮೆ ಸ್ವೀಕರಿಸುವ ಮೊದಲು ರಾಷ್ಟ್ರದಲ್ಲಿ ಧಾರ್ಮಿಕ ಶಿಕ್ಷಣದ ವಿಷಯವು ಘಟನಾ ಸಮಿತಿಯ ಎದುರಿಗೆ ಚರ್ಚೆಗೆ ಬರತಕ್ಕುದೇ ಎನ್ನಬಹುದು. ಕರಡು ತಯಾರಿಸುವ ಸಮಿತಿಯವರು ಈ ಬಗ್ಗೆ ಹೀಗೆ ಸೂಚಿಸಿದ್ದಾರೆ.

"೨೦ ಯಾವದಾದರೊಂದು ವಿಶಿಷ್ಟ ಧರ್ಮ ಅಥವಾ ಧಾರ್ಮಿಕ ಸಂಪ್ರದಾಯಕ್ಕೆ ವಿನಿಯೋಗವಾಗಲೆಂದು ಯಾರೂ ಕರ ಕಂದಾಯ ಕೊಡಬೇಕೆಂದು ಒತ್ತಾಯ ಪಡಿಸತಕ್ಕದ್ದಲ್ಲ.

೨೨ (೧) ಪೂರ್ಣ ಸರಕಾರದ ಸಹಾಯದಿಂದಲೆ ನಡೆಯುವ ಶಿಕ್ಷಣ ಸಂಸ್ಥೆಯಲ್ಲಿ ಯಾವ ಧಾರ್ಮಿಕ ಶಿಕ್ಷಣವನ್ನೂ ಕೊಡತಕ್ಕದ್ದಲ್ಲ.

ಯಾವದೊಂದು ವಿಶ್ವಸ್ತಮಂಡಲ ಅಥವಾ ವಿಶಿಷ್ಟ ಧಾರ್ಮಿಕ ಶಿಕ್ಷಣಕ್ಕೆಂದೇ ಕೊಡಮಾಡಿದ ನಿಧಿಯಿದ್ದರೆ ಇಂತಹ ಸಂಸ್ಥೆಯು ಆಡಳಿತಸೂತ್ರ ಸರಕಾರದ ಕೈಲಿದ್ದರೂ ಅದಕ್ಕೆ ಮೇಲ್ಕಾಣಿಸಿದ ನಿಷೇಧವು ಅನ್ವಯಿಸಲಾರದು.

(೨) ಸರಕಾರದಿಂದ ಮಾನ್ಯ ಮಾಡಲ್ಪಟ್ಟ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತಕ್ಕವರು ಅಥವಾ ಸರಕಾರದಿಂದ ಸಹಾಯವೇತನ ಹೊಂದುವವರು ಈ ಬಗೆಯ ಸಂಸ್ಥೆಗಳಲ್ಲಿ ಧಾರ್ಮಿಕ ಶಿಕ್ಷಣ ಪಡೆಯಲೇಬೇಕೆಂಬ ಇಲ್ಲವೆ ಈ ಸಂಸ್ಥೆಗಳಲ್ಲಿ ನಡೆವ ಪೂಜಾದಿಗಳಲ್ಲಿ ಭಾಗವಹಿಸಲೇಬೇಕೆಂಬ ನಿರ್ಬಂಧವಿಲ್ಲ. ಕಲಿವ ಹುಡುಗನು ಚಿಕ್ಕವನಿದ್ದು ಪಾಲಕರ ಒಪ್ಪಿಗೆ ಇದ್ದರೆ ಧಾರ್ಮಿಕ ಶಿಕ್ಷಣ ಕೊಡಬಹುದು.

(೩) ಕಲಸದ ಅಧಿಕೃತ ವೇಳೆಯ ನಂತರ ಈ ಬಗೆಯ ಶಿಕ್ಷಣ ಸಂಸ್ಥೆಗಳಲ್ಲಿ ಆಯಾ ಧರ್ಮದವರು ಅಥವಾ ಪಂಥದವರು ತಮ್ಮ ಧರ್ಮದ ಇಲ್ಲವೆ ಪಂಥದ ಬಗ್ಗೆ ಶಿಕ್ಷಣ ಕೊಡಲು ಮೇಲ್ಕಾಣಿಸಿದ ಕಲಮುಗಳು ಅಡ್ಡಿ ಬರುವದಿಲ್ಲ."

ಮೇಲ್ಕಾಣಿಸಿದ ಒಕ್ಕಣೆಗಳು ನನ್ನ ದೃಷ್ಟಿಯಿಂದ ಸಮರ್ಪಕವಿರುವವೆಂದು ತೋರುವದಿಲ್ಲ. ೨೦ ನೆ ಕಲಮಿನಲ್ಲಿ ಯಾವುದೊಂದು ವಿಶಿಷ್ಟ ಧರ್ಮವನ್ನಾಗಲಿ, ಧಾರ್ಮಿಕ ಸಂಪ್ರದಾಯವನ್ನಾಗಲಿ ಉತ್ಕರ್ಷಕ್ಕೆ ತಂದು ಪ್ರತಿಷ್ಠಿಸಲು ಬೊಕ್ಕಸದ ತೆರಿಗೆಯ ಹಣವನ್ನು ಬಳಸಬಾರದೆಂಬ ನಿರ್ಬಂಧವೇನೂ ಇಲ್ಲ. ಅಂಥ ವಿಶಿಷ್ಟ ಉದ್ದೇಶಕ್ಕಾಗಿ ತೆರಿಗೆ ಎತ್ತುವದನ್ನು ಮಾತ್ರ ಅದು ಪ್ರತಿಬಂಧಿಸುತ್ತದೆ.

ಇನ್ನು ೨೨ ನೆ ಕಲಮಿನ ವಿಷಯದಲ್ಲಿ ಹೇಳಬೇಕಾದರೆ, ಅದು ಸಂಪೂರ್ಣವಾಗಿ ಸರಕಾರಿ ಹಣದಿಂದಲೇ ನಡೆಯುತ್ತಿರುವ ಸಂಸ್ಥೆಗಳಲ್ಲಿ ಮಾತ್ರ ಧಾರ್ಮಿಕ ಶಿಕ್ಷಣವನ್ನು ಪ್ರತಿಬಂಧಿಸುತ್ತದೆ. ಒಂದು ಸಂಸ್ಥೆಗೆ ಸರಕಾರದ ಬೊಕ್ಕಸದ್ದಲ್ಲದ ಕೆಲವೇ ರೂಪಾಯಿಗಳು ಸಿಗುತ್ತಿದ್ದರೂ ಅದು ಸಂಪೂರ್ಣ ಸರಕಾರೀ ಹಣದಿಂದ ನಡೆಸಲ್ಪಡುವದೆಂದು ಹೇಳಲು ಸಾಧ್ಯವಿಲ್ಲ; ಆಗ ಅದಕ್ಕೆ ಧಾರ್ಮಿಕ ಶಿಕ್ಷಣವನ್ನು- ಅದರ ಅರ್ಥವೇನೇ ಇರಲಿ- ಕೊಡುವ ಹಕ್ಕು ಪ್ರಾಪ್ತವಾಗುತ್ತದೆ. ಆದ್ದರಿಂದ ಈ ಕಲಮಿನಲ್ಲೇನೇ ಇರಲಿ, ಯಾವನೊಬ್ಬ ಶಿಕ್ಷಣ ಮಂತ್ರಿಗೆ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿಯೂ ಧಾರ್ಮಿಕ ಶಿಕ್ಷಣ ಕೊಡಿಸಬೇಕೆಂದು ತೋರಿದರೆ ತನ್ನ ರಾಷ್ಟ್ರದಲ್ಲಿ ಸಂಪೂರ್ಣ ಸರಕಾರಿ ಹಣದಿಂದ ನಡೆಯುವ ಸಂಸ್ಥೆಯೊಂದೂ ಇಲ್ಲದಂತೆ ವ್ಯವಸ್ಥೆ ಮಾಡಬಹುದು. ಈ ಕಲಮಿನಲ್ಲಿ ಸೇರಿಸಿರುವ ಅಪವಾದ ಭಾಗದಲ್ಲಿ ಈ ಮಾತನ್ನು ಇನ್ನಷ್ಟು ನಿಚ್ಚಳವಾಗಿ ಮಾಡಲಾಗಿದೆ. ಧಾರ್ಮಿಕ ಶಿಕ್ಷಣವನ್ನು ಕೊಟ್ಟೇ ತೀರಬೇಕೆಂದು ಸ್ಥಾಪಿಸಲ್ಪಟ್ಟ ಸಂಸ್ಥೆಗಳನ್ನೂ ನಡೆಸಿಕೊಂಡು ಹೋಗಲು ಸರಕಾರಕ್ಕೆ ಈ ಅಪವಾದ ಭಾಗದಲ್ಲಿ ಅವಕಾಶ ಕೊಡಲಾಗಿದೆ.

ಹೀಗೆ ಧಾರ್ಮಿಕ ಶಿಕ್ಷಣರಹಿತವಾದ ಶಿಕ್ಷಣವನ್ನು ಕೊಡುವ ತೋರಿಕೆಯಿದ್ದರೂ ಪ್ರತಿಯೊಂದು ಸಂಸ್ಥೆಯಲ್ಲಿಯೂ ಧಾರ್ಮಿಕ ಶಿಕ್ಷಣ ಕೊಡಿಸಲು ಅವಕಾಶವಿದೆ. ಧಾರ್ಮಿಕ ಶಿಕ್ಷಣ ಕೊಡಿಸದಿರುವದು ಒಂದು "ಸ್ವಾತಂತ್ರ್ಯ"ವಾಗಿದ್ದರೆ ಅದು ಬಲಗೈಯಿಂದ ಕೊಟ್ಟಂತೆ ಮಾಡಿದ್ದನ್ನು ಎಡಗೈಯಿಂದ ಕಸಿದುಕೊಳ್ಳುತ್ತದೆ.

ಆದರೆ ಕೇವಲ ಐಹಿಕ ಅಥವಾ ಲೌಕಿಕವೆನಿಸುವ ಶಿಕ್ಷಣವನ್ನೇ ಕೊಡಬೇಕೆಂದೆನ್ನುವ ಅಭಿಪ್ರಾಯಕ್ಕೆ ಸ್ಟೃಗುಟ್ಟುವವನು ನಾನಲ್ಲ. ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಕೊಡಬೇಕೆಷ್ಟೇ ಅಲ್ಲ, ಶಾಲೆಯ ವಾತಾವರಣವೇ ಪರಿಪೂರ್ಣ ಧಾರ್ಮಿಕವೂ ನೈತಿಕವೂ ಆಗಿರಬೇಕು ಮತ್ತು ಲೌಕಿಕ ವಿಷಯದ ಶಿಕ್ಷಣವೂ ಧಾರ್ಮಿಕ ಹಾಗು ನೈತಿಕ ದೃಷ್ಟಿಯಿಂದಲೂ ಏರ್ಪಡತಕ್ಕದ್ದೆಂದು ನನ್ನ ನಂಬಿಕೆ. ಆದರೆ ಭಾರತೀಯ [illegible] ಮತ್ತು ಪಂಗಡಗಳ ಕೇಂದ್ರಗಳೆನಿಸಬಾರದೆನ್ನುವದರಲ್ಲಿ ನಾನೂ ಒಬ್ಬ.

ಇದನ್ನು ವಿವರಿಸಲು ನನ್ನ ಅಭಿಪ್ರಾಯದ ಧಾರ್ಮಿಕ ಶಿಕ್ಷಣವೆಂದರೇನೆಂಬುದು ತಿಳಿಸುವದು ಅವಶ್ಯ. ಈ ಮಾತಿಗೆ ಕಾಯದೆಯ ಕರಡಿನಲ್ಲಿ ಏನೂ ವಿವರಣೆ ಕೊಟ್ಟಿಲ್ಲವೆಂಬುದು ಗಮನಾರ್ಹವಾಗಿದೆ. ೨೧ ನೇ ಕಲಮಿನಲ್ಲಿ ಹೇಳಿರುವ ಮಾತುಗಳಿಂದ ಆ ಶಬ್ದಗಳಿಗೆ ಅರ್ಥ ಹಚ್ಚಬೇಕಾದರೆ "ಧಾರ್ಮಿಕ ಶಿಕ್ಷಣ" ವೆಂದರೆ "ಯಾವುದೊಂದು ವಿಶಿಷ್ಟ ಧರ್ಮ ಅಥವಾ ಧಾರ್ಮಿಕ ಸಂಪ್ರದಾಯದ" ಶಿಕ್ಷಣವೆಂದು ತಿಳಿದುಕೊಳ್ಳಬೇಕಾಗುವದು.

ಆದರೆ "ಯಾವುದೊಂದು ವಿಶಿಷ್ಟ ಧರ್ಮದಲ್ಲಿ ಇಲ್ಲವೆ ಧಾರ್ಮಿಕ ಸಂಪ್ರದಾಯದಲ್ಲಿ" ಶಿಕ್ಷಣ ಕೊಡದೇ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವೀಯುವದೂ ಅಲ್ಲಿನ ಎಲ್ಲ ಚಟುವಟಿಕೆಗಳಲ್ಲಿ ಧಾರ್ಮಿಕ ವಾತಾವರಣ ಹಬ್ಬಿರುವಂತೆ ಮಾಡುವದೂ ಸಾಧ್ಯವೆಂದು ನಾನು ಒತ್ತಿ ಹೇಳುವೆ. ಪ್ರತಿಯೊಂದು ಸರಕಾರಿ ಸಂಸ್ಥೆಯೂ ಅಂಥ ಶಿಕ್ಷಣ ಕೊಡಬೇಕೆಂದೂ ನಾನು ಭಾವಿಸುತ್ತೇನೆ. ಅಧುನಿಕ ಜಗತ್ತಿಗೆ ಅಭಿಶಾಪಪ್ರಾಯವಾಗಿರುವ ಮಾತೆಂದರೆ, ಒತ್ತಟ್ಟಿಗೆ ಶುದ್ಧ ಧಾರ್ಮಿಕ ಶಿಕ್ಷಣದ ಅಭಾವವಿದ್ದರೆ (ಶುದ್ಧ ಅಧಾರ್ಮಿಕ ಶಿಕ್ಷಣದ ವ್ಯವಸ್ಥೆಯಿದೆಯೆಂದು ಬೇಕಾದರೆ ಹೇಳಬಹುದು.), ಇನ್ನೊಂದು ಕಟ್ಟಿಗೆ ಸಂಪ್ರದಾಯಶರಣ, ಪ್ರಗತಿಹೀನ, ಪ್ರತಿಗಾಮಿ ಪದ್ಧತಿಯಲ್ಲಿ ವಿಶಿಷ್ಟ ಧರ್ಮಗಳ ಉಪದೇಶ ಮಾಡುವ ಸ್ವಾತಂತ್ರ್ಯ ಕೊಡಲ್ಪಟ್ಟಿರುವದು. ಜನರ ನೈತಿಕ ಮಟ್ಟವನ್ನು ಏರಿಸುವ ಇಚ್ಛೆ ನಮಗಿದ್ದರೆ ಇತ್ತ ಬೆಳೆಯುತ್ತಿರುವ ಹುಡುಗರಿಗೆ ನಿಶ್ಚಿತ ಧಾರ್ಮಿಕ ವಾತಾವರಣವನ್ನು ಒದಗಿಸಿಕೊಟ್ಟು ಧಾರ್ಮಿಕ ಪಂಥ ಪಂಗಡಗಳನ್ನು ನಿರುತ್ಸಾಹಗೊಳಿಸುವದು ಅವಶ್ಯ.

ಇದಕ್ಕೆ ಅವಕಾಶ ಕೊಡುವಗೋಸುಗ ಮತ್ತು ನನ್ನ ಅರ್ಥವನ್ನು ಸ್ಪಷ್ಟಗೊಳಿಸುವ ಸಲುವಾಗಿ, ೨೧ ಮತ್ತು ೨೨ ನೇ ಕಲಮುಗಳನ್ನು ಈ ಕೆಳಗಿನಂತೆ ತಿದ್ದಿ ಬರೆಯಬೇಕೆಂದು ಸೂಚಿಸುತ್ತೇನೆ.

"೨೧ ಯಾವುದಾದರೊಂದು ವಿಶಿಷ್ಟ ಧರ್ಮ ಅಥವಾ ಧಾರ್ಮಿಕ ಸಂಪ್ರದಾಯದ ಉತ್ಕರ್ಷಕ್ಕಾಗಿ ಇಲ್ಲವೆ ಪ್ರತಿಷ್ಠೆಗಾಗಿ ಸರಕಾರಿ ಹಣದ ಯಾವ ಅಂಶವನ್ನೂ ವಿನಿಯೋಗಿಸತಕ್ಕದ್ದಲ್ಲ. ಮತ್ತು ಯಾರನ್ನೂ ಆ ಬಗ್ಗೆ ಕರಕಂದಾಯ ಕೊಡಲು ನಿರ್ಬಂಧಗೊಳಿಸತಕ್ಕದ್ದಲ್ಲ.

೨೨ (೧) ಯಾವ ಶಿಕ್ಷಣ ಸಂಸ್ಥೆಗಳು ಸಂಪೂರ್ಣವಾಗಿ ಅಥವಾ ಅಂಶತಃ ಸರಕಾರಿ ಹಣದಿಂದ ನಡೆಸಲ್ಪಡುವವೋ ಅವುಗಳಲ್ಲಿ ಯಾವುದೇ ವಿಶಿಷ್ಟ ಧರ್ಮದ ಅಥವಾ ಧಾರ್ಮಿಕ ಸಂಪ್ರದಾಯದ ಶಿಕ್ಷಣವನ್ನು ಕೊಡತಕ್ಕದ್ದಲ್ಲ ಮತ್ತು ಯಾವುದೊಂದು ವಿಶಿಷ್ಟ ಧರ್ಮದ ಇಲ್ಲವೆ ಧಾರ್ಮಿಕ ಸಂಪ್ರದಾಯದ ಶಿಕ್ಷಣ ಕೊಡಬೇಕೆಂದು ಯಾವುದೊಂದು ದತ್ತಿ ಅಥವಾ ವಿಶ್ವಸ್ತ ಸಂಸ್ಥೆಯು ಮೂಲಕ ಸ್ಥಾಪಿಸಲ್ಪಟ್ಟ ವಿದ್ಯಾಸಂಸ್ಥೆಯನ್ನು ನಡೆಸಿಕೊಂಡು ಹೋಗುವ ಹೊಣೆಯನ್ನು ಸರಕಾರ ಸ್ವೀಕರಿಸಕೂಡದು.

ಈ ಘಟನೆ ಆಚರಣೆಗೆ ಬರುವ ಮೊದಲೇ ಅಂಥ ಯಾವುದೊಂದು ಹೊಣೆ ಅಂಗೀಕರಿಸಲ್ಪಟ್ಟಿದ್ದರೆ, ಯೋಗ್ಯ ಸಂಸ್ಥೆಯೊಂದಕ್ಕೆ ಅಂಥ ಆಡಳಿತೆಯನ್ನು ಒಪ್ಪಿಸಲು ಅವಶ್ಯ ಕ್ರಮಗಳನ್ನು ಸರಕಾರ ಕೈಕೊಳ್ಳಬೇಕು.

ಆದರೆ, ಪೂರ್ತಿಯಾಗಿ ಇಲ್ಲವೆ ಅಂಶತಃ ಸರಕಾರದ ಹಣದಿಂದ ನಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಾಗಲಿ, ಯಾವದೊಂದು ದತ್ತಿ ಇಲ್ಲವೆ ವಿಶ್ವಸ್ತಿಕೆಯನ್ವಯ ಸರಕಾರದಿಂದ ನಡೆಸಲ್ಪಡುವ (ಆ ದತ್ತಿ ಅಥವಾ ವಿಶ್ವಸ್ತಿಕೆಯ ಶರ್ತುಗಳಲ್ಲಿ ಸಾಮಾನ್ಯ ಧಾರ್ಮಿಕ ಶಿಕ್ಷಣ ಕೊಡಬೇಕೆಂದು ಹೇಳಿರಲಿ ಇರದಿರಲಿ, ಅಥವಾ ವಿಶಿಷ್ಟ ಧರ್ಮ ಇಲ್ಲವೆ ಧಾರ್ಮಿಕ ಸಂಪ್ರದಾಯದ ಶಿಕ್ಷಣವನ್ನೆ ಕೊಡಬೇಕೆಂದು ಬೇಕಾದರೆ ಹೇಳಿರಲಿ) ಶಿಕ್ಷಣ ಸಂಸ್ಥೆಗಳಲ್ಲಾಗಲಿ ಯಾವುದೊಂದು ವಿಶಿಷ್ಟ ಧರ್ಮ ಅಲ್ಲವೆ ಧಾರ್ಮಿಕ ಸಂಪ್ರದಾಯಕ್ಕೆ ಸಂಬಂಧಿಸಿರದ ಸಾಮಾನ್ಯ ಧಾರ್ಮಿಕ ಶಿಕ್ಷಣವನ್ನು ಕೊಡಲು ಅಡ್ಡಿ ಬರಲಾರದು.

೨) ಸರಕಾರದಿಂದ ಮನ್ನಣೆ ಪಡೆದ ಇಲ್ಲವೆ ಸರಕಾರಿ ಬೊಕ್ಕಸದಿಂದ ಸಹಾಯ ಪಡೆವ ಯಾವದೇ ಶಿಕ್ಷಣ ಸಂಸ್ಥೆಗೆ ಹೋಗುವ ಯಾವನೇ ವ್ಯಕ್ತಿಗೆ ಅಂಥ ಸಂಸ್ಥೆಯಲ್ಲಿ ಇಲ್ಲವೆ ಅದಕ್ಕೆ ಹೊಂದಿದ ಭಾಗದಲ್ಲಿ ನಡೆವ ಯಾವದೇ ವಿಶಿಷ್ಟ ಧರ್ಮ ಇಲ್ಲವೆ ಧಾರ್ಮಿಕ ಸಂಪ್ರದಾಯದ ಪೂಜಾ—ಪ್ರಾರ್ಥನಾದಿಗಳ ಕಾಲದಲ್ಲಿ [illegible] ವಿಶಿಷ್ಟ ಧಾರ್ಮಿಕ ಸಂಪ್ರದಾಯದ ಶಿಕ್ಷಣದಲ್ಲಿ ಭಾಗವಹಿಸಲೇಬೇಕೆಂದಾಗಲಿ ನಿರ್ಬಂಧವಿರತಕ್ಕದ್ದಲ್ಲ (ಇಂಥ ಕೆಲಸಗಳನ್ನು ಮಾಡಬೇಕೆಂದು ಯಾವನೇ ಅಲ್ಪವಯಸ್ಕನನ್ನು ಕೂಡ, ಅವನ ರಕ್ಷಕರ ಒಪ್ಪಿಗೆಯಿಂದ ಸಹ ಒತ್ತಾಯಪಡಿಸಕೂಡದೆಂದು ನನ್ನ ಮತ.)

೩) ಮೇಲೆ ಹೇಳಿದ್ದಕ್ಕೆ ವಿರೋಧವಾಗದಂತೆ ಯಾವದೇ ಜಾತಿಯವರು ಇಲ್ಲವೆ ಪಂಥದವರು ಆ ಜಾತಿ ಅಥವಾ ಪಂಥಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ವಿಶಿಷ್ಟ ಧಾರ್ಮಿಕ ಶಿಕ್ಷಣವನ್ನು ಆ ಸಂಸ್ಥೆಯ ಕೆಲಸದ ತಾಸುಗಳು ಮುಗಿದ ನಂತರ ಕೊಡಲು ಯಾವ ಅಡ್ಡಿಯೂ ಇಲ್ಲ."

ಈ ಲೇಖವನ್ನು ಮುಗಿಸುವ ಮೊದಲು ಇದೇ ವಿಷಯದ ೧೯ ಮತ್ತು ೨೩ ನೇ ಕಲಮುಗಳ ವಿಚಾರದಲ್ಲಿ ಕೆಲ ಮಾತು ಹೇಳುವೆ.

೧೯ (೧) ಕಲಮು ಹೀಗೆ ಹೇಳುತ್ತದೆ:

"ಸಾರ್ವಜನಿಕ ಸುವ್ಯವಸ್ಥೆ, ನೀತಿ ಮತ್ತು ಆರೋಗ್ಯ ಇವುಗಳಿಗಾಗಲಿ ಈ ಭಾಗದಲ್ಲಿ ಹೇಳಿದ ಇತರ ನಿಯಮಗಳಿಗಾಗಲಿ ವಿರುದ್ಧವಾಗದಂತೆ, ಧರ್ಮವನ್ನು ಆಚರಿಸಲು, ತಾನು ಇಂಥ ಧರ್ಮದವನೆಂದು ಹೇಳಿಕೊಳ್ಳಲು ಅಥವಾ ಧರ್ಮವನ್ನು ಪ್ರಚುರಗೊಳಿಸಲು ಎಲ್ಲರಿಗೂ ಸಮಾನವಾದ ಹಕ್ಕುಂಟು.

ವಿವರಣೆ:— ಕೃಪಾಣಗಳನ್ನು ಧರಿಸುವದೂ ಹಿಡಿದುಕೊಂಡು ತಿರುಗುವದೂ ಸೀಖ ಧರ್ಮದಲ್ಲಿ ಅಂತರ್ಗತವಾಗಿದೆಯೆಂದು ತಿಳಿಯತಕ್ಕದ್ದು'

ಈ ವಿವರಣೆಯ ಬದಲಿಗೆ ಮುಖ್ಯ ಕಲಮಿನಲ್ಲಿಯೇ ತುದಿಯಲ್ಲಿ ಈ ಕೆಳಗಿನ ಶಬ್ದಗಳನ್ನು ಸೇರಿಸಬೇಕೆಂದು ನನ್ನ ಸೂಚನೆ:—

"ಮತ್ತು ಯಾವದೇ ಬಿಲ್ಲೆ, ಸಂಕೇತ, ಚಿಹ್ನ, ಅಥವಾ ಇನ್ನಾವುದೇ ವಸ್ತುವನ್ನು ತಮ್ಮ ಧರ್ಮದ ಲಾಂಛನವೆಂದು ಧರಿಸಲು ಎಲ್ಲರಿಗೂ ಸ್ವಾತಂತ್ರ್ಯವುಂಟು"

೨೩ನೇ ಕಲಮು ಈ ಪ್ರಕಾರ ಇದೆ.

'೨೩ (೧) ಹಿಂದುಸ್ತಾನದ ಪ್ರದೇಶದಲ್ಲಿ ಅಥವಾ ಅದರ ಯಾವದೆ ಭಾಗದಲ್ಲಿ ವಾಸಿಸುವ ಯಾವದೆ ಜನಾಂಗಕ್ಕೆ ಯಾವದೊಂದು ತನ್ನದೇ ಆದ ವಿಶಿಷ್ಟ ಭಾಷೆ, ಲಿಪಿ ಮತ್ತು ಸಂಸ್ಕೃತಿಯಿದ್ದರೆ, ಅವುಗಳನ್ನು ರಕ್ಷಿಸಲು ಅವರಿಗೆ ಹಕ್ಕಿದೆ.

(೨) ಸರಕಾರದವರು ನಡೆಸುವ ಯಾವದೇ ಶಿಕ್ಷಣ ಸಂಸ್ಥೆಯಲ್ಲಿ ಯಾವದೇ ಧಾರ್ಮಿಕ, ಜಾತೀಯ ಅಥವಾ ಭಾಷಾತ್ಮಕ ಅಲ್ಪಸಂಖ್ಯಾಕ ಪಂಗಡದ ವಿರುದ್ಧ ಪ್ರವೇಶ ಕೊಡುವ ವಿಷಯದಲ್ಲಿ ಪಕ್ಷಪಾತ ಮಾಡತಕ್ಕದ್ದಲ್ಲ.

(೩) (ಅ) ಎಲ್ಲ ಧಾರ್ಮಿಕ, ಜಾತೀಯ ಅಥವಾ ಭಾಷಾತ್ಮಕ ಅಲ್ಪಸಂಖ್ಯಾಕರಿಗೂ ತಮ್ಮ ಮನಸಿಗೊಪ್ಪುವ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ನಡೆಸುವ ಹಕ್ಕುಂಟು.

(ಬ) ಶಿಕ್ಷಣ ಸಂಸ್ಥೆಗಳಿಗೆ ಸಹಾಯ ಕೊಡುವಾಗ, ಯಾವದೇ ಧಾರ್ಮಿಕ ಜಾತೀಯ ಅಥವಾ ಭಾಷಾತ್ಮಕ ಅಲ್ಪಸಂಖ್ಯಾಕ ಗುಂಪಿನಿಂದ ನಡೆಸಲ್ಪಡುವದೆಂಬ ಕಾರಣದಿಂದ ಯಾವದೇ ಸಂಸ್ಥೆಯ ವಿರುದ್ಧ ಸರಕಾರ ಪಕ್ಷಪಾತ ಮಾಡತಕ್ಕದ್ದಲ್ಲ'

ಈ ಕಲಮಿಗೆ ಈ ಕೆಳಗಿನ ಅಪವಾದಗಳನ್ನು ಸೂಚಿಸಬಯಸುವೆ:—


ಉಪಕಲಮು (೧) ಮತ್ತು (೨) ಕ್ಕೆ—

"ಆದರೆ ಸರಕಾರದಿಂದ ಮನ್ನಣೆಪಡೆದ ಇಲ್ಲವೆ ಅದು ನಡೆಸುವ ಯಾವದೇ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶ ಪಡೆಯಬೇಕಾದರೆ ಯಾವುದೇ ವಿಶಿಷ್ಟ ಭಾಷೆ ಅಥವಾ ಲಿಪಿಯ ಜ್ಞಾನವಿದ್ದೇ ಇರಬೇಕೆಂದು ನಿರ್ಬಂಧಿಸಬಹುದು.'

'ಉಪಕಲಮು (೩) ಕ್ಕೆ—

'ಆದರೆ, ಯಾವುದೊಂದು ಶಿಕ್ಷಣ ಸಂಸ್ಥೆ ಸರಕಾರದ ಸಹಾಯವನ್ನು ಪಡೆಯುವದೊ ಇಲ್ಲವೊ ಎಂಬದನ್ನು ಗಮನಿಸದೆ ಆ ಸಂಸ್ಥೆಯಲ್ಲಿ ಕಲಿಯುವ ಪ್ರತಿಯೊಬ್ಬನಿಗೆ ಒಂದು ವಿಶಿಷ್ಟ ಭಾಷೆಯ ಶಿಕ್ಷಣ ಕೊಟ್ಟೇ ತೀರಬೇಕೆಂದು ಸರಕಾರದವರು ನಿರ್ಬಂಧಿಸಬಹುದು.'

ವರ್ಧಾ ೧೪-೪-೪೮ (ಹರಿಜನ)



ಜ್ಯೋತಿಷಿ— ಕೃಷ್ಣಶಾಸ್ತ್ರಿ ಘಡೆ ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ.

ಮೇ ೩ ರಿಂದ ೯ ರ ವರೆಗೆ

ಮೇಷ

ಎಲ್ಲರ ಪ್ರಕೃತಿ ಬಹಳ ಉತ್ತಮ. ಆದರೆ ಒಬ್ಬರೊಬ್ಬರಲ್ಲಿ ವಿಶ್ವಾಸ ಮತ್ತು ಆದರ ಪೂರ್ಣ ಎನಿಸುತ್ತಿದ್ದರೂ ನಿಮ್ಮ ನಿಮ್ಮಲ್ಲಿ ಒಂದು ವಿಷಯದ ಬಗ್ಗೆ ಬಹಳ ಮತಭೇದವುಂಟಾಗುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಮಾನ್ಯ ಅನುಕೂಲ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಮತ್ತು ಒಳ್ಳೇ ಪ್ರತಿಷ್ಠೆ. ಆದರೆ ಲಾಭಕ್ಕೆ ಆಯಕ್ತ ಹೊತ್ತಿನಲ್ಲಿ ಕೆಲ ಅಡಚಣಿಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೇ ಯಶಸ್ಸು. ಮಿತ್ರರಿಂದ ದ್ವೇಷದ ವರ್ತನೆ. ಪ್ರವಾಸಾದಿ ಕೆಲಸ ಬಹಳ ಹಿತದ್ದು. ಅಶ್ವಿನಿಯ ಕೊನೆಯ ೩, ಮತ್ತು ಭರಣಿಯ ೧ ನೇ ಚರಣಕ್ಕೆ ತೊಂದರೆಯಿಂದ ಯಶಸ್ಸು. ತಾ- ೩, ೪, ೮, ೯ ಅನುಕೂಲ.

ಅದರಂತೆ ತಾ. ೯, ರವಿವಾರ ಮುಂಜಾನೆ ಗ್ರಸ್ತೋದಯ ಸೂರ್ಯಗ್ರಹಣವಿದ್ದು ಅದು ೭, ಹೊಡೆದು ೨೭ ನಿಮಿಷಕ್ಕೆ ಬಿಡುವದು. ಅದರ ವೇಧ ಶನಿವಾರ ಮಧ್ಯಾಹ್ನ ೩, ೩೭ ಮಿನಿಟಿಗೆ ಪ್ರಾರಂಭವಾಗುವದು. ಈ ಗ್ರಹಣ ಮೇಷ ರಾಶಿಯಲ್ಲಿ ಹಿಡಿಯುವದರಿಂದ ಭರಣಿ ನಕ್ಷತ್ರದ್ದಾಗುವದು. ಆದ್ದರಿಂದ ಈ ರಾಶಿಯ ಮತ್ತು ನಕ್ಷತ್ರದವರು ಗ್ರಹಣವನ್ನು ನೋಡದೆ ಅದು ಬಿಡುವವರೆಗೆ ಆರಾಧ್ಯದೇವತೆಯ ನಾಮಸ್ಮರಣೆ ಮಾಡುತ್ತ ಕೂಡ್ರಬೇಕು. ಇರಲಿ. ಈ ರಾಶಿಯವರಿಗೆ ಈ ಗ್ರಹಣವು ಜನ್ಮಸ್ಥ ಅಂದರೆ ಪ್ರಥಮ ಸ್ಥಾನದಲ್ಲಿ ಆಗುವದರಿಂದ ಗ್ರಹಪೀಡೆ, ದೇಹಕ್ಲೇಶ, ಕಲಹ, ವಿಶೇಷ ಪರಾಕ್ರಮ, ಮಕ್ಕಳ ಉನ್ನತಿ ಮೊದಲಾದ ಫಲ ಕೊಡುವದು. ಮೂರು ತಿಂಗಳವರೆಗೆ ಇದರ ಫಲ ಉಳಿಯುವದು.

ವೃಷಭ

ಪ್ರಕೃತಿ ಮತ್ತು ಸ್ತ್ರೀ ಸುಖ ಅನುಕೂಲ. ಆದರೆ ಮಕ್ಕಳುಮರಿಗಳಿಗೆ ಕ್ಲೇಶ ಇಲ್ಲವೆ ಪರನೆ. ಅಪ್ರಿಯ. ಪ್ರಾಪಂಚಿಕ ವಿಷಯಗಳಲ್ಲಿ ಮೇಲೆ ಮೇಲೆ ಸಮಾಧಾನ ಎನಿಸಿದರೂ ಒಳಗೆ ಎಲ್ಲ ಬಗೆಯ ದಗದಗಿ. ಉದ್ಯೋಗದಲ್ಲಿ ಪ್ರಗತಿ ಉತ್ತಮ ಆದರೆ ಪ್ರತಿಷ್ಠೆ ಮತ್ತು ಲಾಭ ಸಾಧಾರಣವೇ. ಪ್ರತಿ ಕೆಲಸದಲ್ಲಿ ಅಂದಾಜಿಗಿಂತ ಹೆಚ್ಚು ವೆಚ್ಚ ಮತ್ತು ವಿಲಂಬ. ದೊಡ್ಡವರ ಸತ್ಕಾರಕ್ಕಾಗಿ ವೇಳೆಯ ಮತ್ತು ದುಡ್ಡಿನ ಹರಿಹರಿಯುವ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಿಕ ಉದಾಸೀನ ಬಹಳ ಆದರೆ ಯಶಸ್ಸು ನಿಮಗೆ. ಮಿತ್ರರಲ್ಲಿ ವಿರೋಧ. ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಆದರೆ ಪತ್ರವ್ಯವಹಾರ ಮತ್ತು ಲೇಖಿ ಕೆಲಸ ಅತಿ ತೊಂದರೆಯದು. ರೋಹಿಣಿಯ ಕೊನೆಯ ೩ ಮತ್ತು ಮೃಗಾದ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೪—೫—೬ ಅನುಕೂಲ.

೯ ನೇ ತಾರೀಕಿಗಾಗುವ ಸೂರ್ಯಗ್ರಹಣ ಈ ರಾಶಿಗೆ ೧೨ ನೆಯದಾಗುವದು ಅದರಿಂದ ಅತಿ ವೆಚ್ಚ ಕ್ಷುಲ್ಲಕ ಕಾರ್ಯಗಳಿಗಾಗಿ ವೈಮನಸ್ಸು ಮಕ್ಕಳಿಗೆ ಕ್ಲೇಶ ಭಾಗ್ಯದಲ್ಲಿ ವಿಘ್ನ ಮುಂತಾದ ಫಲಗಳುಂಟಾಗುವವು.

ಮಿಥುನ

ಪ್ರಕೃತಿ ಎಲ್ಲರದೂ ಉತ್ತಮ ಆದರೆ ಮನೆಯಲ್ಲಿ ಒಬ್ಬರ ಪತ್ನಿ ಎರಡನೆಯವರಿಗಿಲ್ಲದಂತೆ ವ್ಯವಹಾರ ನಡೆಯುವದು. ಮಕ್ಕಳಲ್ಲಿ ಒಬ್ಬರ ಉನ್ನತಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಸಂಗ್ರಹ ಮತ್ತು ಸಮಾಧಾನ ಕಡಿಮೆ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಮಿತ್ರಸುಖ ಉತ್ತಮ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಆರಿದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ಒಂದನೇ ಚರಣಕ್ಕೆ ತೊಂದರೆಯಿಂದ ಯಶಸ್ಸು. ತಾ. ೫-೬-೭-೮ ಅನುಕೂಲ.

ಸೂರ್ಯಗ್ರಹಣ ೧೧ನೆಯದಾಗುವದರಿಂದ ಅತಿ ಲಾಭ. ಬಗೆ ಬಗೆಯ ಉನ್ನತಿ. ಮಿತ್ರಸುಖ ದೊರೆಯುವವು.

—೧೪ ನೇ ಪುಟಕ್ಕೆ

ಸಂಪಾದಕೀಯ ಟೀಕೆಟಿಪ್ಪಣಿಗಳು

ಗಲಭೆಗಳ ನಂತರದ ಕರ್ತವ್ಯ

ಮಹಾತ್ಮಾ ಗಾಂಧಿಯವರ ಕೊಲೆಯ ನಂತರ ಉತ್ತರ ಕರ್ನಾಟಕದ ಸಂಸ್ಥಾನಗಳ ಮತ್ತು ಬೆಳಗಾವಿ ಜಿಲ್ಲೆಯ ಹಲವು ಭಾಗಗಳಲ್ಲಿ ಅನರ್ಥಗಳ ಸಂಭವಿಸಿದವು. ಈ ಬಗೆಗೆ ಈಗಾಗಲೆ ಸುದ್ದಿ ಸಂಗತಿಗಳು ಪ್ರಸಿದ್ಧವಾಗಿವೆ ಸಂಯುಕ್ತ ಕರ್ನಾಟಕದ ವಿಶೇಷ ಸುದ್ದಿಗಾರರು ಈ ಸಂತ್ರಸ್ತ ಭಾಗಗಳಲ್ಲಿ ಸಂಚರಿಸಿ ವಿವರಗಳನ್ನು ಪ್ರಸಿದ್ಧಿಸಿದ್ದಾರೆ. ಸುಮಾರು ೬೬೩ ಹಳ್ಳಿಗಳು ಇದಕ್ಕೆ ಆಹುತಿಯಾಗಿ ೨೮೫೭ ಕುಟುಂಬಗಳು ಹಾನಿಗೀಡಾಗಿವೆ. ೪೬೧ ಲಕ್ಷಕ್ಕಿಂತ ಹೆಚ್ಚು ಹಾನಿಯಾಗಿದೆಯೆಂದು ಅವರ ಅಂದಾಜು. ಹಲವು ಸುದ್ದಿಗಾರರ ಮತ್ತು ಪ್ರಮುಖ ವ್ಯಕ್ತಿಗಳ ಅಭಿಪ್ರಾಯದಂತೆ ಹಾನಿ ಇನ್ನೂ ಹೆಚ್ಚಿಗೆ ಆಗಿದೆ ಎಂದು ತಿಳಿಯುತ್ತದೆ. ಈ ದುರ್ಘಟನೆಗಳ ಹಲವು ಚಿತ್ರಗಳನ್ನೂ ಪ್ರಕಟಿಸಿದ್ದೇವೆ. ಈ ಬಗೆಯ ಅನಾಹುತಗಳಂತೂ ಆಗಿ ಹೋದುವು, ಇದೀ ದೇಶವೆ ಇದಕ್ಕಾಗಿ ಮರುಗಿತು. ಆದರೆ ಇಷ್ಟರಿಂದಲೆ ಕಾರ್ಯವಾಯಿತೆಂದು ತಿಳಿಯಕೂಡದು. ಈ ಬಗೆಯ ಅನಾಹುತಗಳಿಗೆ ಕಾರಣವೇನು, ಹೊಣೆಗಾರರಾರು, ಅವರಿಗೆ ಯಾವ ಬಗೆಯ ಶಾಸನ ಮಾಡಬೇಕು ದುಃಖಕ್ಕೊಳಗಾದವರಿಗೆ ಪರಿಹಾರವನ್ನೆಂತು ಕೊಡಬೇಕು, ಮುಂದೆ ಈ ಬಗೆಯ ಅನರ್ಥ ಗಲಭೆಗಳು ಸಂಭವಿಸದಂತೆ ನೋ ೯ ಡಿಕೊಳ್ಳುವದೆಂತು ಮುಂತಾದ ವಿಷಯಗಳ ಬಗ್ಗೆ ವಿಚಾರ ಮಾಡಿ ನಿರ್ಣಯ ತಕ್ಕೊಳ್ಳುವದು ಅತ್ಯವಶ್ಯವಾಗಿದೆ. ಬ್ರಾಹ್ಮಣನೊಬ್ಬ ಗಾಂಧೀಜಿಯ ಕೊಲೆ ಮಾಡಿದನೆಂದು ಇಡೀ ಬ್ರಾಹ್ಮಣ ಜಾತಿಯ ಮೇಲೆಯೆ ಈ ಭಾಗದ ಜನರು ಸಿಡಿದೇಳಬೇಕಾದರೆ ತಾತ್ಕಾಲಿಕ ರೊಚ್ಚಿಗಿಂತ ಹಿಂದಿನಿಂದಲೆ ಜಾತಿದ್ವೇಷ ತುಂಬಿದ್ದರ ಪರ್ಯವಸಾನ ಇಂತು ಆಯಿತೆಂದು ಹೇಳುವದು ಸಯುಕ್ತಿಕವಾಗುವದು. ಅಲ್ಲದೆ ಈ ಸಂಧಿಯ ದುರ್ಲಾಭವನ್ನು ಅನೇಕರು ಪಡೆದರೆಂಬುದೂ ನಿರ್ವಿವಾದವಾಗಿದೆ. ಇದರಲ್ಲಿ ಬ್ರಾಹ್ಮಣರ ಹಾನಿಯಾಗಿದ್ದರೂ ಅದು ಇಡೀ ರಾಷ್ಟ್ರದ ಹಾನಿಯೆಂಬುದನ್ನು ಯಾರೂ ಮರೆಯರು. ಏಕೆಂದರೆ ಬ್ರಾಹ್ಮಣ ಸಮಾಜವು ಒಟ್ಟು ಭಾರತೀಯ ಸಮಾಜದ ಒಂದು ಅಂಗ; ಇಡೀ ದೇಶವು ಅಪ್ಪರ ಮಟ್ಟಿಗೆ ಬಡವಾಯಿತು. ಎಂಬುದನ್ನು ಯಾರೂ ಅಲಕ್ಷಿಸಬಾರದು. ಇಡೀ ಜನತೆಯ ಸಂರಕ್ಷಣೆಯ ಹೊಣೆ ಹೊತ್ತ ಸರಕಾರೀ ಅಧಿಕಾರಿಗಳು ಈ ಸಂದರ್ಭದಲ್ಲಿ ಕರ್ತವ್ಯಚ್ಯುತರಾದರೆಂಬುದು ಪ್ರಸಿದ್ಧವಾದ ವರದಿಗಳಿಂದ ಗೊತ್ತಾಗುವದು. ಆದುದರಿಂದ ಈ ಬಗ್ಗೆ ನಿಷ್ಪಕ್ಷಪಾತ ವಿಚಾರಣೆ ನಡೆಸುವದು ಅವಶ್ಯವಾಗಿದೆ. ಕೇಂದ್ರ ಸರಕಾರದವರು ಕೊಲ್ಹಾಪುರ ಸಂಸ್ಥಾನದಲ್ಲಾದ ಗಲಭೆಗಳ ಬಗ್ಗೆ ನ್ಯಾ. ವಾಡಿಯಾರ ಅಧ್ಯಕ್ಷತೆಯಲ್ಲಿ ವಿಚಾರಣಾ ಮಂಡಳವನ್ನು ನಿಯಮಿಸಿದ್ದುಂಟು. ಅದರಂತೆಯೇ ಮುಂಬಯಿ ಸರಕಾರವೂ ಯೋಜಿಸುವದು ಅವಶ್ಯವಾಗಿದೆ. ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳುವದು ಕ್ರಮಪ್ರಾಪ್ತವಾಗಿದೆ. ನಿರಾಶ್ರಿತರ ಸಮಸ್ಯೆ, ಹೊಲ ಸಾಗುವಳಿ ಸಮಸ್ಯೆ ಮೊದಲಾದವುಗಳನ್ನು ಬಿಡಿಸಬೇಕಾಗಿದೆ. ಸಮಾಜದಲ್ಲಿ ಉಂಟಾದ ವಿಧ್ವಂಸಕವೃತ್ತಿಯು ಅಳಿದು ಹೋಗುವಂತೆ ಎಲ್ಲವಿಧದ ಪ್ರಯತ್ನ ಮಾಡಬೇಕಾದುದು ಕರ್ತವ್ಯವಾಗಿದೆ. ಸಂಕುಚಿತ ಜಾತೀಯತೆಯ ಈ ಮಹಾರೋಗವನ್ನು ನಾಶಗೊಳಿಸಲು ಎಲ್ಲರೂ ಪ್ರಯತ್ನಿಸಬೇಕು. ದುಷ್ಟನಿಗ್ರಹವಾಗದಿದ್ದರೆ ದೇಶದಲ್ಲಿ ಶಾಂತಿ ಸುವ್ಯವಸ್ಥೆ ನೆಲಸಲಾರದು. ಸಂಪಾದಿಸಿದ ಸ್ವಾತಂತ್ರ್ಯವೂ ಚಿರಕಾಲ ಬಾಳದು. ಇದನ್ನು ಎಲ್ಲರೂ ತಿಳಿದುಕೊಳ್ಳುವದು ಅವಶ್ಯವಾಗಿದೆ.

ರೇಲ್ವೆ ಮಂತ್ರಿಗಳ ಹಾರೈಕೆ

ಹಿಂದುಸ್ತಾನ ಸರಕಾರದ ರೇಲ್ವೆ ಮಂತ್ರಿಗಳಾದ ಡಾ. ಜಾನ ಮಥಾಯರು ಕಳೆದ ತಿಂಗಳು ೨೪ ಕ್ಕೆ ಹುಬ್ಬಳ್ಳಿ ಗದಗ ಪರಿಹರಗಳಿಗೆ ಸಂದರ್ಶನವಿತ್ತು ಬೆಂಗಳೂರಿಗೆ ಪ್ರಯಾಣ ಬೆಳೆಸಿದರು. ಕೇಂದ್ರ ಸರಕಾರದ ಮಂತ್ರಿಗಳು ಕರ್ನಾಟಕಕ್ಕೆ ಭೆಟ್ಟಿಕೊಡುವದು ಇದೇ ಮೊದಲನೇ ಸಲವಾದ್ದರಿಂದ ಜನರು ಅತ್ಯಂತ ಸಂಭ್ರಮದಿಂದ ಅವರನ್ನು ಸ್ವಾಗತಿಸಿದರು. ಡಾ. ಮಥಾಯರು ಕರ್ನಾಟಕದ ಸೌಂದರ್ಯವನ್ನೂ ನಿಸರ್ಗಸಂಪತ್ತನ್ನೂ ಬಹುವಾಗಿ ಬಣ್ಣಿಸಿ ಕನ್ನಡಿಗರ ಅತಿಥಿಸತ್ಕಾರವನ್ನು ಮನಸಾರೆ ಹೊಗಳಿದರು. ಕರ್ನಾಟಕದಲ್ಲಿ ರೇಲ್ವೆ ಸೌಕರ್ಯ ಸಾಕಷ್ಟಿಲ್ಲೆಂಬುದು ಗೊತ್ತಿದೆ, ಈ ಕೊರತೆಯನ್ನು ಹೋಗಲಾಡಿಸಲು ಶಕ್ಯವಿದ್ದಷ್ಟು ಪ್ರಯತ್ನಿಸುವದಾಗಿ ಆಶ್ವಾಸಿಸಿದರು. ರೇಲ್ವೆ ಕೆಲಸಗಾರರೇ ತಮ್ಮ ಸೊತ್ತಾಗಿದ್ದು ಅವರ ಪರಿಸ್ಥಿತಿಯನ್ನು ಸುಧಾರಿಸುವದಾಗಿ ಹೇಳಿದರು. ರೇಲ್ವೆಶಾಖೆಯಲ್ಲಿ ಹೆಚ್ಚು ಸುಧಾರಣೆಯಾಗಿ ಇಂದು ಗಾಡಿಗಳ ಓಡಾಟ ಮೊದಲಾದ್ದರಲ್ಲಿ ಕಂಡುಬರುತಿರುವ ಲೋಪದೋಷಗಳನ್ನು ಸರಿಪಡಿಸುವ ಉಪಾಯಗಳನ್ನು ಯೋಜಿಸಲು ವರ್ಕಶಾಪಿನಲ್ಲಿ ಎಲ್ಲವನ್ನೂ ವಿಚಾರಿಸಿದರು. ಕರ್ನಾಟಕಕ್ಕೆ ಅವಶ್ಯವಾದ ಹೊಸ ರೇಲ್ವೆ ಮಾರ್ಗಗಳ ಬಗೆಗೆ ವಿವರಗಳನ್ನು ತಿಳಿದುಕೊಂಡು ಸಹಾನುಭೂತಿಪರ ವಿಚಾರಮಾಡುವುದಾಗಿ ಆಶ್ವಾಸಿಸಿದರು. ಗದಗಿನಲ್ಲಿ ಏರ್ಪಡಿಸಲ್ಪಟ್ಟ ಮೂರನೆಯ ಕರ್ನಾಟಕ ಸ್ವದೇಶೀ ಪ್ರದರ್ಶನದ ಉದ್ಘಾಟನ ಮಾಡುತ್ತ ನಿಸರ್ಗಸಂಪತ್ತಿನ ಬೀಡಾದ ಕರ್ನಾಟಕದ ಔದ್ಯೋಗಿಕ ಅಭಿವೃದ್ಧಿಯ ಮುಂಗುರುತು ಈ ಪ್ರದರ್ಶನವಾಗಲೆಂದು ಹಾರೈಸಿದರು. ನಾಡಿನ ಸಂಪತ್ತನ್ನು ಅಭಿವೃದ್ಧಿಪಡಿಸಲು ಎಲ್ಲರೂ ಪ್ರಯತ್ನಿಸಬೇಕು. ಸರಕಾರಕ್ಕೆ ಶಕ್ಯವಿದ್ದ ಸಹಾಯವನ್ನು ನೀಡಬೇಕು ಎಂದು ಮುಂತಾಗಿ ಹೇಳಿದರು. ಸ್ವತಂತ್ರ ಹಿಂದುಸ್ತಾನ ಸರಕಾರದ ಪ್ರಥಮ ರೇಲ್ವೆಮಂತ್ರಿಗಳ ಈ ಆಶ್ವಾಸನ ಬೇಗ ಫಲಿಸಿ ಕರ್ನಾಟಕದ ಔದ್ಯೋಗಿಕ ಅಭಿವೃದ್ಧಿಯಾಗಿ ನಾರಿಗೆಯ ಸೌಕರ್ಯ ಹೆಚ್ಚಿ ಭಾರತದ ಪ್ರಾಂತಗಳಲ್ಲಿ ಅದು ಉನ್ನತ ಸ್ಥಾನ ಪಡೆಯಲಿ.

ಪೋಲೀಸರಿಗೆ ಸದುಪದೇಶ

ಮುಂಬಯಿ ಪ್ರಾಂತದ ಪೋಲೀಸ ಇನಸ್ಪೆಕ್ಟರ ಜನರಲ್‌ರಾದ ಶ್ರೀ ಕಾಮಟೆಯವರು ಸಮಯ ಸಿಕ್ಕಾಗೆಲ್ಲ ಪೋಲೀಸರಿಗೆ ಸದುಪದೇಶ ಮಾಡಿ ಕರ್ತವ್ಯದ ಅರಿವನ್ನುಂಟು ಮಾಡುತಿರುವುದು ಅಭಿನಂದನೀಯ ಸಂಗತಿಯಾಗಿದೆ ಹಿಂದುಸ್ತಾನವಿಂದು ಸ್ವತಂತ್ರವಾಗಿ ಪ್ರಜೆಗಳು ಮತ್ತು ಅಧಿಕಾರಿಗಳಲ್ಲಿ ಮೊದಲಿನ ಒಂದುಬಗೆಯ ದ್ವೇಷಭಾವವು ಅಳಿದುಹೋಗಿದ್ದರಿಂದ ಪರಸ್ಪರರು ಅತ್ಯಂತ ಸ್ನೇಹ ಸೌಹಾರ್ದದಿಂದ ಇರುವದು ಕ್ರಮಪ್ರಾಪ್ತ ಮತ್ತು ಅವಶ್ಯವಾಗಿದೆ. ಆದರೆ ಇಷ್ಟರಿಂದಲೆ ಅಧಿಕಾರಿಗಳ ದುರ್ಲಾಭ ಪಡೆಯಲು ಯಾರೂ ಹವಣಿಸಬಾರದು, ಆ ಬಗೆಯ ಅವಕಾಶವೂ ಅವರಿಗೆ ದೊರೆಯದಂತೆ ನೋಡಿಕೊಳ್ಳಬೇಕು ಶ್ರೀ ಕಾಮಟೆಯವರು ಈ ಮಾತನ್ನು ಒಳ್ಳೆ ಮಾರ್ಮಿಕವಾಗಿ ಹೇಳಿರುವರು. ಜನತಾರಾಜ್ಯವೆಂದು ತಿಳಿದು ಭಯಭೀತರಾಗಿ ಕರ್ತವ್ಯ ಮಾಡುವದನ್ನು ಬಿಟ್ಟುಕೊಡದೆ, ಕಾಯದೆಗಳಂತೆಯೆ ಕೆಲಸಮಾಡುತ್ತ ಹೋಗಬೇಕೆಂದು ಅವರು ಹೇಳಿದರು. ಜನತಾಸೇವೆಯೇ ಪೋಲೀಸರ ಧ್ಯೇಯವಾಗಿರಬೇಕು, ಕರ್ತವ್ಯ ಪಾಲನೆಯಲ್ಲಿ ಯಾರಭಿಡೆ ಮುರವತ್ತುಗಳಿಗೂ ಒಳಗಾಗಬಾರದೆಂದು ಸ್ವಚ್ಛವಾಗಿ ಹೇಳಿರುವರು. ದೇಶಭಕ್ತರ ಸೋಗಿನಲ್ಲಿ ಬಂದು; ಅನವಶ್ಯಕ ವರ್ಚಸ್ಸು ಹಾಕುವಜನರಿಗೆ ಪೋಲೀಸರು ಬಗ್ಗಬಾರದೆಂದೂ ಅವರು ಹೇಳಿರುವರು. ಇದು ಅತ್ಯಂತ ಸಮಂಜಸವಾಗಿದೆ. ಕೆಲ ಅಹಂಮನ್ಯ ಕಾರ್ಯಕರ್ತರು ಈ ಬಗೆಯ ವರ್ಚಸ್ಸು ಹಾಕುವ ಸಂಭವವನ್ನು ಕಂಡುಕೊಂಡೇ ಅವರು ಹೀಗೆ ಹೇಳಿರ ವರೆಂಬುದು ಸತ್ಯವಿದೆ. ಕಾಯದೆಗಳಂತೆ ಅಧಿಕಾರಿಗಳು ಕರ್ತವ್ಯ ಮಾಡುವದರಿಂದಲೆ ದೇಶದಲ್ಲಿ ಶಾಂತಿ ಸುವ್ಯವಸ್ಥೆ ಉಂಟಾಗುವದು. ಯಾರೊಬ್ಬರ ವರ್ಚಸ್ಸಿಗೆ ಬಲಿಬಿದ್ದು ದುಷ್ಟನಿಗ್ರಹ ಶಿಷ್ಟಪರಿಪಾಲನೆಯ ಕರ್ತವ್ಯದಲ್ಲಿ ತಪ್ಪಿದರೆ ದೇಶದಲ್ಲಿ ಅರಾಜಕತೆಯುಂಟಾಗುವ ಸಂಭವವುಂಟು. ಆದುದರಿಂದ ಪೋಲೀಸರು ತಮ್ಮ ಮುಖ್ಯಾಧಿಕಾರಿಗಳ ಉಪದೇಶದ ಮರ್ಮವನ್ನರಿತುಕೊಂಡು ಕರ್ತವ್ಯ ಪಾಲಿಸಬೇಕು ಅಹಂಮನ್ಯ ಕೆಲ ರಾಜಕೀಯ ಪಂಗಡದವರ ಅಪಪ್ರಚಾರಕ್ಕೆ ಬಲಿಬಿದ್ದು ಕರ್ತವ್ಯಚ್ಯುತರಾಗಬೇಡಿರೆಂದೂ ಹೇಳಿ ಸಂಬಳ ಪ್ರಮಾಣ ಕಡಿಮೆಯೆಂದು ಸಿದ್ಧಮಾಡಿಕೊಟ್ಟರೆ ಅದನ್ನು ಹೆಚ್ಚಿಸುವ ಬಗ್ಗೆ ಪ್ರಯತ್ನಿಸುವದಾಗಿಯೂ ಆಶ್ವಾಸಿಸಿದರು. ಈ ಸಂಬಂಧದಲ್ಲಿ ಪೋಲೀಸರ ಮತ್ತು ಇನ್ನಿತರ ಸರಕಾರೀ ನವಕರರ ಅಶಕ್ತತೆಯ ದುರ್ಲಾಭ ಪಡೆದು ಸಂಪು ಮುಂತಾದ್ದನ್ನು ಹೂಡಿಸಲು ಪ್ರಯತ್ನಿಸುವ ಜನರ ಬಲೆಯಲ್ಲಿ ಬೀಳಬೇಡಿರೆಂದೂ ಅವರು ಅಪ್ರತ್ಯಕ್ಷವಾಗಿ ಹೇಳಿರುವರು. ಶ್ರೀ ಕಾಮಟೆಯವರ ಈ ಉಪದೇಶವು ಸಮಯೋಚಿತ, ಸಮಂಜಸವಾಗಿದ್ದು ಪೋಲೀಸರು ಮತ್ತು ಇತರ ಅಧಿಕಾರಿಗಳು ಅದರಂತೆ ವರ್ತಿಸಲು ಪ್ರಯತ್ನಿಸಬೇಕೆಂದು ಬಿನ್ನವಿಸುತ್ತೇವೆ.

ಡಾ. ಅಂಬೇಡಕರರ ಮುಕ್ತಾಫಲ

ಕೇಂದ್ರ ಸರಕಾರದ ನ್ಯಾಯ ಶಾಖೆಯ ಸಚಿವರಾದ ಡಾ. ಬಿ. ಆರ್. ಅಂಬೇಡಕರರು ಲಖನೌದಲ್ಲಿ ಕೂಡಿದ್ದ ಹಿಂದುಳಿದ ವರ್ಗದ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಮಾಡಿದ ಭಾಷಣ ಅವರ ಘನತೆ ಸ್ಥಾನಮಾನಗಳಿಗೆ ಒಗ್ಗುವಂತಹದಿಲ್ಲೆಂದು ಹೇಳಬೇಕಾಗುವದು ಕೇಂದ್ರ ಮಂತ್ರಿತ್ವವನ್ನು ವಹಿಸಿದ ಡಾ. ಅಂಬೇಡಕರರು ಕಾಂಗ್ರೆಸ ಪಕ್ಷವನ್ನು ಟೀಕಿಸುವಾಗ ಹೆಚ್ಚು ವಿಚಾರ ಮಾಡಬೇಕಿತ್ತು. ಹಿಂದುಳಿದ ವರ್ಗದವರು ಕಾಂಗ್ರೆಸ್ಸಿನಲ್ಲಿ ಸೇರಿದರೆ ಶತ್ರುಗಳ ಗುಂಪಿನಲ್ಲಿ ಸೇರಿದಂತಾಗುವದೆಂದು ಬಾಬಾಸಾಹೇಬರ ಅಭಿಪ್ರಾಯ. ಕಾಂಗ್ರೆಸ್ಸು ಉರಿಯುವ ಮನೆಯಂತಿದ್ದು ಅದರಲ್ಲಿ ಸೇರುವದರಿಂದ ನಮ್ಮ ಉದ್ಧಾರವೆಂದೂ ಆಗದು; ಇನ್ನು ಕೆಲವರುಷಗಳಲ್ಲಿ ಕಾಂಗ್ರೆಸ್ಸು ನಾಶಹೊಂದಿದರೆ ನಮಗೇನು ಆಶ್ಚರ್ಯವೆನಿಸದು, ಎಂದು ಮುಂತಾಗಿ ಅವರು ಅಭಿಪ್ರಾಯ ಪಟ್ಟಿರುವರು. ಇಂದಿನ ಪ್ರಜಾ ಯುಗದಲ್ಲಿ ಅಂಬೇಡಕರರಂಥ ಸರ್ವಾಧಿಕಾರಿಗಳ ಬಲೆಯಲ್ಲಿ ಕಾಂಗ್ರೆಸ್ಸು ಬೀಳಲು ಒಪ್ಪದ್ದರಿಂದಲೆ ಅವರು ಕಾಂಗ್ರೆಸ್ಸನ್ನು ಇಷ್ಟು ಕಡೆಗಣ್ಣಿನಿಂದ ನೋಡುತ್ತಿರುವರು. ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಟ್ಟ ಕಾಂಗ್ರೆಸ್ಸು ಇನ್ನು ಹಲವು ವರುಷಗಳಲ್ಲಿ ನಾಶಹೊಂದಿದರೆ ಆಶ್ಚರ್ಯ ವೆನಿಸದು ಎಂದು ಭವಿಷ್ಯ ನುಡಿದಿರುವದೇ ಆಶ್ಚರ್ಯವಲ್ಲವೇ? ಜಾತೀಯತೆಯ ಬೆಂಬಲದಿಂದಲೇ ಸ್ವಪ್ರತಿಷ್ಠೆ ಬೆಳೆಸಿಕೊಳ್ಳುವ ಹಂಬಲವುಳ್ಳವರು ಅಮಕೊನೆಯವರೆಗೆ ಇದ್ದೇ ತೀರಬೇಕೆಂದು ಹೇಳುತ್ತಿರುವದು ಅಸ್ವಾಭಾವಿಕವೇನೂ ಇಲ್ಲ. ತಾವು ಹೇಳಿದಂತೆ ಕುಣಿಯಬೇಕೆಂದು ಇಂಥವರು ಬಯಸುವದೂ ಉಂಟು ಆದರೆ ಇಂದಿನ ಪ್ರಜಾಯುಗದಲ್ಲಿ ಇದು ಶಕ್ಯವಾಗದೆಂಬ ಮಾತನ್ನು ಅವರು ಬೇಗ ತಿಳಿದಷ್ಟು ಒಳಿತು. ಜನತೆಯೀಗ ಎಚ್ಚತ್ತಿದ್ದು ತನ್ನ ಕಲ್ಯಾಣದ ಮಾರ್ಗವನ್ನರಿತಿದೆ. ಡಾ. ಅಂಬೇಡಕರರಂಥವರು ಏನೇ ಹೇಳಿದರೂ ಅತ್ತ ಕಿವಿಗೊಡದೆ ಕಾಂಗ್ರೆಸ್ಸಿನಂಥ ಲೋಕಸೇವಕ ಸಂಸ್ಥೆಯನ್ನು ಸೇರಿ ಸ್ವಂತದ ಮತ್ತು ದೇಶದ ಉದ್ಧಾರ ಮಾರ್ಗವನ್ನನುಸರಿಸಲು ಅದು ಸಿದ್ಧವಿದೆ ಸದ್ಯದ ವಿಷಮ ವಾತಾವರಣದಲ್ಲಿ ಡಾ. ಅಂಬೇಕರರಂಥವರು ಪ್ರತ್ಯೇಕತಾ ಭಾವನೆಯನ್ನು ಹುಟ್ಟಿಸುತ್ತಿರುವದು ನಿಜವಾಗಿಯೂ ದುರ್ದೈವದ ಸಂಗತಿ.

ಕಾಶ್ಮೀರ ಸಮಸ್ಯೆ

ಯುಕ್ತ ರಾಷ್ಟ್ರ ಸಂಘವು ಸಮಸ್ಯೆಯನ್ನೆಲ್ಲ ಪೂರ್ಣವಾಗಿ ತಿಳಿದುಕೊಂಡು ನ್ಯಾಯ್ಯವಾದ ನಿರ್ಣಯವನ್ನು ಕೊಡಬಹುದೆಂದು ವಿಶ್ವಾಸದಿಂದ ಹಿಂದುಸ್ತಾನ ಸರಕಾರವು ಕಾಶ್ಮೀರ ಪ್ರಶ್ನೆಯನ್ನು ಆದಕ್ಕೊಪ್ಪಿಸಿತು. ಆದರೆ ಸಂಘವು ಈಗ ಕೊಟ ನಿರ್ಣಯದಿಂದ ಅದು ಕಾಶ್ಮೀರ ಸಮಸ್ಯೆಯ ಹಿನ್ನೆಲೆಯನ್ನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲವೆಂದೇ ಹೇಳಬೇಕಾಗುವದು. ಪಾಕಿಸ್ತಾನ ಸರಕಾರದವರು ಮತ್ತು ದಾಳಿಗಾರರು ಕಾಶ್ಮೀರಿನಲ್ಲಿ ನಡೆಸಿದ ಹಾವಳಿಯನ್ನು ತಡೆಯುವದಕ್ಕೆ ಕಾಶ್ಮೀರ ಮಹಾರಾಜರು ಹಿಂದುಸ್ತಾನ ಸರಕಾರದ ನೆರೆ ಹೋಗಲಿಕ್ಕೆಬೇಕಾಯಿತು. ಹಿಂದುಸ್ತಾನ ಒಕ್ಕೂಟವನ್ನು ಅದು ಸೇರದೆ ಹೀಗೆಮಾಡುವದು ಶಕ್ಯವೇ ಇರಲಿಲ್ಲ. ಅದು ಹಿಂದುಸ್ತಾನ ಒಕ್ಕೂಟದಲ್ಲಿ ಸೇರಿತು. ಕಾಶ್ಮೀರ ಸಮಸ್ಯೆಯನ್ನು ಬಿಡಿಸಬೇಕಾದರೆ ಪಾಕಿಸ್ತಾನದ ಕೂಡ ಯುದ್ಧವನ್ನಾದರೂ ಸಾರಬೇಕು, ಇಲ್ಲವೆ ಯುಕ್ತರಾಷ್ಟ್ರ ಸಂಘಕ್ಕೆ ಸಮಸ್ಯೆಯನ್ನೊಪ್ಪಿಸಿ ಶಾಂತ ಮಾರ್ಗವನ್ನವಲಂಬಿಸಬೇಕು. ಇವೆರಡೇ ಮಾರ್ಗಗಳು ಹಿಂದುಸ್ತಾನ ಸರಕಾರದ ಮುಂದಿದ್ದವು. ಅರ್ಥಾತ್ ಒಕ್ಕೂಟ ಸರಕಾರವು ಎರಡನೇ ಮಾರ್ಗವನ್ನವಲಂಬಿಸಿತು. ಕಾಶ್ಮೀರ ಮಹಾರಾಜರಾಪರಿ ಲೋಕಪ್ರಿಯ ಮುಂದಾಳು ಶೇಖ ಅಬ್ದುಲ್ಲಾರ ನೇತೃತ್ವದಲ್ಲಿ ಮಂತ್ರಿಮಂಡಳ ಸ್ಥಾಪಿಸಿ ಆಡಳಿತವನ್ನು ಸಾಗಿಸಹತ್ತಿರುವರು. ಪ್ರಜಾಪ್ರಭುತ್ವ ಕಳಪದಿಯ ಮೇಲೆಯೇ ಆಡಳಿತ ಸಾಗಹತ್ತಿದೆ. ಆದರೂ ದಾಳಿಗಾರರ ಹಾವಳಿ ಹಾಗೆಯೆ ಸಾಗಿತು. ಪಾಕಿಸ್ತಾನ ಸರಕಾರದ ಪ್ರತ್ಯಕ್ಷ ಅಪ್ರತ್ಯಕ್ಷ ಪ್ರೋತ್ಸಾಹ ಸಹಾಯದಿಂದಲೆ ದಾಳಿಗಾರರ ಹಾವಳಿಗೆ ಬಲಸಿಕ್ಕಿತೆಂಬುದನ್ನು ಮರೆಯಕೂಡದು. ಇದೆಲ್ಲ ಹಿನ್ನೆಲೆಯನ್ನು ತಿಳಿದುಕೊಳ್ಳದೆ ಭದ್ರತಾ ಮಂಡಳವು ಹಿಂದುಸ್ತಾನ ಪಾಕಿಸ್ತಾನ ಸರಕಾರಗಳ ಆರೋಪ ಪ್ರತ್ಯಾರೋಪಗಳ ದೃಷ್ಟಿಯಿಂದ ಎಲ್ಲವನ್ನು ವಿಚಾರಿಸಿ ಒಂದು ಬಗೆಯ ಒಡಂಬಡಿಕೆಯ ಗೊತ್ತುವಳಿಯನ್ನು ಸ್ವೀಕರಿಸಿತು. ದಾಳಿಗಾರರನ್ನು ಹಿಂಡಿಸುವ ಧೋರಣೆಯನ್ನು ಸ್ವೀಕರಿಸದೆ, ಒಂದು ಬಗೆಯಿಂದ ಮೋರೆಯ ಮೇಲೆ ಕ್ಕೆ ಎಳೆದು ಸಮಾಧಾನ ಪಡೆಸುವ ಧೋರಣೆ ವಹಿಸಿತು. ಈ ನಿರ್ಣಯವಾದರೂ ಒಂದು ಬಗೆಯಿಂದ ಪಾಕಿಸ್ತಾನಕ್ಕೆ ಅನುಕೂಲವಿದೆಯೆಂದು ಹೇಳಬಹುದಾಗಿದೆ. ಆಂತೆಯೇ ಹಿಂದುಸ್ತಾನ ಸರಕಾರವು ಅದನ್ನು ನಿರಾಕರಿಸಿದೆ. ಪಾಕಿಸ್ತಾನವೂ ಆಕ್ಷೇಪಿಸಿದೆ. ಈ ರೀತಿ ಭದ್ರತಾಮಂಡಳದ ನಿರ್ಣಯ ನಿಷ್ಪ್ರಯೋಜಕವಾಯಿತೆಂದು ಹೇಳಬೇಕಾಗಿದೆ. ಈ ಸಮಸ್ಯೆಯನ್ನು ಬಿಡಿಸಲು ಹಿಂದುಸ್ತಾನ ಸರಕಾರ ಇನ್ನುಮುಂದೆ ಹೊಸ ದಾರಿಯನ್ನೂ ಹುಡುಕಬೇಕಾಗುವದು. ಸೈನ್ಯ ಚಟುವಟಿಕೆಗಳನ್ನೂ ನಡೆಸಬೇಕಾಗುವದು. ಸದ್ಯಾ ಮಂಡಳವನ್ನು ಬಹಿಷ್ಕರಿಸಿ ಹೊಸ ಉಪಕ್ರಮವನ್ನು ಮಾಡಬೇಕಾಗುವದು. ಭದ್ರತಾಮಂಡಳವು ಪಾಕಿಸ್ತಾನ ಮತ್ತು ಕಾಶ್ಮೀರ ಸಮಸ್ಯೆ ಬಿಡಿಸುವಲ್ಲಿ ಅಯಶಸ್ವಿಯಾಗಿ ತನ್ನ ಅಂತರ್‌ರಾಷ್ಟ್ರೀಯ ಅಸ್ತಿತ್ವವನ್ನೇ ಕಳೆದುಕೊಂಡಿತೆಂದು ಹೇಳಬಹುದಾಗಿದೆ.

ಹೈದರಾಬಾದ ಪ್ರಶ್ನೆ

ಹೈದರಾಬಾದದ ಸಮಸ್ಯೆ ದಿನಗಳೆದಂತೆ ಜಟಿಲವಾಗುತ್ತ ನಡೆದಿದೆ. ಈ ಮೊದಲು ನಾವು ಅಭಿಪ್ರಾಯಪಟ್ಟಂತೆ ನಿಜಾಮ ಸಾಹೇಬರು ರಜಕಾರ ಸಂಸ್ಥೆಯ ಬಲೆಯಲ್ಲಿ ಬಿದ್ದುದರಿಂದ ಸಂಸ್ಥಾನದ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಅವರು ಸಮರ್ಥರಾಗಲೊಲ್ಲರು. ರಜಕಾರ ಸಂಸ್ಥೆಯ ಧುರೀಣರಾದರೊ ದಿನವೊಂದಕ್ಕೆ ಮೂನಬಂದಂತೆ ಭಾಷಣಮಾಡಿ ಜನರನ್ನು ಉದ್ರೇಕಿಸುತಿರುವರು. ಭಾರತ ಸರಕಾರವಾದರೂ ಉಗ್ರ ಕ್ರಮವನ್ನು ತೆಗೆದುಕೊಳ್ಳತೆ ಆದಷ್ಟು ಸಂಧಾನ ಮಾರ್ಗವನ್ನೇ ಅನುಸರಿಸಿ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕೆಂದು ಈ ವರೆಗೆ ಪ್ರಯತ್ನಿಸುತ್ತ ಬಂದಿದೆ. ಆದರೆ ಇದೀಗ ಪರಿಸ್ಥಿತಿ ವಿಕೋಪಕ್ಕೆ ಬಂದದ್ದರಿಂದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ ನೆಹರು ಇವರು ಅ. ಭಾ. ಕಾಂಗ್ರೆಸ ಸಮಿತಿಯ ಸಭೆಯಲ್ಲಿ ಭಾಷಣ ಮಾಡುತ್ತ ಹೈದರಾಬಾದದ ಮುಂದೆ ಎರಡೇ ಎರಡು ಮಾರ್ಗಗಳು ಉಳಿದಿವೆಯೆಂದು ಸ್ಪಷ್ಟ ಹೇಳಿದ್ದಾರೆ. ಸೇರ್ಪಡೆ ಇಲ್ಲವೆ ಯುದ್ಧ ಇವೇ ಆ ಎರಡು ಮಾರ್ಗಗಳು. ಯುದ್ಧದಿಂದ ಬಹಳ ಕಾಲಹರಣವಾಗುವದು. ಮತ್ತು ಇತರ ಸಮಸ್ಯೆಗಳೂ ಉದ್ಭವಿಸುವವು. ಆದುದರಿಂದ ನಾವು ಆ ಮಾರ್ಗವನ್ನು ಹಿಡಿದಿಲ್ಲ. ಆದರೆ ಇಷ್ಟರಿಂದಲೇ ನಾವು ಯುದ್ಧಕ್ಕೆ ಅಂಜುತ್ತೇವೆ ಎಂದು ಮಾತ್ರ ಯಾರೂ ತಿಳಿಯಕೂಡದು ಎಂದು ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸಿರುವರು. ದಿನವೂ ನಡೆಯುತಿರುವ ಅನರ್ಥಗಳನ್ನು ನೆನೆದರೆ ಭಾರತ ಸರಕಾರವು ಆದಿದಂತೆ ಬೇಗ ಕಾರ್ಯ ಮಾಡಲೆಂದು ಎಲ್ಲರೂ ಹಾರಯಿಸುವದು ಸ್ವಾಭಾವಿಕ. ಕಾಲಹರಣ ಮಾಡುತ್ತ ನಡೆದರೆ ಶತ್ರುಗಳು ಪ್ರಬಲರಾಗುತ್ತ ಹೋಗುವರೆಂಬುದು ನಿರ್ವಿವಾದ. ಆದುದರಿಂದ ಆದಷ್ಟು ಬೇಗ ಈ ಸಮಸ್ಯೆಯನ್ನು ಬಿಡಿಸುವದು ಅತ್ಯವಶ್ಯವಾಗಿದೆ. ನಿಜಾಮ ಪ್ರಭುಗಳಾದರೂ ಹೊಣೆಗಾರ ಸರಕಾರವನ್ನು ಕೊಡಲು ಮುಂದಾಗದ್ದರಿಂದ ಪ್ರಜೆಗಳು ಹಕ್ಕು ಬಾಧ್ಯತೆಗಳಿಗಾಗಿ ಆಂದೋಲನ ನಡೆಸಿದ್ದುಂಟು. ಅನೇಕ ಜನರನ್ನು ಬಂಧಮುಕ್ತಮಾಡಿ ಪರಿಸ್ಥಿತಿಯನ್ನು ಸರಿಪಡಿಸಲು ಫರ್ಮಾನ್ ಹೊರಡಿಸಿದ್ದರೂ ಜನತೆಗೆ ಬೇಕಾದುದನ್ನೇ ಕೊಡಲು ನಿಜಾಮರು ಇನ್ನೂ ಸಿದ್ಧರಾಗದ್ದರಿಂದ ಇದೆಲ್ಲ ನಿಷ್ಪ್ರಯೋಜಕವೇ ಆಗಿದೆ. ಅದರಲ್ಲಿಯೂ ಕಾಂಗ್ರೆಸ ಧುರೀಣರ ಬಿಡುಗಡೆ ಮಾಡದೆ ಪ್ರಜೆಗಳಿಗೆ ಹೊಣೆಗಾರವಾದ ರಾಜ್ಯ ಪ್ರಸ್ಥಾಪಿಸುವುದಾಗಿ ಹೇಳುವದು ಧಾರ್ಷ್ಟ್ಯದ ಮಾತೇ. ನಿಜಾಮ ಸಾಹೇಬರು ಈ ಬಗೆಯ ನಿರರ್ಥಕ ಫರ್ಮಾನಗಳನ್ನು ಹೊರಡಿಸುವದಕ್ಕಿಂತ ಪ್ರಜೆಗಳ ಆಸೆ ಆಕಾಂಕ್ಷೆಗಳನ್ನು ಈಡೇರಿಸಲು ಹೊಣೆಗಾರ ಸರಕಾರವನ್ನು ಕೂಡಲೇ ಪ್ರಸ್ಥಾಪಿಸಬೇಕು ಮತ್ತು ಭಾರತ ಸರಕಾರದೊಡನೆ ಶಾಶ್ವತ ಒಪ್ಪಂದವನ್ನೂ ಮಾಡಿಕೊಳ್ಳಬೇಕು, ಇಲ್ಲದಿದ್ದರೆ ಪರಿಸ್ಥಿತಿ ಕೈಮೀರಿ ಹೋಗುವದೆಂಬುದು ಸುಸ್ಪಷ್ಟ. ಪಂಡಿತ ಜವಾಹರರ ಮೇಲಿನ ಎಚ್ಚರಿಕೆಯ ಬಗ್ಗೆ ರಜಕಾರ ಧುರೀಣ ರಜವಿಯವರು ಕಾಂಗ್ರೆಸ್ಸ ಪಕ್ಷದಂತೆ ಇದ್ದರೂ ಸಣ್ಣ ಸಣ್ಣ ಸೀರಿನ ಧ್ವಾರಿಗಳು ಅವನ್ನು ಕೊರೆಯದೆ ಬಿಡವೆಂದು ಉದ್ಗಾರ ತೆಗೆದಿರುವರು. ಅಂತೂ ಭಾರತ ಪರ್ವತದಂತಿರುವದೆಂದು ಒಪ್ಪಿದ್ದೂ ಎಷ್ಟೋ ಮಹತ್ವದ ಮಾತೇ ಸೈ. ಹಿಂದೀ ಮುಸಲ್ಮಾನರಾದರೂ ಈ ಸಂದರ್ಭದಲ್ಲಿ ನಿಜಾಮರಿಗೆ ತಿಳಿವಳಿಕೆ ಹೇಳಿ ಅವರನ್ನು ದಾರಿಗೆ ತರುವದು ಕರ್ತವ್ಯವಾಗಿದೆ. ಹೈದರಾಬಾದದ ಮುಖ್ಯ ಮಂತ್ರಿ ಲಾಯಕ ಅಲ್ಲಿಯವರು ಇತ್ತೀಚೆಗೆ ಶಾಸನಸಭೆಯಲ್ಲಿ ಮಾಡಿದ ಭಾಷಣವೂ ಸಮಸ್ಯೆ ಬಿಡಿಸಲು ಸಹಾಯಕವಾಗಿಲ್ಲ ಸಾಮ ದಾನ ಭೇದೋಪಾಯಗಳನ್ನೆಲ್ಲ ಯೋಜಿಸಿ ಫಲಪ್ರಾಪ್ತವಾಗದಿದ್ದರೆ ದಂಡೋಪಾಯವನ್ನು ತೆಗೆದುಕೊಳ್ಳುವ ಪ್ರಸಂಗ ತಪ್ಪಿದ್ದಲ್ಲ ಎಂಬುದನ್ನು ಸಂಬಂಧಿಸಿದವರೆಲ್ಲ ತಿಳಿದುಕೊಳ್ಳಬೇಕೆಂದು ಸೂಚಿಸುತ್ತೇವೆ.

ಇಟೆಲಿಯಲ್ಲಿ ಕ್ರಿಶ್ಚಿಯನ್ ಡೆಮೊಕ್ರಾಟರ ಗೆಲುವು

ಇಟೆಲಿಯಲ್ಲಿ ಹೊಸ ಚುನಾವಣೆ ನಡೆದು ಹೋಯಿತು. ಕಮ್ಯುನಿಸ್ಟ ಮುಖಂಡರಾದ ಸೀನಾರ ಪಾಲಮಿರೋ ತೊಗ್ಲಿಯಾಟ್ಟಿಯು ಸಾಮಾನ್ಯ ಚುನಾವಣೆಯು ಕಪಟ ಸೂತ್ರದಿಂದ ನಡೆಯಿತೆಂಬೂ ಪ್ರಜಾಪ್ರಭುತ್ವದ ಬಹುಮತಕ್ಕೆ ವಿರುದ್ಧವಾಗಿ ವಿದೇಶೀಯರ ಬೆಂಬಲವುಳ್ಳ ಸರಕಾರ ತಲೆಯೆತ್ತಿದೆಯೆಂದೂ ಹೇಳಿದನು. ಮುಖ್ಯ ಮಂತ್ರಿ ಅಲ್ಸಾಯಿಡ್ ಡಿ. ಗಾಸ್ಪೇರಿಯವರ ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಪಕ್ಷಕ್ಕೆ ೩೦೪ ಸ್ಥಳಗಳು ಸಿಕ್ಕಿದ್ದು, ಮುಸೋಲಿನಿಯು ಅಧಿಕಾರಕ್ಕೆ ಬಂದ ನಂತರ ಮೊದಲ ಸಲ ನಡೆದ ಈ ಸಾರ್ವತ್ರಿಕ ಚುನಾವಣೆಯಲ್ಲಿ ಅಪೂರ್ವ ಜಯ ಲಭಿಸಿದ್ದೇ ಮೇಲಿನಂತೆ ಕಮ್ಯುನಿಸ್ಟರು ಗೊಣಗಲು ಕಾರಣವಾಯಿತು.

ಚುನಾವಣೆಯಲ್ಲಿ ಕಮ್ಯುನಿಸ್ಟರಿಗೆ ೧೨೮, ಸೋಶಿಯಲಿಸ್ಟರಿಗೆ ೨೯, ನ್ಯಾಶನಲ್ ಬ್ಲಾಕಿನವರಿಗೆ ೧೫, ಮೊನಾರ್ಕಿಸ್ಟರಿಗೆ ೧೩, ಪ್ರಜಾ ಪಕ್ಷದವರಿಗೆ ೩, ಫ್ಯಾಸಿಸ್ಟರಿಗೆ ೪, ಇತರರಿಗೆ ೫ ಸ್ಥಳಗಳು ಸಿಕ್ಕಿದವು. ಸಭೆಯ ಒಟ್ಟು ಸ್ಥಳ ಸಂಖ್ಯೆ ೫೭೪. ಮೇಲ್ಮನೆಯಲ್ಲಿ ಕ್ರಿಶ್ಚಿಯನ್ ಡೆಮೊಕ್ರಾಟರಿಗೆ ೧೩೦ ಸ್ಥಳಗಳೂ ಕಮ್ಯುನಿಸ್ಟರಿಗೆ ಕೇವಲ ೭೪ ಸ್ಥಳಗಳೂ ದೊರಕಿವೆ. ಪ್ರಜಾ ಪ್ರತಿನಿಧಿ ಸಭೆಯ ಚುನಾವಣೆಯಲ್ಲಿ ಮೊದಲಿನವರಿಗೆ ೧೨೭,೫೧,೮೪೧ ಮತಗಳೂ ಎರಡನೆಯವರಿಗೆ ೮೦,೨೫,೯೯೦ ಮತಗಳೂ ಬಿದ್ದಿವೆ.

ಮೇಲಿನ ಪರಿಣಾಮವನ್ನು ಅಂತರಿಕ ಮಂತ್ರಿ ಸೀನಾರ ಸೆಲ್ಬಾರವರು ಸಾರುತ್ತ– 'ಇಟೆಲಿಯ ಜನತೆಯು ಕ್ರಿ. ಡೆ. ಪಕ್ಷದಲ್ಲಿ ವಿಶ್ವಾಸವನ್ನು ವ್ಯಕ್ತಮಾಡಿದೆ. ಒಂದೇ ಪಕ್ಷಕ್ಕೆ ಶಾಸನ ಸಭೆಯ ಎರಡೂ ಮನೆಗಳಲ್ಲಿ ಸ್ಪಷ್ಟ ಬಹುಮತ ಸಿಕ್ಕಿರುವುದು, ಇಟೆಲಿಯ ಇತಿಹಾಸದಲ್ಲಿ ಇದೇ ಮೊದಲು ಎಂದರು.

ಕ್ರಿ. ಡೆ. ಪಕ್ಷಕ್ಕೆ ಇಟೆಲಿಯಲ್ಲಾದ ಜಯದಿಂದ ಗ್ರೀಕ (ಕಮ್ಯುನಿಸ್ಟ) ಕೂಟ ಯೋಧರು ಕಣ್ಣುಬಂದಿರುವರು. ಚುನಾವಣೆಯಲ್ಲಿ ಅಮೇರಿಕನ್ನರ ಹಸ್ತಕ್ಷೇಪವಿದೆಯೆಂದು ಕಮ್ಯುನಿಸ್ಟರ ಆರೋಪ. ಟ್ರೀಸ್ಟೆಯ ಜನರೂ ಚರ್ಚಿಲ್ಲರೂ ಬಹಳ ಸಂತುಷ್ಟರಾಗಿದ್ದಾರೆ. 'ಸ್ಟಾಲಿನ್ನರ ಅಧಿಕಾರದಿಂದ ಇಟೆಲಿ ಪಾರಾಯಿತು' ಎಂದು ಚರ್ಚಿಲ್ಲರು ಉದ್ಗರಿಸಿದರಂತೆ.

ಚುನಾವಣೆಯಲ್ಲಿ ಅಪಜಯ ಹೊಂದಿದ ಕಮ್ಯುನಿಸ್ಟರೀಗ ಕೆರಳಿನಿಂತಿದ್ದಾರೆ. ಕಳೆದ ೨೫ ರಲ್ಲಿ ಲೋರೇಟೋ ಚೌಕದಲ್ಲಿ ಸಭೆ ಸೇರುವದನ್ನು ತಡೆದದ್ದಕ್ಕಾಗಿ ಸುಮಾರು ೧೫ ಸಾವಿರ ಕಮ್ಯುನಿಸ್ಟರು ಪೋಲೀಸರ ಮೇಲೆ ಹರಿಹಾಯ್ದರೆಂದು ಸುದ್ದಿ. ಘರ್ಷಣದಲ್ಲಿ ೧೬ ಜನ ಕಮ್ಯುನಿಸ್ಟರು ಗಾಯಗೊಂಡರು. ಪೋಲೀಸರ ಪ್ರಕಾರ ಒಬ್ಬ ಸತ್ತನೆಂದೂ ಇಬ್ಬರು ಗಾಯಗೊಂಡರೆಂದೂ ವರದಿಯಿದೆ.

ಅರಬರಿಗೆ ಶಸ್ತ್ರ ಸಹಾಯ ಯೋಜನೆ

ಬ್ರಿಟಿಶರು ಪಾಲಿಸ್ತಾನದಿಂದ ಹೊರ ಹೊರಟ ಮರುದಿನ ಪಾಲಿಸ್ತಾನವನ್ನು ವಶಪಡಿಸಿಕೊಳ್ಳಲು ಅರಬರ ಸಿದ್ಧತೆ ಜೋರಾಗಿ ಸಾಗಿದೆ. ಅರಬ ರಾಷ್ಟ್ರಗಳೆಲ್ಲ ತಮ್ಮ ತಮ್ಮ ಸರದಿಯಂತೆ ಪಾಲಿಸ್ತಾನದ ಅರಬರಿಗೆ ಶಸ್ತ್ರಾಸ್ತ್ರಗಳನ್ನೂ ಜನಧನಗಳನ್ನೂ ಸಲ್ಲಿಸಲು ಒಂದು ಯೋಜನೆಯನ್ನು ತಯಾರಿಸುವ ನಿಮಿತ್ತ ತಮ್ಮ ಸೇನಾಪತಿಗಳನ್ನು ಟ್ರಾನ್ಸ್ ಜೋರ್ಡನ್ನಿನ ಅಮ್ಮಾನ್ ಎಂಬಲ್ಲಿ ಸಭೆ ಸೇರಿಸಿದವು.

ನಾಯಕರಲ್ಲಿ ಮುಫ್ತಿ, ಲೆಬನಾನಿನ ಮುಖ್ಯ ಮಂತ್ರಿ, ಸಿರಿಯದ ಮುಖ್ಯಮಂತ್ರಿ, ಇರಾಕಿನ ಮುಖ್ಯ ಸೇನಾಧಿಕಾರಿ ಇವರು ಪ್ರಮುಖರು. ಕೈರೋದಲ್ಲಿ ಅರಬಸಂಘವು ಬಲವಾದ ಸೈನ್ಯ ಸಹಾಯವನ್ನು ಪಾಲಿಸ್ತಾನೀ ಅರಬರಿಗೆ ನೀಡುವುದಾಗಿ ಸಾರಿದೆ. ಅರಬ ರಾಷ್ಟ್ರಗಳ ಸೇನಾಧಿಕಾರಿಗಳು ಇರಾಕ್ ಮತ್ತು ಸಿರಿಯಗಳಿಂದ ತರಬೇತು ಹೊಂದಿದ ಸ್ವಯಂಸೇವಕರನ್ನು ಕರೆದುಕೊಂಡು ಪಾಲಿಸ್ತಾನಕ್ಕೆ ಹೋಗುವರೆಂದೂ ವರದಿಯಿದೆ.

ಅಲೆಕ್ಸಾಂಡ್ರಿಯದ ವಿಶ್ವವಿದ್ಯಾನಿಲಯದಲ್ಲಿ ಯೆಹೂದಿ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡಬಾರದೆಂದು ಅರಬ ವಿದ್ಯಾರ್ಥಿಗಳು ಅಲ್ಲಿ ಗೊತ್ತುವಳಿಯನ್ನು ಪಾಸು ಮಾಡಿದುದಾಗಿಯೂ ತಿಳಿದು ಬಂದಿದೆ.

ಅರಬರ ಉತ್ಸಾಹಕ್ಕೆ ಮೇರೆಯುಲ್ಲವೆಂಬಂತೆ ತೋರುತ್ತದೆ. ಬ್ರಿಟಿಶರು ಹೊರಟು ಹೋದ ಮೇಲೆ ಪಾಲಿಸ್ತಾನದಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಕಾಯಲು ಸೈನ್ಯಸಹಾಯ ನೀಡುವುದಾಗಿ ಅಮೇರಿಕವು ಭದ್ರತಾಮಂಡಲಕ್ಕೆ ತಿಳಿ

ಅಂತರ್ದೇಶೀಯ

ಸಿದ್ದು ಸುವೇದ್ಯವಿದೆ. ಮೊದಲು ಪಾಲಿಸ್ತಾನದ ವಿಭಜನೆಗೆ ಮತಕೊಟ್ಟು ಬಳಿಕ ಅದು ವಿಶ್ವಸ್ತಿಕೆಗೊಳಗಾಗಬೇಕೆಂದು ಮತ್ತೊಂದು ಮಾತನಾಡುವ ಅಮೇರಿಕದ ಸ್ವಾರ್ಥಪರ ಚಾಣಾಕ್ಯನೀತಿಯಲ್ಲಿ ನ್ಯಾಯವೆಲ್ಲಿಂದ ಬಂತು ? ಯೆಹೂದಿಗಳಿಗೆ ಒಳಗಿಂದೊಳಗೇ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿರುವ ಸುದ್ದಿ ಹೊರಬಿದ್ದಿದೆ. ವಿಶ್ವಸ್ತಿಕೆಗೆ ಪಾಲಿಸ್ತಾನವನ್ನೊಪ್ಪಿಸುವ ಮಾತನ್ನು ರಶಿಯವು ತೀವ್ರವಾಗಿ ವಿರೋಧಿಸಿದೆ. ಅಂದರೆ ನಾಳೆ ಪಾಲಿಸ್ತಾನದಲ್ಲಿ ಚೀನದಲ್ಲಾದಂತೆ ಅರಬ ಯೆಹೂದಿಗಳ ಪಕ್ಷಕ್ಕೆ ನಿಂತು ಅಮೇರಿಕ ರಶಿಯಗಳು ಯುದ್ಧ ಮಾಡುವ ಸಂದರ್ಭ ಒತ್ತಿ ಬರಲಿದೆಯೆನ್ನಬೇಕಾಯಿತಲ್ಲವೇ ? ಪಾಲಿಸ್ತಾನದಲ್ಲಿ ರಕ್ತದ ಕಾಲುವೆ ಹರಿದು ಜಗತ್ತಿನಲ್ಲಿ ಹೊಸ ಆಂದೋಲನ, ಘರ್ಷಣ ಪ್ರಾರಂಭವಾಗುವ ಮುಂಗುರುಹುಗಳಾಗಿರಬಹುದೇ ಇವು ?

ಇತ್ತೀಚಿನ ಸುದ್ದಿ ಹೀಗಿದೆ — ಪಾಲಿಸ್ತಾನದಲ್ಲೆಲ್ಲಾ ಅತಿ ದೊಡ್ಡದಾದ ಅರಬ ಪಟ್ಟಣವೆನಿಸಿದ ಜಾಫಾದ ಮೇಲೆ ಯೆಹೂದಿ ಕ್ರಾಂತಿಕಾರರು ದಾಳಿ ಮಾಡುತ್ತಿದ್ದಾಗ ಕಳೆದ ೨೬ ರಲ್ಲಿ ಬ್ರಿಟಿಶ ಅಂಟಿಟ್ಯಾಂಕ ಬಂದೂಕಗಳು ಅವ

ಚಿಯಾಂಗರು ಪುನಃ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಇದರಿಂದ ಅವರು ತಮ್ಮ ಯುದ್ಧ ಯೋಜನೆಯನ್ನು ಯಥಾ ನಿರ್ಣಯ ಕಾರ್ಯರೂಪದಲ್ಲಿ ಮುನ್ನಡೆಸಲು ಅನುಕೂಲವೊದಗಿದೆ. ಚೀನದ ಯಾದವಿಯ ಹಿಂದೆ ಅಡಗಿದ ಜಾಗತಿಕ ಶಕ್ತಿಗಳೆಂದರೆ ಬಂಡವಾಲಶಾಹಿ ಮತ್ತು ಸಮಾಜಸತ್ತಾವಾದ–ಅರ್ಥಾತ್ ಅಮೇರಿಕ ಮತ್ತು ರಶಿಗಳು ಯಾದವಿಯ ಜಯಾಪಜಯಗಳನ್ನು ಎವೆಯಿಕ್ಕದೆ ನಿರೀಕ್ಷಿಸುತ್ತಿವೆ. ಜನತೆಯ ಸ್ಥಿತಿ ಮಾತ್ರ ತ್ರಿಶಂಕುವಿನದಾಗಿದೆ. ಅಮೇರಿಕ ರಶಿಯಗಳ ಸತ್ವ ಪರೀಕ್ಷೆಯಾದರೂ ಬೇಗ ಆಗಿಹೋದರೆ ನಿಕ್ಕ ಚಿಕ್ಕ ದೊಡ್ಡ ಪ್ರಭುತ್ವಗಳಲ್ಲಿಯ ಪ್ರಜೆಗಳು ಯಾವುದಾದರೊಂದು ಪರಂಪರೆಗೆ ಶರಣಾಗಿ ತಣ್ಣಗೆ ಬಾಳಬಹುದಲ್ಲವೆ. ?

ಸಿಂಹಳ ಸೈನಿಕರ ದಂಗೆ

ಮಲಯದ ರಾಜಧಾನಿಯಾದ ಕಾಲಾಲಂಪುರದಲ್ಲಿರುವ 'ಸಿಲೋನ್ ರಾಯಲ್ ಪಯನಿಯರ್ ಕೋರಿ'ನ ೪೦೦ ಯೋಧರು ಕಳೆದ ೨೪ ರಲ್ಲಿ

ಉತ್ತರದಲ್ಲಿ ಎಣ್ಣೆ ಸವಲತ್ತನ್ನು ಪಡೆದು ಸೈನ್ಯವನ್ನು ರಶಿಯವು ಹಿಂತೆಗೆದುಕೊಂಡಿತು. ಆದರೀಗ ಒಪ್ಪಂದಕ್ಕೆ ಇರಾನೀ ಶಾಸನ ಸಭೆ ಒಪ್ಪಲಿಲ್ಲ ಇದೇ ಸ್ನೇಹ ಸಂಬಂಧ ಕೆಡಲು ಕಾರಣವಾಯಿತು.

ನೆರೆಯ ರಾಷ್ಟ್ರವಾದ ಅಫಗಾನಿಸ್ತಾನದೊಡನೆ ಸಹ ಇರಾನಿನ ಸಂಬಂಧ ನೆಟ್ಟಗಿಲ್ಲ. ೫ ಲಕ್ಷ ಇರಾನಿಗಳ ಜೀವನೋಪಾಯಕ್ಕೆ ಕಾರಣವಾದ ಹಿರಮಂಡ ನದಿಯನ್ನು ಹೊರಳಿಸಿದ ಬಗ್ಗೆ ಇರಾನು ಸಂ. ರಾ. ಸಂಘಕ್ಕೆ ದೂರು ಕೊಡಬಹುದು.


ತನ್ನ ದಕ್ಷಿಣಕ್ಕಿರುವ ಇರಾಕಿನೊಡನೆ ಇರಾನು ಸ್ನೇಹದಿಂದ ಇದೆ. ತುರ್ಕಸ್ತಾನದೊಡನೆಯೂ ಅದು ಸೌಹಾರ್ದ ಬೆಳೆಸಿಕೊಂಡಿದೆ. ಇದರಿಂದ ವಂಶಪಾರಂಪರ್ಯದ ವೈರ ನಂದಿದಂತಾಗಿದೆ.

ಇತರ ಸಂಬಂಧವೆಂದರೆ ಬ್ರಿ. ಇರಾನಿ ಎಣ್ಣೆ ಕಂಪನಿ ಮತ್ತು ಇಂಪೀರಿಯಲ್ ಬ್ಯಾಂಕು. ಇವುಗಳಿಗೆ ಕೊಟ್ಟ ಸವಲತ್ತುಗಳನ್ನು ರದ್ದುಮಾಡಬೇಕೆಂದು ಕೆಲವು ಇರಾನಿಗಳ ಅಭಿಪ್ರಾಯವಾಗಿದೆ. ವಿದೇಶೀಯರನ್ನು ಇರಾನಿನ ವ್ಯಾಪಾರಕ್ಷೇತ್ರದಿಂದ ಹೊರದೂಡುವ ಬಗ್ಗೆ ವಿಚಾರ ನಡೆದಿದೆ. ಅಂಥ ಕಾಯದೆ ಬಂದರೆ ತಂತಮ್ಮ ದೇಶಗಳಲ್ಲಿಯ ಇರಾನೀ ವ್ಯಾಪಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಾಗುವುದೆಂದು ವಿದೇಶೀ ರಾಯಭಾರಿಗಳು ಸರಕಾರಕ್ಕೆ ತಿಳಿಸಿದ್ದಾರೆ.



ಡಿ. ಗಾಸ್ಪೇರಿ

೪೦ ಲಕ್ಷ ಡಾಲರಿನ ಬಲ ?



ಸಾಮ್ಯವಾದಿ ಪೆಟ್ರೋನೆನ್ನಿ



ಕಮ್ಯುನಿಸ್ಟ ತೊಗ್ಲಿಯಾಟಿ

ಇಬ್ಬರೂ ಸೇರಿದರೂ ಅಪಜಯ.

ರನ್ನು ಇದಿರಿಸಿದವು. ಇದರಿಂದ ನೂರಾರು ಜನರಿಗೆ ಮರಣ ಮತ್ತು ಗಾಯಗಳು ಸಂಭವಿಸಿದವೆಂದೂ ಅರಬರು ಸಣ್ಣ ಸಣ್ಣ ದೋಣಿಗಳ ಮೂಲಕ ಪಲಾಯನ ಮಾಡತೊಡಗಿದರೆಂದೂ ಯೆಹೂದಿಗಳ ಹೇಳಿಕೆ ಇದೆ. ತೆಲ್ ಅವೀವದ ಎಲ್ಲ ವಾಹನಗಳನ್ನೂ ಕ್ರಾಂತಿಕಾರರು ವಶಪಡಿಸಿಕೊಂಡರೆಂದೂ ಅವರ ಸಂಖ್ಯೆ ಸುಮಾರು ೩೦೦೦ ವಿತ್ತೆಂದೂ ಹೇಳಲಾಗಿದೆ. ಜೆರುಸಲೇಮಿನಲ್ಲಿ ಬ್ರಿಟಿಶರು ಈಗ ಸೈನ್ಯದ ಕಾಯದೆಯನ್ನು ಜಾರಿ ಮಾಡಿದ್ದಾರೆ.

ಚೀನೀ ಕಮ್ಯುನಿಸ್ಟರ ಒತ್ತಡ

ಚೀನೀ ಕಮ್ಯುನಿಸ್ಟರು ೧೧ ವರ್ಷ ತಮ್ಮ ರಾಜಧಾನಿಯಾಗಿದ್ದ ಯೆನಾನನ್ನು ಪುನಃ ಪ್ರವೇಶಿಸಿದ್ದರು. ಈಗ ಮತ್ತೆ ಮತ್ತೆ ದಕ್ಷಿಣಕ್ಕೆ ಅವರು ಒತ್ತಿಬರುತ್ತಿರುವುದಾಗಿ ಸುದ್ದಿ ಬಂದಿದೆ. ಅದರಿಂದ ಶೆನ್ಸಿ ಪ್ರಾಂತದ ರಾಜಧಾನಿಯಾದ ಸಿಯಾನ್ ಮತ್ತು ಜನರಲ್ ಹ್ಯೂಚಂಗ ನಾನರ ಮುಖ್ಯ ಠಾಣ್ಯಗಳಿಗೆ ಅಂಜಿಕೆಯುಂಟಾಗಿದೆಯೆಂದು ಹೇಳಲಾಗುತ್ತದೆ.

ಸರಕಾರೀ ಸೈನ್ಯವು ಯೆನಾನನ್ನು ಬಿಟ್ಟು ಬರುವಾಗ ನಗರವನ್ನು ಸಂಪೂರ್ಣವಾಗಿ ನಾಶಗೊಳಿಸಿ ಬಂದುದಾಗಿ ವರದಿಯಿದೆ.

ಈಗ ಸರಕಾರದ ವಶದಲ್ಲಿರುವ ಬಹುಪ್ರಜಾನಿರ್ಭರವಾದ ಶೆಕೂನ್ ಪ್ರಾಂತವನ್ನು ಆಕ್ರಮಿಸುವದೇ ಕಮ್ಯುನಿಸ್ಟರ ದಕ್ಷಿಣದ ಒತ್ತಡದ ಉದ್ದೇಶವಂತೆ.

ದಕ್ಷಿಣ ಶೆನ್ಸಿಯಲ್ಲಿಯ ಕಮ್ಯುನಿಸ್ಟ ದಲಗಳು ಹೊಪೆಯ ಗಡಿಯಲ್ಲಿ ಯುದ್ಧ ಹೂಡಿ ೨ ನಗರಗಳನ್ನು ವಶಪಡಿಸಿಕೊಂಡಿವೆ.

ಸರಕಾರೀ ಸುದ್ದಿಯ ಪ್ರಕಾರ ಶೆಕೂನಿನಲ್ಲಿ ಪ್ರವೇಶಿಸಲು ದಕ್ಷಿಣ ಹೋನಾನಿನಲ್ಲಿ ೩೦,೦೦೦ ಯೋಧರ ೩ ನೆಯ ಮಹಾಬಲವೊಂದನ್ನು ಕಮ್ಯುನಿಸ್ಟರು ರಚಿಸಿದ್ದಾರೆಂದು ತಿಳಿಯಬರುತ್ತದೆ ೩೦೦ ಮೈಲು ಪ್ರದೇಶವನ್ನು ಹಾದುಕೊಂಡು ಆ ಮಹಾಬಲ ಬರಬೇಕಾಗಿದೆಯಂತೆ.

ಯುರೋಪಿಯನ್ನರ ಮೇಲೆ ಬಿದ್ದರೆಂದೂ ಅದರಿಂದ ಅನೇಕ ಯುರೋಪಿಯನ್ನರಿಗೆ ಅಪಘಾತ ಸಂಭವಿಸಿತಲ್ಲದೆ ೩ ಅಂಗಡಿಗಳು ಲೂಟಿಗೆ ತುತ್ತಾದವೆಂದೂ ತಿಳಿಯುತ್ತದೆ. ಮುಖ್ಯ ರಸ್ತೆಯಲ್ಲಿ ೧೪೦ ಸಿಂಹಳೀಯರು ಗಲಭೆ ಹಾಕಿದರೆಂದೂ ಅದಕ್ಕೆ ಸಿಂಹಳೀ ಸೈನಿಕರ ಮೋಟಾರೊಂದನ್ನು ಮಿಲಟರಿ ಪೋಲೀಸರು ತಡೆದುದು ಕಾರಣವಾಯಿತೆಂದೂ ಹೇಳಲಾಗಿದೆ. ಚೀನೀಯರ ಮೇಲೆಯೂ ಸೈನಿಕರು ಅಪಪ್ರಚಾರ ನಡೆಸಿದರು. ಅಷ್ಟರಲ್ಲಿ ಸಶಸ್ತ್ರ ಗೂರ್ಖ ದಲ ಬಂದು ದಂಗೆಗಾರರನ್ನು ತಡೆದು ಶಿಬಿರಗಳಿಗೆ ಅಟ್ಟಿತು.

ಪಟ್ಟಣದಲ್ಲಿಯ ಸಿಂಹಳೀಯರು ಮಲಯದ ಸಿಂಹಳ ಮಹಾಮಂಡಲದ ಸಭೆಯನ್ನು ಕೂಡಿಸಿ ಈ ಪರಿಸ್ಥಿತಿಯನ್ನು ವಿಚಾರಿಸಲು ಸಿಂಹಳ ಸರಕಾರಕ್ಕೆ ಬಿನ್ನವಿಸಿಕೊಳ್ಳುವ ಪ್ರಯತ್ನ ನಡೆಸಿದರು.

ಮಿಲಿಟರಿ ಮತ್ತು ಸಿವಿಲ್ ಪೋಲೀಸರು ೪೦ ಸಿಂಹಳೀಯರನ್ನು ಗಲಭೆ ನಡೆಸಿದ ಕೂಡಲೆ ಹಿಡಿದುಹಾಕಿರುವರು. ಬ್ರಿಟಿಶ ಸಿಪಾಯಿಗಳು ಅಲ್ಲಿಗೆ ಬಂದೊಡನೆ ಅವರಿಗೂ ಸಿಂಹಳೀಯರಿಗೂ ಕಲಹವಾಯಿತು; ಅವರ ಮೇಲೆ ಕಲ್ಲು ಇಟ್ಟಿಗೆಗಳನ್ನು ತೂರತೊಡಗಲು ದಂಗೆಗಾರರನ್ನು ತಡೆಯಲಾಯಿತು. ಈಗ ಪರಿಸ್ಥಿತಿ ಹತೋಟಿಗೆ ಬಂದಿದೆ.

ಇರಾಣದ ಸಮಸ್ಯೆ

ಭೌಗೋಲಿಕ ಸ್ಥಾನದ ದೆಸೆಯಿಂದ ಇರಾನಿಗೆ ಮಧ್ಯ ಪೂರ್ವದಲ್ಲಿ ಮಹತ್ವ ಪ್ರಾಪ್ತಿಯಾಗಿದೆ, ಆ ಮೂಲಕ ಅದು ಅನೇಕ ಸಮಸ್ಯೆಗಳನ್ನೆದುರಿಸಬೇಕಾಗಿ ಬಂದಿದೆ.

ಅತಿದೊಡ್ಡ ಸಮಸ್ಯೆ ಎಂದರೆ ರಶಿಯದೊಡನೆ ಸ್ನೇಹ ಸಂಬಂಧ ಕೆಟ್ಟಿದ್ದು. ಅದರ ಪುನರುದ್ಧಾರ ಮಾಡಬೇಕಾಗಿರುವುದು. ಯುದ್ಧ ಕಾಲದಲ್ಲಿ ರಶಿಯದ ಸೈನ್ಯಕ್ಕೆ ಇರಾನಿನ ಮುಖಾಂತರ ಅಮೇರಿಕವು ಸಾಮಗ್ರಿಗಳನ್ನು ಪೂರಯಿಸಿತು.

ಈಗಿನ ಇರಾನೀ ಮಂತ್ರಿಮಂಡಲಕ್ಕೆ ಶಾಸನ ಸಭೆಯಲ್ಲಿ ಬಲವಾದ ವಿರೋಧವಿದೆ.

೦ ೦ ೦

ಸ್ನೇಹ ಸಹಕಾರ ಒಪ್ಪಂದವನ್ನು ಫಿನ್‌ಲೆಂಡು ರಶಿಯದೊಡನೆ ಮಾಡಿಕೊಳ್ಳುತ್ತಿರುವ ಸನ್ನದ ಸಂದರ್ಭದಲ್ಲಿ ಫಿನ್ನಿಷ್ ಕಮ್ಯುನಿಸ್ಟ ಪಕ್ಷದ ಅತಿವಾದಿಗಳು ಸಂಯುಕ್ತ ಸರಕಾರವನ್ನು ಬುಡಮೇಲುಮಾಡಲು ಪ್ರಯತ್ನಿಸಿದರೆಂದು ಅಲ್ಲಿಯ ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷದವರು ಸಾರಿದ್ದಾರೆ.

೦ ೦ ೦

ಕ್ಯಾಲಿಫೋರ್ನಿಯದಲ್ಲಿ ಸ್ಟೇಂಡರ್ಡ ಆಯಿಲ್ ಯಂತ್ರಾಲಯದಲ್ಲಿ ಒಂದು ದೊಡ್ಡ ಸ್ಫೋಟ ಸಂಭವಿಸಿದಾಗ ಆಕಾಶದಲ್ಲಿ ಮೈಲೆತ್ತರ ಬೆಳಕೆದ್ದಿತು ೨೦ ಜನರು ಗಾಯಗೊಂಡರೆಂದೂ ನಗರದಲ್ಲಿ ಬೆಂಕಿ ಹರಡದಂತೆ ಮುಂಜಾಗ್ರತೆ ವಹಿಸಲಾಯಿತೆಂದೂ ತಿಳಿಯುತ್ತದೆ.

ಹಿಂದುಮಹಾಸಭೆಯ ಮುಖಂಡರ ವಿಚಾರಣೆಯು ತಾ. ೨೨ ರಂದು ದಿಲ್ಲಿಯ ಜಿಲ್ಲಾ ಸೆರೆಮನೆಯಲ್ಲಿ ರೆಸಿಡೆಂಟ ಮ್ಯಾಜಿಸ್ಟ್ರೇಟ ಶ್ರೀ ಅತ್ಮಪ್ರಕಾಶ ಬಗಾಯಿಯವರ ಎದುರು ಪ್ರಾರಂಭವಾಯಿತು. ನ್ಯಾಯಾಲಯದ ಕಾರ್ಯಕಲಾಪಗಳಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಪ್ರವೇಶವಿಲ್ಲ. ನ್ಯಾಯಾಲಯದ ಕಾರ್ಯಕಲಾಪಗಳನ್ನು ನಿರೀಕ್ಷಿಸಬೇಕೆನ್ನುವವರು ದಿಲ್ಲಿ ಚೀಫ ಕಮೀಶನರರಿಂದ ಅಪ್ಪಣೆ ಪಡೆಯಬೇಕೆಂದು ವಿಧಿಸಲಾಗಿದೆ.

೦ ೦ ೦

ಹಿಂದುಸ್ತಾನದ ಗವರ್ನರ ಜನರಲ್ಲರಾದ ಲಾರ್ಡ ಮೌಂಟಬ್ಯಾಟನ್ನರು ಶ್ರೀರಂಗಪಟ್ಟಣದಲ್ಲಿಯ ಶ್ರೀರಂಗನಾಥನ ದರ್ಶನ ತೆಗೆದುಕೊಂಡದ್ದರಿಂದ ದೇವರು ಅಪವಿತ್ರವಾಯಿತೆಂದು ಅರ್ಚಕರು ಗರ್ಭಗುಡಿಯ ಬಾಗಿಲನ್ನು ಹಾಕಿಬಿಟ್ಟಿದ್ದರು. ಸರಕಾರಕ್ಕೆ ಈ ಸುದ್ದಿ ತಿಳಿದ ಕೂಡಲೆ ಅವರು ಗುಡಿ ಬಾಗಿಲನ್ನು ತೆರೆಸಿದರು. ಅರ್ಚಕರ ಮೇಲೆ ಕ್ರಮ ತೆಗೆದುಕೊಳ್ಳಲಾಗುವದೆಂದು ಪ್ರಕಟನೆ ಹೊರಟಿದೆ.

ಕರ್ನಾಟಕದಲ್ಲಿ

ಡಾ. ಜಾನ್ ಮಥಾಯಿಯವರು



“ಸಂತುಷ್ಟ ರೇಲ್ವೆ ನೌಕರರೇ ನನ್ನ ಸೊತ್ತು- ಅವರ ಪರಸ್ಥಿತಿಯನ್ನು ಸುಧಾರಿಸಲು ನಾನು ಶಕ್ಯವಿದ್ದುದನ್ನೆಲ್ಲ ಮಾಡುವೆನು” ಎಂದು ಕಳೆದ ೨೮ ರಲ್ಲಿ ಹುಬ್ಬಳ್ಳಿಯ ರೇಲ್ವೆ ನೌಕರರ ಸಂಘದ ಮಾನಪತ್ರಕ್ಕೆ ಉತ್ತರ ಕೊಡುತ್ತ ಹಿಂದುಸ್ತಾನ ಸರಕಾರದ ರೇಲ್ವೆ ಮಂತ್ರಿ ಡಾ. ಜಾನ್ ಮಥಾಯಿಯವರು ಹೇಳಿದರು.

ಹುಬ್ಬಳ್ಳಿಯಲ್ಲಿ

ಮಧ್ಯಾಹ್ನ ಪುಣೆಯ ಟಪ್ಪಾಲು ಗಾಡಿಯಲ್ಲಿ ರೇಲ್ವೇ ಮಂತ್ರಿಗಳೇ ಕುಳಿತಿದ್ದರೂ ಅದು ನಿಶ್ಚಿತದಂತೆ ೧ ತಾಸು ತಡವಾಗಿ ಬಂದಿತು ! ಅವರನ್ನು ಸರ್ವವರ್ಗದ ಪ್ರಜೆಗಳು ಸೇರಿ ಸಂಭ್ರಮದಿಂದ ಸ್ವಾಗತಿಸಿದರು. ನಿಲ್ದಾಣದಿಂದ ಹೊರಟು ಮಂತ್ರಿಗಳು ವರ್ಕಶಾಪಿಗೆ ಭೆಟ್ಟಿಯಿತ್ತು ಪ್ರಶ್ನೋತ್ತರಗಳಿಂದ ಪರಿಸ್ಥಿತಿಯನ್ನು ಪರಿಶೀಲಿಸಿದರು.

ಅನಂತರ ಮಂತ್ರಿಗಳು ಕೂಲಿಕಾರರ ವಸತಿಗಳನ್ನು ಸಂದರ್ಶಿಸಿ ೬೦ ವರ್ಷ ವಯಸ್ಸಿನ ಒಂದು ಮನೆಯನ್ನು ಹೊಕ್ಕು ಅಲ್ಲಿ ಗಾಳಿಯಾಡದುದನ್ನು ಕಂಡು ಚಕ್ಕಿತರಾದರು; ಮತ್ತು ಅಧಿಕಾರಿಗಳೊಡನೆ ವಸತಿಗಳನ್ನು ಸುಧಾರಿಸುವ ಬಗ್ಗೆ ಮಾತನಾಡಿದರು. ರೇಲ್ವೆ ಇನ್‌ಸ್ಟಿಟ್ಯೂಟಿಗೆ ಆ ಮೇಲೆ ಡಾ ಮಥಾಯಿಯವರು ಸಾಗಿ ರೇಲ್ವೆ ನೌಕರರ ಸಂಘದ ಕಾರ್ಯಕರ್ತರಿಗೆ ಸಂದರ್ಶನವಿತ್ತು ಅವರ ಬೇಡಿಕೆಗಳನ್ನು ಕೇಳಿಕೊಂಡರು.

ಅದೇ ಸ್ಥಳದಲ್ಲಿ ಮಂತ್ರಿಗಳು ಕರ್ನಾಟಕ ವಣಿಕ್ ಸಂಘದ ಪ್ರಮುಖರನ್ನು ಕಂಡು ಅವರ ಬೇಡಿಕೆಗಳನ್ನು ಕೇಳಿಕೊಂಡರು. ಘಟನಾ ಸಮಿತಿಯ ಸದಸ್ಯರಾದ ಶ್ರೀ. ರಂಗನಾಥ ದಿವಾಕರ ಶ್ರೀ. ಬಿ. ಎನ್. ಮುನವಳ್ಳಿ ಮತ್ತು ಮುಂಬಯಿ ಶಾಸನ ಸಭೆಯ ಸದಸ್ಯೆ ಶ್ರೀಮತಿ ಎಲ್ಲವ್ವ ಸಾಂಬ್ರಾಣಿ ಮೊದಲಾದವರು ಬಂದಿದ್ದರು. ಸಂಘದವರು ಧಾರವಾಡ—ಹುಬ್ಬಳ್ಳಿಗೆ ಡಬ್ಬಲ್ ಲೈನು, ಹುಬ್ಬಳ್ಳಿ ಕಾರವಾರ ಲೈನ ಮುಂತಾದ ಬೇಡಿಕೆಗಳನ್ನು ಮುಂದಿಟ್ಟರು.

ಎಂ. ಎಸ್. ಎಂ. ರೇಲ್ವೆ ನೌಕರರು ಹುಬ್ಬಳ್ಳಿಯ ಸಂಘದ ಪರವಾಗಿ ಮಂತ್ರಿಗಳಿಗೆ ಮಾನಪತ್ರ ಅರ್ಪಿಸಿದಾಗ ಅವರು ರೇಲ್ವೆ ನೌಕರರ ಪರಿಸ್ಥಿತಿಯನ್ನು ಸುಧಾರಿಸಲು ಶಕ್ಯವಿದ್ದಷ್ಟನ್ನು ಮಾಡುವುದಾಗಿ ಆಶ್ವಾಸನವಿತ್ತರು.

ಗದುಗಿನಲ್ಲಿ

ಧಾರವಾಡ ಜಿಲ್ಲಾ ಲೋಕಲ್ ಬೋರ್ಡ್ ಅಧ್ಯಕ್ಷರಾದ ಶ್ರೀ. ಬಿ. ಆರ್. ತಂಬಾಕದ ಇವರು ಬೋರ್ಡಿನ ಪರವಾಗಿ ಅದೇ ದಿನ ಗದುಗಿನಲ್ಲಿ ಏರ್ಪಡಿಸಲಾದ ಧಾರವಾಡ ಜಿಲ್ಲಾ ೩ ನೆಯ ಕರ್ನಾಟಕ ಸ್ವದೇಶೀ ಔದ್ಯೋಗಿಕ ಪ್ರದರ್ಶನದಲ್ಲಿ ಮಂತ್ರಿಗಳನ್ನು ಆದರದಿಂದ ಬರಮಾಡಿಕೊಂಡು ಕರ್ನಾಟಕದ ಕೊರತೆಗಳನ್ನು ಅವರ ಮುಂದಿಟ್ಟರು. ನೀರಾವರಿ ಮತ್ತು ಜಲವಿದ್ಯುದ್ಯೋಜನೆ, ಅರಣ್ಯ ಸಂಪತ್ತು, ಸಾರಿಗೆ ಮುಂತಾದವುಗಳಲ್ಲಿ ಕರ್ನಾಟಕವು ಹಿಂದುಳಿದ ಬಗೆಯನ್ನು ಶ್ರೀ ತಂಬಾಕದ ಇವರು ಡಾ. ಮಥಾಯಿಯವರಿಗೆ ವಿವರಿಸಿ, ಕರ್ನಾಟಕ ಏಕೀಕರಣದ ಮೂಲಕ ಎಲ್ಲ ತೊಡಕುಗಳನ್ನು ಬಿಡಿಸಬೇಕೆಂದು ತಮ್ಮ ಭಾಷಣಾಂತ್ಯದಲ್ಲಿ ಹೇಳಿದರು.

ಮಾನ್ಯ ಮಂತ್ರಿವರ್ಯರು ಶ್ರೀಗಳಾದ ದಿವಾಕರ, ಮುನವಳ್ಳಿ, ಜಿಲ್ಲಾ ಲೋಕಲ್ ಬೋರ್ಡ ಅಧ್ಯಕ್ಷ ಶ್ರೀ ತಂಬಾಕದ, ಶಾಂತಪ್ಪಣ್ಣ ಯಳಮಲಿ ಮೊದಲಾದವರನ್ನು ಕೂಡಿಕೊಂಡು ಆರೂ ಕಾಲು ಗಂಟೆಗೆ ಸರಿಯಾಗಿ ಉದ್ಘಾಟನ ಸಮಾರಂಭಕ್ಕಾಗಿ ಪ್ರದರ್ಶನದ ಪಕ್ಕದಲ್ಲಿಯೇ ಏರ್ಪಡಿಸಿದ ದಿವ್ಯಾಲಂಕೃತ ಸಭಾಮಂಟಪಕ್ಕೆ ಆಗಮಿಸಿದರು. ಸಭಾಸ್ಥಾನವು ಸ್ತ್ರೀ ಪುರುಷರಿಂದ ಕಿಕ್ಕಿರಿದು ತುಂಬಿತ್ತು. ನಗರದ ಅನೇಕ ಪ್ರತಿಷ್ಠಿತರೂ ಲೋಕಲ್ ಬೋರ್ಡ್ ಸದಸ್ಯರೂ ದಯಮಾಡಿಸಿದ್ದರು:

ಮಂತ್ರಿಗಳು ಮಾತಿಗಾರಂಭಿಸಿ, ತಮ್ಮನ್ನು ಆಮಂತ್ರಿಸಿದ್ದಕ್ಕೆ ಕೃತಜ್ಞತೆ ವ್ಯಕ್ತಪಡಿಸಿ ತಮಗೆ ಕರ್ನಾಟಕದವರು ತೋರಿದ ಆದರಾತಿಥ್ಯಗಳನ್ನು ಕೊಂಡಾಡಿದರು. ಅನಂತರ ಈ ಪ್ರದರ್ಶನದ ಪ್ರಾರಂಭವೇ ಕರ್ನಾಟಕದ ಔದ್ಯೋಗಿಕ ಅಭಿವೃದ್ಧಿಯ ಮುಂಗುರುತಾಗಲೆಂದು ಹರಸಿ ತಮಗೆ ಶಕ್ಯವಿದ್ದ ಸಹಾಯವನ್ನು ಆ ಬಗ್ಗೆ ನೀಡುವುದಾಗಿ ಅವರು ಆಶ್ವಾಸನವಿತ್ತರು.

ಗದುಗಿನ ಕಾರ್ಯಕ್ರಮವನ್ನು ಮುಗಿಸಿಕೊಂಡು ಬಂದು ಮಂತ್ರಿಗಳು ಹುಬ್ಬಳ್ಳಿಯ ರೆಸ್ಟ್ ಹೋಟೇಲಿನಲ್ಲಿ ಶ್ರೀ ದಿವಾಕರರೊಡನೆ ಊಟಮಾಡಿ ರಾತ್ರಿಯ ಮಿಶ್ರಗಾಡಿಯಿಂದ ಹರಿಹರಕ್ಕೆ ಪ್ರಯಾಣ ಮಾಡಿದರು. ಮಳೆಯ ಮೂಲಕ ಸಾರ್ವಜನಿಕ ಸಭೆ ಸೇರಲಿಲ್ಲ.

ಹರಿಹರದಲ್ಲಿ

ಹರಿಹರದಲ್ಲಿ ಮಂತ್ರಿಗಳು ಕಿರ್ಲೋಸ್ಕರ ಕಾರಖಾನೆಯನ್ನು ನೋಡಿದರು. ಖಾಸಗಿ ಮಾತುಕತೆಯಲ್ಲಿ ಮಂತ್ರಿಗಳು, ನಾನು ಕರ್ನಾಟಕಕ್ಕೆ ಬರುವ ಮುನ್ನ ಇಲ್ಲಿಯ ಜನ, ಧನ ಜನಸ್ವಭಾವ ಇವುಗಳ ಕಲ್ಪನೆ ಏನೂ ಇದ್ದಿಲ್ಲ. ಈ ಪ್ರಾಂತವು ಬಹಳ ದುರ್ಲಕ್ಷಿಸಲ್ಪಟ್ಟಿದ್ದನ್ನ ನನಗೆ ಕಂಡುಬರುತ್ತದೆ. ಭಾಷಾನುಗುಣ ಪ್ರಾಂತವಾಗಬೇಕು ಎಂದು ಮೊದಲಾಗಿ ಹೇಳಿದರು. ಅಲ್ಲಿಂದ ಮಂತ್ರಿಗಳು ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ಅನ್ನ ಸಮಸ್ಯೆ ಚಿಂತಾಜನಕವಿಲ್ಲ

ಆಹಾರ ಪರಿಷತ್ತಿನಲ್ಲಿ ಆಹಾರ ಮಂತ್ರಿಗಳ ಹೇಳಿಕೆ

ಹೊಸದಿಲ್ಲಿಯಲ್ಲಿ ತಾ. ೨೮ಕ್ಕೆ ಪ್ರಾಂತಿಕ ಮುಖ್ಯ ಮಂತ್ರಿಗಳು ಮತ್ತು ಆಹಾರ ಮಂತ್ರಿಗಳ ಪರಿಷತ್ತು ಸೇರಿತ್ತು. ಅಲ್ಲಿ ಕೇಂದ್ರ ಆಹಾರ ಮಂತ್ರಿಗಳಾದ ಶ್ರೀ. ಜಯರಾಮದಾಸ ದೌಲತರಾಮರು ದೇಶದ ಆಹಾರ ಸಮಸ್ಯೆಯ ಬಗ್ಗೆ ಮಾಡಿದ ಭಾಷಣದ ಸಾರ ಹೀಗಿದೆ—

ಹೆದರಿಕೆಗೆ ಕಾರಣವಿಲ್ಲ

ಜನರು ತಿಳಿದುಕೊಂಡಷ್ಟು ಹಿಂದುಸ್ತಾನದಲ್ಲಿ ಅನ್ನ ಸಮಸ್ಯೆಯು ಚಿಂತಾಜನಕವಿಲ್ಲ ಆಹಾರ ಧಾನ್ಯಗಳ ದರಗಳು ಮಿತಿಮೀರಿ ಏರಿದ ಪ್ರದೇಶಗಳಿಗೆ ಧಾನ್ಯ ಪೂರೈಸುವ ದಕ್ಷತೆ ವಹಿಸಿದರೆ ಅನ್ನ ಗಂಡಾಂತರ ಅನಾಯಾಸವಾಗಿ ತೊಲಗುವಂತಿದೆ. ಮೂರು ತಿಂಗಳ ಹಿಂದೆ ಮದ್ರಾಸದಲ್ಲಿ ಮಾತ್ರ ಮಳೆಯಿಲ್ಲದ್ದಕ್ಕೆ ಬರಬೀಳುವ ಸಂಭವವಿತ್ತು. ಶಕ್ತಿ ಮೀರಿ ಪ್ರಯತ್ನಿಸಿ ಅದನ್ನು ನಿವಾರಿಸಲಾಯಿತು. ಸಮೃದ್ಧ ಪ್ರಾಂತದ ಮಂತ್ರಿಗಳು ಮದ್ರಾಸಕ್ಕೆ ಅನ್ನ ಒದಗಿಸುವಲ್ಲಿ ಸಹಕರಿಸಿದ್ದಕ್ಕೆ ಅವರಿಗೆಲ್ಲ ನಾನು ಋಣಿಯಾಗಿರುವೆ.

ಈಗ ಅನ್ನಕ್ಕಾಗಿ ಯಾರೂ ಗಾಬರಿಗೊಳ್ಳುವ ಕಾರಣವಿಲ್ಲ. ಮದ್ರಾಸ ಪ್ರಾಂತದಲ್ಲಿ ೧೨ಲಕ್ಷ ಟನ್ನು ಆಹಾರ ಧಾನ್ಯದ ಬೆಳೆ ಬರಲಿಲ್ಲ. ಆದರೂ ಉಳಿದಲ್ಲಿ ಕಳೆದ ವರ್ಷಕ್ಕಿಂತ ಹೆಚ್ಚಿಗೆ ಮುಖ್ಯ ಧಾನ್ಯ ಬೆಳೆದಿದ್ದೇವೆ. ೧೯೪೬-೪೭ರಲ್ಲಿ ೩ ಕೋಟಿ ೯೫ ಲಕ್ಷ ೨೮ ಸಾವಿರ ಟನ್ ಧಾನ್ಯ ಬೆಳೆದಿದ್ದರೆ ೧೯೪೭-೪೮ರಲ್ಲಿ ೪ ಕೋಟಿ ೪ಲಕ್ಷ ೨೫ ಸಾವಿರ ಟನ್ ಧಾನ್ಯ ಬೆಳೆದಿದೆ. ಅಂದರೆ ಈ ವರ್ಷಕ್ಕಿಂತ ೯ ಲಕ್ಷ ಟನ್ ಹೆಚ್ಚಿಗೆ ಆಹಾರ ಬೆಳೆದುಕೊಂಡಿದ್ದೇವೆ.

ಆಯಾತದಲ್ಲಿ ಸುಧಾರಣೆ

ಪರದೇಶದಿಂದ ಆಹಾರ ತರಿಸುವ ಬಯಕೆ ನನಗಿಲ್ಲ. ನಮ್ಮಲ್ಲಿಯೇ ಆಹಾರ ಬೆಳೆದುಕೊಂಡರೆ ಹೆರರ ಬಾಗಿಲಕ್ಕೆ ಕೈಚಾಚುವ ಕಾರಣವಿಲ್ಲ. ಕೋಟಿ ಕೋಟಿ ರೂಪಾಯಿಗಳನ್ನು ಪರದೇಶಕ್ಕೆ ಕೊಟ್ಟು ಅನ್ನ ಪಡೆಯುವುದಕ್ಕಿಂತ ಅದೇ ಹಣದಿಂದ ಬೆಳೆಯ ಸೌಕರ್ಯ ಹೆಚ್ಚಿಸಿಕೊಳ್ಳುವದು ಒಳ್ಳೆಯದು ಹಿಂದುಸ್ತಾನವು ಸುಮಾರು ೨, ಸಾವಿರ ೨೫ಲಕ್ಷ ಟನ್ ಧಾನ್ಯವನ್ನು ಹೊರಗಿಂದ ತರಿಸಬೇಕಾಗುತ್ತದೆ. ಇದರಲ್ಲಿ ೧೭ ಲಕ್ಷ ಟನ್ನಾದರೂ ದೊರಕೀತೇ ಎಂದು ಶಂಕಿಸಿದ್ದೆವು. ಆದರೆ ಈಗ ೨೦ ಲಕ್ಷ ಟನ್ ಧಾನ್ಯ ದೊರೆವಂತಾಗಿದೆ. ಕೇಂದ್ರಕ್ಕೆ ಪ್ರಾಂತಗಳಿಂದ ಸುಮಾರು ೫ ಲಕ್ಷ ಟನ್ ಧಾನ್ಯ ದೊರೆಯುವದು. ಈಗ ನಮಗೆ ಒಟ್ಟು ೩೬ ಲಕ್ಷ ಟನ್ ಧಾನ್ಯ ದೊರೆಯುವುದರಿಂದ ಕೊರತೆಯ ಪ್ರದೇಶಗಳಿಗೆ ಕೊಡಬೇಕೆಂದಿದ್ದ ೨೨ಲಕ್ಷ ಟನ್ ಧಾನ್ಯವನ್ನು ೨೬ಲಕ್ಷ ಟನ್ನಿಗೆ ಏರಿಸಲಾಗಿದೆ.

ಕೊರತೆಯ ಪ್ರದೇಶಗಳು

ಹಿಂದುಸ್ತಾನದ ೧೮೩ ಜಿಲ್ಹೆಗಳಲ್ಲಿ ೮೮ ಜಿಲ್ಹೆಗಳು ಕೊರತೆಯ ಪ್ರದೇಶಗಳಾಗಿವೆ. ಹಿಂದುಸ್ತಾನದಲ್ಲಿ ಹೀಗೆ ಆಹಾರದ ಕೊರತೆಯಿದ್ದ ಒಂದೂ ಜಿಲ್ಹೆ ಉಳಿಯಕೂಡದೆಂದು ನನ್ನ ಹೆಬ್ಬಯಕೆ. ಧಾನ್ಯದ ಆಯಾತವೂ ಉಳಿತಾಯವೂ ಹೆಚ್ಚಿದೆ. ಇನ್ನೇನು ಎಂದು ನಾವು ಮೈಮರೆತು ಕೊರತೆಯ ಭಾಗಗಳನ್ನು ಉಪೇಕ್ಷಿಸಿ ಬಿಡುವಂತಹ ಪ್ರಮಾದವಾಗದಿರಲಿ. ಕೊರತೆಯ ಭಾಗಗಳ ಬಗ್ಗೆ ಸರ್ಕಾರವೂ ವ್ಯಾಪಾರಿಗಳೂ ಕೂಡಿಯೆ ಹೆಚ್ಚಾಗಿ ಗಮನಿಸಬೇಕಾಗಿದೆ.

ದರಗಳ ಏರಿಳಿತ

ಪರದೇಶಗಳಿಂದ ಧಾನ್ಯವು ತಂತಾನೇ ಇಲ್ಲಿಗೆ ಬಂದು ಬೀಳುವದಿಲ್ಲ. ಇಲ್ಲಿಯ ಉಗ್ರಾಣಗಳಿಂದ ಧಾನ್ಯ ಜನರಿಗೆ ತಂತಾನೇ ದೊರೆಯುವದಿಲ್ಲ. ಯೋಗ್ಯ ದರಕ್ಕೆ ವ್ಯಾಪಾರಿಗಳು ಜನರಿಗೆ ಅನ್ನ ಒದಗಿಸಬೇಕು ಸರಕಾರ ತರಿಸಿ ಸಂಗ್ರಹಿಸಬೇಕು. ಈಗ ಮದ್ರಾಸ ಮುಂಬಯಿಯ ಕೆಲ ಭಾಗದಲ್ಲಿ ಧಾನ್ಯದ ದರವು ಮಿತಿಮೀರಿ ಹೋಗಿದೆ. ಜನರು ತಲ್ಲಣಗೊಳ್ಳುತ್ತಿದ್ದಾರೆ. ಹೀಗಾಗುವ ಮೊದಲೇ ಸರಕಾರದಿಂದ ಸಂಗ್ರಹಿಸಲ್ಪಟ್ಟ ಆಹಾರದ ವಿತರಣವಾಗಬೇಕು. ಈ ಕೆಲಸದಲ್ಲಿ ಸರಕಾರದೊಡನೆ ಸರ್ವರೂ ಸಹಕರಿಸಬೇಕು. ಅದೇ ವಿನಿಯಂತ್ರಣದ ನಂತರ ಉತ್ತರ ಹಿಂದುಸ್ತಾನ ದರಗಳು ಇಳಿದಿರುವವಾಗಿ ತಿಳಿಯುತ್ತದೆ. ಆಹಾರ ಧಾನ್ಯಗಳ ಸಾಗಾಟದಲ್ಲಿ ಇದ್ದ ಪ್ರಾಂತಿಕ ನಿರ್ಬಂಧಗಳನ್ನು ತಿತ್ತಿಹಾಕಬೇಕಾದ ಕಾಲಬಂದಿದೆಯೆಂದು ಕೆಲವರು ಹೇಳುತ್ತಾರೆ. ಈ ಬಗ್ಗೆ ನಿಮ್ಮ ಸಲಹೆ ಬೇಕು. ವ್ಯಾಪಾರೀ ವರ್ಗದಲ್ಲಿ ಇನ್ನೂ ನನ್ನ ನಂಬಿಗೆ ಹಾರಿಲ್ಲ. ಅವರು ತಮ್ಮ ಪತ್ತು ಕಳೆದುಕೊಳ್ಳದಿರಲಿ ಸರಕಾರದ ಕೂಡ ಎಲ್ಲರೊಡನೆ ವ್ಯಾಪಾರಿಗಳೂ ಸಹಕರಿಸಿ ತಮ್ಮ ದೇಶದ ಜನಕ್ಕೆ ಅನ್ನ ಮುಟ್ಟಿಸಲಿ.

ವ್ಯಾಪಾರ ಪ್ರಪಂಚ

ಮುಂಬಯಿ ಪೇಟೆ ಧಾರಣೆ

ಮುಂಬಯಿ ತಾ. ೨೯

ಬಂಗಾರ

ತಯಾರಿ	೧೧೬—೧೨—೦
ವಾಯದಾ	೧೧೬-೧೨-೦
ಸಾವರಿನ	೬೪—೪—೦

ಬೆಳ್ಳಿ

ತಯಾರಿ	೧೬೯—೧೨—೦
ವಾಯದಾ	೧೬೫—೦—೦

ಎಣ್ಣೆ ಕಾಳುಗಳು

ಶೇಂಗಾ	೧೬೬—೪—೦
ಹೊಸ ಬೆಳೆ	೧೬೫-೦-೦
ಅಗಸಿ	೩೭—೨—೦
ಅಗಸಿ ಎಣ್ಣೆ	೧೬—೨—೦

ಶೇರುಗಳು

ಹಮ್ಮದಾಬಾದ ಅಡ್ವಾನ್ಸ	೩೭೦-೦-೦
ಮುಂಬಯಿ ಡಾಯಿಂಗ	೧೧೬೦-೦-೦
ಸೆಂಟ್ರಲ ಇಂಡಿಯಾ	೩೪೦—೦—೦
ಸೆಂಚುರಿ	೫೧೭—೮—೦
ಕುಲಾಬಾ ಲ್ಯಾಂಡ	೧೮೦-೦-೦
ಗೋಕಾಕ	೩೩೮—೦—೦
ಇಂಡಿಯನ್ ಬ್ಲೀಚಿಂಗ	೧೬೬-೦-೦
ಕೋಹಿನೂರು	೬೬೬-೦-೦
ಫೀನಿಕ್ಸ	೪೫೭-೮-೦
ಟಾಟಾ ಪವರ	೧೪೮೨—೮—೦
ಟಾಟಾ ಹೈಡ್ರೊ	೧೫೪—೦—೦
ಟಾಟಾ ಸ್ಟೀಲ ಡೆಫರ್ಡ್ಸ	೧೬೪೭-೮-೦
ಟಾಟಾ ಸ್ಟೀಲ ಆರ್ಡಿನರಿ	೩೩೧-೦-೦
ಪ್ರಿಮಿಯರ ಕನ್‌ಸ್ಟ್ರಕ್ಶನ	೨೦೭—೦—೦
ಅಸೋಸಿಯೇಟೆಡ್ ಸಿಮೆಂಟ್ಸ	೧೭೨-೮-೦
ನ್ಯೂ ಇಂಡಿಯಾ ಇನ್‌ಶುರನ್ಸ	೬೮-೧೨-೦
ಸೆಂಟ್ರಲ ಬ್ಯಾಂಕ	೮೬—೦—೦
ಇಂಪಿರಿಯಲ (ಅಂಶತಃ)	೪೯೦-೦-೦
ಇಂಪೀರಿಯಲ (ಪೂರ್ಣ)	೨೦೦೫—೦—೦
ಇಂಡಿಯಾ	೨೫೫—೦—೦
ರಿಝರ್ವ	೧೧೧-೦-೦

ಅರಳೆ

ಮೇ	೭೦೬—೮—೦
ಜುಲೈ	೭೨೩—೮—೦
ಸಪ್ಟಂಬರ	೭೨೯—೦—೦

ಸಾಂಗಲಿ ಪೇಟೆ

ತಾ. ೨೫

ತಂಬಾಕು	೮೦—೧೬೦
ಅರಿಷಣ ಹೇರಿಗೆ	೧೧೦-೧೧೯
ಹೊಸ ಮೆಣಸಿನಕಾಯಿ	೧೮೦-೨೧೦
ಬೆಲ್ಲ ಹೇರಿಗೆ	೩೫—೬೧
ಶೇಂಗಾ ಖಂಡಿ	೧೨೮-೧೨೯
ಶೇಂಗಾ ಎಣ್ಣೆ	೧೭-೨-೦

ಮೆಣಸಿನಕಾಯಿ ದರ ಇನ್ನೂ ಏರುವ ಸಂಭವ ಕಾಣುತ್ತದೆ.

ಕೊಲ್ಹಾಪುರ

ತಾ. ೨೮

ಬೆಲ್ಲ (ಗುಜರಾತ) ರೂ. ೩೮ ರಿಂದ ೫೩

ಶಿವಮೊಗ್ಗ

ತಾ. ೨೮

ಶಿವಮೊಗ್ಗ ಅಡಿಕೆಪೇಟೆಯ ಧಾರಣೆ ಮಣ ೧ ಕ್ಕೆ ಈರೀತಿ ಇದೆ—

ದೇಶಾವರ ನಂ. ೧ ಮಣ ೧ಕ್ಕೆ	೩೩-೩೪
” ” ೨	೩೦-೩೨
” ” ೩	೨೬-೨೯
ಬೆಟ್ಟೆ ವಂತಿ	೨೦—೨೨
ರಾಜಾಅಲವು	೩೦—೩೩
ತೊರಸಾಲು	೨೬-೨೮
ಬೆಟ್ಟೆ	೧೭-೧೮
ಸೀಗೆಕಾಯಿ	೭॥
ಮೆಣಸು	

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ	೧	೪೯೫-೫೦೧
”	೨	೪೮೫-೪೯೧
”	೩	೪೭೦-೪೮೧
ಅಪಲಂಡ ಹತ್ತಿ	೧	೪೩೫-೪೫೧
”	೨	೪೨೦-೪೨೫
ಜಿನ		೩೩೫-೩೫೫
ಅ. ಡಬಲರೋಲ		೩೧೦-೩೨೫
ಹ. ಹತ್ತಿಕಾಳು		ಖಂಡು ೯॥-೯॥
ಜ. ಹತ್ತಿಕಾಳು		೮

'ಹರಿಜನ' ಅಗ್ರಲೇಖ

ಈ ಪತ್ರಿಕೆಯ ನಾಮಧೇಯ

ಈ ವಾರಪತ್ರಿಕೆಗಳ ಹೆಸರುಗಳನ್ನು ಬದಲಿಸಬೇಕೆಂಬ ಬಗ್ಗೆ ಸ್ನೇಹಿತರಿಂದ ಸೂಚನೆಗಳು ಬಂದಿವೆ. ಅವುಗಳಲ್ಲಿ ಎರಡು ಗುಂಪು ಮಾಡಬಹುದು; ಒಂದು ಗುಂಪು, ಹರಿಜನವು ಗಾಂಧೀಜಿಯ ಧ್ವನಿಯಾಗಿತ್ತೆಂದು ಹೇಳುತ್ತದೆ. ಅವರ ನಂತರ ಗಾಂಧೀಜಿಯ ವಾಣಿಯನ್ನು ಇನ್ನಾರೂ ನುಡಿಸಲಾರರು. ಅದ್ದರಿಂದ ಗಾಂಧೀಜಿಯ ವಾಣಿಗೆ ಮುಖವಾಗಿದ್ದ 'ಹರಿಜನ'ವೆಂಬ ಹೆಸರನ್ನು ಇನ್ನೂ ಇಟ್ಟುಕೊಂಡಿರುವದು ಯುಕ್ತವಲ್ಲವೆಂದು ಅವರ ವಾದ. ಇನ್ನೊಂದು ಗುಂಪು 'ಹರಿಜನ'ವೆಂಬ ಹೆಸರು ಸಾಕಷ್ಟು ಸೂಚಕವಲ್ಲವೆಂದು ಅಭಿಪ್ರಾಯಪಟ್ಟಿದೆ. 'ಸರ್ವೋದಯ, ಲೋಕಸೇವಕ, ವಿಶ್ವಬಂಧು' ಎಂಬ ನಾಮಕರಣಗಳು ಹೆಚ್ಚು ಸಮಂಜಸವೆಂದು ಈ ಹೆಸರುಗಳನ್ನು ಅವರು ಸೂಚಿಸಿದ್ದಾರೆ.

ಈ ಪತ್ರಿಕೆಯ ಹೆಸರಿನ ಬಗ್ಗೆ ನನ್ನ ಮತವೇನು ಎಂಬುದನ್ನು ಹೇಳುವದು ಅಗತ್ಯವೆಂದು ನನಗೆ ತೋರಿಲ್ಲ. ಯಾಕೆಂದರೆ ವಿಶ್ವಸ್ತರು ಈ ಪತ್ರಿಕೆಯು ಪ್ರಕಟನೆಯಾಗಬೇಕೆಂದು ನಿರ್ಣಯಿಸಿದ ಮೇಲೆ ನನ್ನದೇನು ಅಭಿಪ್ರಾಯ ಇಂತು? ಅದೇ ಹೆಸರನ್ನೇ ಸ್ವೀಕರಿಸಿ ನಾನು ಮುಂದೆ ಸಾಗುವದು ಕ್ರಮಪ್ರಾಪ್ತ. ಆದರೂ ಈ ಬಗ್ಗೆ ನನ್ನ ನಿಶ್ಚಿತ ಅಭಿಪ್ರಾಯವಿದ್ದೇ ಇತ್ತು. ಅದೆಂದರೆ, ಈ ಪತ್ರಿಕೆಗಳು ಪ್ರಕಟವಾಗುವದೇ ಅಹಲ್ಲಿ ಹಳೆಯ ಹೆಸರುಗಳಲ್ಲಿಯೇ ಅವು ಹೊರಬರಬೇಕು ಎಂದು. ಈ ಅಭಿಪ್ರಾಯಕ್ಕೆ ನನ್ನ ಕಾರಣಗಳು ಹೀಗಿವೆ.

೧) ಹರಿಜನವು ಗಾಂಧೀಜಿಯ ವಾಣಿಯಾಗಿತ್ತು ನಿಜ. ಆದರೆ ಆ ವಾಣಿ ಯಾವುದೋ ಒಂದು ವಿಚಾರವಾಗಲಿ ಸ್ವರ ಸಂಕಲನವಾಗಲಿ ಆಗಿರಲಿಲ್ಲ. ಆ ವಾಣಿಗೆ ಪ್ರಾರಂಭಿಸಲ್ಪಟ್ಟ ಮಹಾ ಕಾರ್ಯದ ಸಂಬಂಧವಿತ್ತು. ಈ ಕಾರ್ಯ ಸ್ವಯಂಸ್ಫೂರ್ತಿಯಿಂದೋ ಅಂತಃಪ್ರಚೋದನೆಯಿಂದೋ ಪ್ರಾರಂಭವಾದುದು. ಈ ಕಾರ್ಯಗಳು ಇನ್ನೂ ಅಪೂರ್ಣವಾಗಿಯೇ ಇವೆ. ಈ ಚಟುವಟಿಕೆಗಳ ಮುಖಪತ್ರವಾಗಿ ಹರಿಜನವಿತ್ತು. ಹಾಗೂ ಇಂದೂ ಇದೆ. ಅವರ ನಂತರ ಉಳಿದಿರುವ ನಾವು ಅವರ ಕೆಲಸಗಳನ್ನೇ ಸಾಗಿಸುವದಾದರೆ ಅವರು ಇಟ್ಟ ಹೆಸರುಗಳನ್ನೇ ಸ್ವೀಕರಿಸುವಲ್ಲಿ ಯಾವ ವ್ಯತ್ಯಯವೋ ನನಗೆ ತಿಳಿಯದು. ಇನ್ನು ಕೆಲ ಅವರ ಸಂಸ್ಥೆಗಳು ಮೊದಲಿನ ಹೆಸರಿನಲ್ಲಿಯೇ ಸಾಗುವದಿಲ್ಲವೆ? ಈಗಿದ್ದ ರೂಪವನ್ನು ಪಲ್ಲಟಿಸುವದೆಂದರೆ ಅಷ್ಟರ ಮಟ್ಟಿಗೆ ಗಾಂಧೀಜಿಯ ಧ್ಯೇಯ ಧೋರಣೆಗಳನ್ನು ಅನುಸರಿಸುವಲ್ಲಿ ನಾವು ಪರಾಙ್ಮುಖರಾದಂತೆಯೇ ಎಂದು ನನ್ನ ಖಂಡಿತ ಮತ.

೨) ಯಾವ ದೃಷ್ಟಿಯಿಂದ ಪರ್ಯಾಲೋಚಿಸಿ ನೋಡಿದರೂ ಹರಿಜನವೆಂಬ ಹೆಸರು ಅಸಮಂಜಸವೆಂದು ನನಗೆ ಕಾಣುವದಿಲ್ಲ. ಹರಿಜನವೆಂಬ ಶಾಬ್ದಿಕ ಅರ್ಥವು ದೇವರ ಮನುಷ್ಯರು ಎಂದಾಗುತ್ತದೆ. ಈ ಅಭಿಪ್ರಾಯದ ಸಂದರ್ಭದಲ್ಲಿ ಅಖಂಡ ಮಾನವ ಕುಲವೇ ಅದರಲ್ಲಿ ಬರುವದು. ಯಾಕೆಂದರೆ ದೇವರ ಮನುಷ್ಯರಲ್ಲದವರು ಪ್ರಪಂಚದಲ್ಲಿ ಇರುವರಾರು? ಈ ಶಬ್ದವನ್ನು ಸೀಮಿತ ಅರ್ಥದಲ್ಲಿ ಗ್ರಹಿಸಿದರೆ, ೧) ದೇವರ ದಾರಿಯಲ್ಲಿ ನಡೆದು ಹೋಗುವ ದೇವರ ಸೇವಕರು. ೨) ದೇವರಿಗೆ ಪ್ರಿಯರಾದವರು; ಅಂದರೆ ಜಗತ್ತಿನಿಂದ ಬಹಿಷ್ಕೃತರು, ಪತಿತರು, ವ್ಯಥಿತರು, ಪೀಡಿತರು ಎಂಬರ್ಥವಾಗುತ್ತದೆ. ಈ ಎರಡೂ ಭಾವಗಳಲ್ಲಿ ಸಂಪೂರ್ಣವಾದ ಸಮಾಜದ ಸೇವಕ ಸೇವ್ಯ ಎಂಬ ಅರ್ಥವೇ ಅಡಕವಾಗಿದೆ. ಇನ್ನಷ್ಟು ಮುಂದರಿದು ಈ ಶಬ್ದವನ್ನು ಇನ್ನೂ ಸೀಮಿತ ಅರ್ಥದಲ್ಲಿ ಗ್ರಹಿಸಿದ್ದಾದರೆ, ಹಿಂದುಸ್ತಾನದ ಅಸ್ಪೃಶ್ಯರು ಹಿಂದುಳಿದವರು ಎಂದು ಆಗುವದು. ಹಾಗಾದರೆ ಇವರಿಗಾಗಿಯೇ ಈ ಪತ್ರಿಕೆ ಪ್ರಾರಂಭಿಸಲ್ಪಟ್ಟಿತೆಂಬುದನ್ನು ಮರೆಕರಾಗದು. ಈಗ ಅಸ್ಪೃಶ್ಯತೆಯು ನಿವಾರಣೆಯು ಕಾನೂನಿನಲ್ಲಿ ಆಗಿರಬಹುದು. ಆದರೂ ಈ ಪಂಗಡದವರ ಸಾಮಾಜಿಕ ಅಧಿಕಾರ, ಕುಂದುಕೊರತೆಗಳ ನಿವಾರಣೆಯಾಗಿದೆಯೆಂದು ಹೇಳಬರುವಂತಿಲ್ಲವಷ್ಟೇ ಅಲ್ಲ; ಅವರು ಇನ್ನು ಕೆಲ ಸಾಮಾಜಿಕರಿಂದ ತಿರಸ್ಕರಿಸಲ್ಪಡುತ್ತಿಲ್ಲವೆಂದೂ ಹೇಳುವಂತಿಲ್ಲ. ಈ ಜನರ ಸೇವೆಗಾಗಿಯೇ ಈ ಪತ್ರಿಕೆ ನಡೆದರೂ ಇದಕ್ಕಿಟ್ಟ ಈ ಹೆಸರು ಯುಕ್ತವೇ ಆಗಿದೆ.

೪) ಫೆಬ್ರುವರಿ ೨೨ ನೇ ತಾ. ಕ್ಕೆ ಹಿಂದಿನ ಸಂಚಿಕೆಯಲ್ಲಿ ಈ ಪತ್ರಿಕೆಯ ಪ್ರಕಟನೆಯು ಕೆಲಕಾಲ ಸ್ಥಗಿತವಾಗುವದೆಂದು ಮಾತ್ರ ಹೇಳಲಾಗಿತ್ತು. ಅನಂತರ ವಿಶ್ವಸ್ತರು ಇದನ್ನು ನಿಲ್ಲಿಸಿಬಿಡಬೇಕೆಂದು ನಿರ್ಧರಿಸಿದ್ದರೆ ಗಾಂಧೀಜಿಯ ಪತ್ರಿಕಾ ಚಟುವಟಿಕೆಗಳ ಸಮಾರೋಪವಾಗಿಯೇ ಹೋಗುತ್ತಿತ್ತು. ಆ ಮೇಲೆ ಹೊಸ ಪತ್ರಿಕೆ ಹೊರಡಿಸುವ ಮಾತು ಸ್ವತಂತ್ರ ವಿಷಯವಾಗುತ್ತಿತ್ತು. ಮತ್ತು ಈ ನಿರ್ಧಾರ ಕಾರ್ಯಕ್ಕೆ ಎಷ್ಟೋ ಕಾಲಾವಕಾಶವೂ ದೊರೆಯುತ್ತಿತ್ತು.

ನನ್ನ ಮಟ್ಟಿಗೆ ಹೇಳುವದಾದರೆ, ಪತ್ರಿಕೆಯನ್ನು ನಿಲ್ಲಿಸಿಬಿಡುವ ನಿರ್ಣಯವಾಗಿದ್ದರೆ ನನ್ನ ತಲೆಯಿಂದ ದೊಡ್ಡ ಭಾರವಿಳಿಯುತ್ತಿತ್ತು. ಅಂಗ್ಲ ಅಥವಾ ದೇಶೀಯ ಭಾಷೆಗಳಲ್ಲಿ ನಾಮಾಂಕಿತ ಪತ್ರಿಕಾ ಕರ್ತನೆಂದು ಹೆಸರಾಗುವ ಮಹತ್ವಾಕಾಂಕ್ಷೆಯಾಗಲೀ ಮೋಹವಾಗಲೀ ನನಗಿಲ್ಲ. ಅದ್ದರಿಂದ ಹೊಸ ಪತ್ರಿಕೆಯ ಸಂಪಾದಕನ ಗುಣವುಳ್ಳ ವಿಶೇಷ ಪರಿಣತಿಯ ಆದರೆ ಹರಿಜನದ ವಿಷಯದಲ್ಲಿ, ಗಾಂಧೀಜಿಯೇ ನನ್ನ ಸ್ವಭಾವವನ್ನು ಮುಟ್ಟಿಸುವದು ನನ್ನಿಂದ ಆಗಿಲ್ಲವೆಂಬ ಭಾವವು ನನ್ನನ್ನು ಕೊರೆಯುತ್ತಿತ್ತು. ನನ್ನಲ್ಲಿದ್ದ ಕುಂದು ಕೊರತೆಗಳನ್ನೂ ದುರ್ಬಲತೆಯನ್ನೂ ಮರೆತು ಅಪಾರ ವಿಶ್ವಾಸವಿಟ್ಟು ನನ್ನನ್ನು ಅವರು ಪ್ರೀತಿಸಿದರು. ಈ ಋಣ ತೀರಿಸಬೇಡವೆ? ಈ ಭಾವವೇ ಈ ಭಾರವನ್ನು ಹೊರಲು ನನಗೆ ಶಕ್ತಿ ಹೇಳಿತು. ಈ ವಾರ ಪತ್ರಿಕೆಗಳ ಸಂಪಾದನದ ಭಾರವನ್ನು ನಾನು ನಿರ್ವಹಿಸಲು ಹಿಂದೆಗೆದಿದ್ದರೆ ನವಜೀವನ ಪ್ರೆಸ್ಸಿನ ವಿಶ್ವಸ್ತರು ಗಾಂಧೀಜಿಯ ವಾರ ಪತ್ರಿಕೆಗಳ ಅವುಗಳನ್ನು ನಿಲ್ಲಿಸಿಬಿಡುವ ಪ್ರಸಂಗವಿತ್ತು. ನಿಲ್ಲಿಸುವದು ಯುಕ್ತವೆಂಬ ಕಾರಣದಿಂದಲ್ಲ. ಆದರೆ ಅವುಗಳ ಸಂಪಾದನಕ್ಕೆ ತಕ್ಕ ವ್ಯವಸ್ಥೆಯಾಗಲಿಲ್ಲವೆಂಬ ಕಾರಣದಿಂದ.

ವರ್ಧಾ ೨೨-೩-೪೮ | ಕಿಶೋರಲಾಲ ಮಶ್ರುವಾಲಾ

(ಗ. ಜಿ. ರಾಥಿ ವ. ಮೂಲದಿಂದ)

ಸ್ವತಂತ್ರ ಹಿಂದುಸ್ತಾನದಲ್ಲಿ ಒತ್ತಾಯದ ಸೈನ್ಯಭರ್ತಿ

ಸೂಚಿತ ಘಟನೆಯ ೧೭ ನೆಯ ಪ್ರಕರಣದಲ್ಲಿ ಹೀಗಿದೆ: —

(೧) ಮಾನವರನ್ನು ಹೀನವಾಗಿ ನಡೆಸಿಕೊಳ್ಳುವುದು ಮತ್ತು ಬಲಾತ್ಕಾರದಿಂದ ದುಡಿಸಿಕೊಳ್ಳುವುದು ಇವನ್ನು ನಿಷೇಧಿಸಲಾಗಿದೆ. ಮತ್ತು ಅವು ಕಾಯಿದೆ ಪ್ರಕಾರ ದಂಡನಾರ್ಹವೆನಿಸುತ್ತವೆ.

(೨) ಸಾರ್ವಜನಿಕ ಉದ್ದೇಶಗಳಿಗಾಗಿ ಒತ್ತಾಯದಿಂದ ಸರಕಾರವು ಜನಸೇವೆಪಡೆಯುವದಕ್ಕೆ ಈ ಪ್ರಕರಣ ಅಡ್ಡ ಬರುವದಿಲ್ಲ. ಹಾಗೆ ಒತ್ತಾಯಿಸುವಲ್ಲಿ ಸರಕಾರವು ಕುಲ, ಧರ್ಮ, ಜಾತಿ ಮತ್ತು ವರ್ಗಗಳನ್ನು ಪರಿಗಣಿಸುವುದಿಲ್ಲ.

೨ ನೆಯ ಭಾಗವನ್ನು ಗಂಭೀರವಾಗಿ ವಿಚಾರಿಸಬೇಕಾಗಿದೆ. ಯುದ್ಧ ಸಂಬಂಧಿ ಉದ್ಯಮಗಳಲ್ಲಿ ಮತ್ತು ಯುದ್ಧದಲ್ಲಿ ಅನಿವಾರ್ಯವಾದ ಹಿಂಸೆ, ಅಸತ್ಯಗಳಿಗೆ ಬೆಂಬಲವೀಯುವದರಲ್ಲವೆ ಅವುಗಳನ್ನು ಬಳಸುವುದರ ವಿರುದ್ಧ ಮನಃಪೂರ್ವಕವಾದ ಸಂದೇಹವುಳ್ಳವರು ಆದರ ಅನ್ಯಾಯವನ್ನು ಪ್ರತಿಭಟಿಸದಿರಲಾರರು. ಸರಕಾರವು ರಚನಾತ್ಮಕ ಕಾರ್ಯಗಳಿಗಾಗಿ, ಸೌಹಾರ್ದ ಪ್ರೀತಿ ಪ್ರಸರಣಗಳಿಗಾಗಿ ತನ್ನ ಪ್ರಜೆಗಳಿಂದ ಒತ್ತಾಯದಿಂದ ಸೇವೆ ತೆಗೆದುಕೊಳ್ಳುವುದು ಒಂದು ಬಗೆ; ಕೊಲ್ಲಲು ಮತ್ತು ಹಗೆತನ ಸಾಧಿಸಲು ಅಗತ್ಯವಾದ ಕಾರ್ಯಗಳನ್ನು ಮಾಡಲು ಅವರಿಗೆ ಹೇಳುವದು ತೀರ ಭಿನ್ನವಾದ ಮತ್ತೊಂದು ಬಗೆ. ದೇಶದಲ್ಲಿಯ ಸಧ್ಯದ ಪರಿಸ್ಥಿತಿಯಲ್ಲಿ ಸೈನ್ಯಪದ್ಧತಿಯಿಂದ ಪೂರ್ಣವಾಗಿ ದೂರ ಉಳಿಯಲು ಹಿಂದುಸ್ತಾನ ಸರಕಾರಕ್ಕೆ ಸಾಧ್ಯವಾಗಲಾರದೆಂಬವನ್ನು ನಾನು ತಿಳಿದುಕೊಳ್ಳಬಲ್ಲೆ. ಆದರೆ ಆ ಕಾರಣದಿಂದ ಸತ್ಯಾಹಿಂಸೆಗಳಿಗಂಟಿಕೊಂಡವರಿಗಾದರೂ ಯುದ್ಧದಿಂದ ದೂರ ಉಳಿಯಲು ಅವಕಾಶಕೊಡದಿರಬೇಕೇನು?

ಅದುದರಿಂದ ನನ್ನ ಮತದಂತೆ 'ಉದ್ದೇಶಗಳು' ಎಂಬುದರ ಮುಂದೆ ಈ ಮುಂದಿನ ಸಾಲನ್ನು ಸೇರಿಸಿ ೨ ನೆಯ ಭಾಗವನ್ನು ತಿದ್ದಬೇಕು.

"ಸತ್ಯಾಹಿಂಸೆಗಳಿಗೆ ಹೊಂದುವಲ್ಲಿ ಮಾತ್ರ ಅಂಥ ಒತ್ತಾಯದ ಸೇವೆಯನ್ನು ತೆಗೆದುಕೊಳ್ಳಬೇಕು."

ಸತ್ಯಾಹಿಂಸೆಗಳಲ್ಲಿ ಶ್ರದ್ಧೆಯುಳ್ಳ ಎಂದಾಗದ್ದರೂ ಜನರಿಗೆ ಧಕ್ಕೆಯುಂಟಾಗಬಾರದೆಂಬುದನ್ನು ಮೇಲೆ ಸೂಚಿಸಿದ ತಿದ್ದುಪಡಿ ಸ್ಪಷ್ಟಪಡಿಸುತ್ತದೆ.

ಅಕೋಲಾ ತಾ. ೧೯-೩-೪೮ ಕಿ. ಘ. ಮಶ್ರುವಾಲಾ

ಹಳ್ಳಿಗರೊಡನೆ ವಿನೋಬಾ

[ಭಕ್ತವಾರಕುರವು ದಿಲ್ಲಿಯಿಂದ ೧೬ ಮೈಲು ದೂರವಿರುವ ಒಂದು ಹಳ್ಳಿ. ಕಳೆದ ಗಲಭೆಯಲ್ಲಿ ಆ ಹಳ್ಳಿಗೆ ಕೆಲ ಮುಸಲ್ಮಾನರು ಹಿಂದೆ ಧರ್ಮಕ್ಕೆ ಬಂದು ಸೇರಿದ್ದರು. ಅವರಲ್ಲಿ ಕೆಲರು ಮತ್ತೆ ಇಸ್ಲಾಮಕ್ಕೆ ತೆರಳಿಕೊಂಡಿದ್ದರು ಇನ್ನು ಕೆಲವರು ಕೊಡಬಯಸಿದ್ದರು. ಈ ಹಳ್ಳಿಯಲ್ಲಿ ಎಪ್ರಿಲ ತಾ. ೬ ಕ್ಕೆ ಒಂದು ಸಭೆ ಏರ್ಪಟ್ಟಿತು. ಶ್ರೀ. ವಿನೋಬಾ ಮಾತನಾಡಿದರು. ಕೆಳಗಿನದು ಅವರ ಮಾತಿನ ಸಾರಾಂಶ. —ಸಂಪಾದಕ]

ಹಳ್ಳಿಗರೊಡನೆ ಇರಲು ನನಗೆ ಸೊಗಸೆನಿಸುವದು ಪಟ್ಟಣಿಗರಿಗಿಂತ ಹಳ್ಳಿಗರ ನೆರೆಯು ನನಗೆ ಹಿತವೆನಿಸುತ್ತದೆ. ಹೆಣ್ಣುಮಕ್ಕಳೂ ಬಂದುದನ್ನು ನೋಡಿ ನನಗಿನ್ನೂ ಸಮಾಧಾನ. ಹೆಣ್ಣು ಗಂಡು ಸಂಸಾರರಥದ ಎರಡು ಗಾಲಿಗಳು. ಒಂಟಿಗಾಲಿಯಿಂದ ರಥ ಮುಂದರಿವುದು ಅಸಾಧ್ಯವಿದ್ದಂತೆ ಸಮಾಜ ರಥವು ಹೆಣ್ಣನ್ನೋ ಗಂಡನ್ನೋ ಉಳಿದು ಪ್ರಗತಿಯ ಹಾದಿಯಲ್ಲಿ ಉರುಳಲಾರದು. ಜ್ಞಾನವಿರಲಿ, ಕರ್ಮವಿರಲಿ, ಯಾತ್ರೆಯಿರಲಿ, ಹಳ್ಳಿಯ ದಿನದಿನದ ಕಾಯಕದ ಕೆಲಸಗಳಿರಲಿ ಸ್ತ್ರೀಪುರುಷರಿಬ್ಬರೂ ಕೂಡಿಯೇ ನಿರ್ವಹಿಸಬೇಕಾಗುವದು.

ನಾನು ನಿಮಗೆ ಒಂದು ಎಚ್ಚರಿಕೆ ಹೇಳುತ್ತೇನೆ. ಅದೆಂದರೆ ಪಟ್ಟಣದ ವಾತಾವರಣದ ಸೋಂಕಿನಿಂದ ದೂರಿರುವದು. ಇತ್ತೀಚೆಗೆ ನಮ್ಮ ನಾಡನ್ನು ಮುಸುಕಿದ ಕೆಡುಕು ಪಟ್ಟಣದಲ್ಲಿ ಹುಟ್ಟಿಯೇ ಹಬ್ಬಿತು. ಪಟ್ಟಣವಾಸಿಗಳು ಏನೂ ಅರಿಯದ ಮತ್ತು ಇಲ್ಲದ ವಾದಕ್ಕೀಯುವ ಹಳ್ಳಿಗರನ್ನು ಅಡ್ಡದಾರಿಗೆಳೆದರು. ಜಾತಿ ಜಾತಿಯಲ್ಲಿ ಮತ್ಸರ ಬಿತ್ತಿದರು. ಕುತ್ಸಿತ ಭಾವನೆಗಳನ್ನೂ ರಾಗದ್ವೇಷಗಳನ್ನೂ ಪಟ್ಟಣಿಗರು ಹಳ್ಳಿಗರಲ್ಲಿ ಹರಡಿದರು. ಹೀಗೆ ಮಾಡಿ ಎಲ್ಲರ ನಾಶಕ್ಕೆ ಕಾರಣರಾದರು. ಅದ್ದರಿಂದ ಎಂದಾದರೂ ಮತ್ತೆ ಪಟ್ಟಣಿಗರು ಹಳ್ಳಿಗರ ಬಳಿ ಬಂದು ವಿಷಬೀಜಗಳನ್ನು ಬಿತ್ತಲು ಹವಣಿಸಿದರೆ ಅವರಿಗೆ ಸರ್ವಥಾ ಅನುವುಗೊಡಬಾರದಷ್ಟೇ ಅಲ್ಲ, ಪಟ್ಟಣದ ಜಗಳಗಳನ್ನು ಹಳ್ಳಿಯಲ್ಲೂ ಹಬ್ಬಿಸುವದು ಬೇಡವೆಂದು ಸ್ಪಷ್ಟವಾಗಿ ಹೇಳಿ ಅವರನ್ನು ದೂರ ಅಟ್ಟಿಯೇ ಬಿಡಬೇಕು.

ಸಮಾಜವೊಂದರಲ್ಲಿಯ ಭಿನ್ನ ಜಾತಿಗಳನ್ನು ಕೈಯ ಐದು ಬೆರಳುಗಳಿಗೆ ಹೋಲಿಸಬಹುದು. ಕೆಲ ಬೆರಳುಗಳು ಚಿಕ್ಕವು, ಕೆಲವು ದೊಡ್ಡವು, ಆದರೆ ಯಾವುದಾದರೊಂದನ್ನು ಎತ್ತಬೇಕಾದರೆ ಆ ಕೆಲಸ ಮಾಡಲು ಎಲ್ಲ ಬೆರಳುಗಳೂ ಒಟ್ಟಿಗೆ ಸೇರಬೇಕು. ಐದೇ ಬೆರಳುಗಳಿದ್ದರೂ ಅವುಗಳ ಒಟ್ಟು ಜನರಿಗೆ ಸಾವಿರಾರು ಕಾರ್ಯಗಳನ್ನು ಮಾಡಗೊಟ್ಟಿದೆ. ಐದೂ ಒಟ್ಟಿಗೆ ಕೆಲಸ ಮಾಡುವುದೇ ಅದಕ್ಕೆ ಕಾರಣ. ಉಳಿದವುಗಳೊಡನೆ ಕೆಲಸ ಮಾಡಲು ಯಾವುದಾದರೊಂದು ತಪ್ಪಿದರೆ ಕೈಯ್ಯ ಕಾರ್ಯಶಕ್ತಿಯು ಎಷ್ಟೋ ಕಡಿಮೆಯಾಗುವುದು. ಅದುದರಿಂದ ಹಳ್ಳಿಗಳ ಉದ್ಧಾರವಾಗಬೇಕಾದರೆ ಅಲ್ಲಿಯ ಜನರು ಒಗ್ಗಟ್ಟಿನಿಂದ ಕೆಲಸಮಾಡಬೇಕು.

ಈ ಹಳ್ಳಿಯಲ್ಲಿ ಕೆಲವು ಮುಸಲ್ಮಾನರೂ ಇರುವುದು ಸಂತೋಷದ ಸಂಗತಿ. ಬೇರೆಯ ಜಾತಿಯವರಿದ್ದರೂ ಒಳ್ಳೆಯದು.

ಬೇರೆ ಬೇರೆ ಜನರು ಬೇರೆ ಬೇರೆ ವಿಧವಾಗಿ ದೇವತಾರಾಧನೆ ಮಾಡುತ್ತಾರೆ. ಪ್ರತಿಯೊಂದು ವಿಧದಲ್ಲೂ ಕೆಲವು ಯೋಗ್ಯ ಅಂಶಗಳಿವೆ. ಅಂಥ ಎಲ್ಲರೂ ದೇವರನ್ನು ತಮ್ಮ ಪದ್ಧತಿಗಳಂತೆ ಪೂಜಿಸಿದರೂ ಒಟ್ಟಿಗೆ ಸೌಹಾರ್ದದಿಂದ ನಡೆದುಕೊಂಡರೆ ಸುಖ ಸಂತೋಷಗಳು ಸಿಗುವುವು. ಅವರ ವಿವಿಧ ಪದ್ಧತಿಗಳು ವಾದ್ಯವೊಂದರ ಭಿನ್ನ ಸ್ವರಗಳಂತೆ ಇವೆ.

ಹಿಂದುಗಳಲ್ಲಿ ಕೂಡ ಒಂದೇ ಪೂಜಾ ವಿಧಾನವಿಲ್ಲ ಕೆಲವರು ವಿಷ್ಣುವನ್ನು ಕೆಲರು ಶಿವನನ್ನು ಕೆಲವರು ಶಕ್ತಿಯನ್ನು ಉಳಿದವರು ಹಲ ದೇವದೇವತೆಗಳನ್ನು ಆರಾಧಿಸುತ್ತಾರೆ. ಇದು ಕೆಲವರಿಗೆ ಸರಿಹೋಗದೆ, ಇದೊಂದು ದೇವದೇವತೆಗಳ ಬಾಜಾರದಂತೆ ಕಾಣುತ್ತದೆಯೆನ್ನುತ್ತಾರೆ. ಇದು ನನಗೆ ಗೊತ್ತು. ಆದರೆ ಒಬ್ಬೊಬ್ಬರ ರುಚಿ ಒಂದೊಂದು ಬಗೆ. ಅದರಿಂದ ಎಲ್ಲ ಬಗೆಯ ರುಚಿಗಳಿಗೂ ಒಗ್ಗುವ ವಸ್ತುಗಳು ದೊರೆವ ಬಾಜಾರವಿರುವದರಿಂದ ಏನು ಕೆಟ್ಟು ಹೋಯಿತು? ಆಹಾರದಲ್ಲಿ ಬಗೆಬಗೆ ಬೇಕೆಂದು ಜನರು ಬಯಸುವದಿಲ್ಲವೆ? ವರ್ಷವೆಲ್ಲ ನಿತ್ಯವೂ ಒಂದೇ ಬಗೆಯ ಆಹಾರವುಣ್ಣಲು ನಮಗೆ ಒಗ್ಗುವದಿಲ್ಲ. ಹಾಗೆಯೇ ಈ ವಿವಿಧ ಆರಾಧನೆಗಳು ವಿಭಿನ್ನ ಅಕ್ಷರಗಳಂತಿವೆ. ಪರಮಾತ್ಮನಿಗೆ ಎಲ್ಲ ನಾಮಗಳು ಎಲ್ಲ ರೂಪಗಳು ಸರಿಹೋಗುತ್ತವೆ. ತಂದೆ ತನ್ನ ಒಬ್ಬೊಬ್ಬ ಮಗನಿಗೆ ಒಂದೊಂದು ಹೆಸರಿಟ್ಟು ಕರೆವಂತೆ ಜನರು ಪರಮಾತ್ಮನ ನಾನಾ ರೂಪಗಳಿಗೆ ನಾನಾ ಕಲ್ಪನೆಗಳಿಗೆ ನಾನಾ ನಾಮಗಳನ್ನು ಕೊಡುತ್ತಾರೆ. ಒಬ್ಬನಿಗೆ ವಿಷ್ಣುವೆಂಬ ಹೆಸರು ಮನಸ್ಸಿಗೆ ಒಪ್ಪುತ್ತದೆ ಇನ್ನೊಬ್ಬನಿಗೆ ಕೃಷ್ಣನೆಂಬುದು ಮತ್ತೊಬ್ಬನಿಗೆ ಇನ್ನೊಂದು. ಈ ರುಚಿ ಭೇದವೇಕೆ ನಮಗೆ ಆತಂಕಸ್ವರೂಪವಾಗಬೇಕು? ಎರಡು ದೇವರೇ ಇಲ್ಲವೆಂದ ಮೇಲೆ ಭಕ್ತನು ಅವನಿಗೆ ಯಾವ ಹೆಸರು ಕೊಟ್ಟರೂ ಅಷ್ಟೆ.

ಅದು ಕಾರಣ, ಮುಸಲ್ಮಾನರು ಪರಮಾತ್ಮನನ್ನು ತಮ್ಮದೇ ರೀತಿಯಲ್ಲಿ ಆರಾಧಿಸಬೇಕೆಂದರೆ, ತಲೆಯ ಮೇಲೆ ಜುಟ್ಟು ಬೆಳಸಿಕೊಂಡು ಅವರು ಹಿಂದುಗಳೆಂದು ಹೇಳಿಕೊಳ್ಳಬೇಕೆಂದು ನೀವೇಕೆ ಹೇಳಬೇಕೋ ನನಗೆ ತಿಳಿಯದು. ಇನ್ನು ಒಬ್ಬನನ್ನು ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳಲು ನೀವು ಉಪಯೋಗಿಸಿದ ಉಪಾಯವೂ! ಒಬ್ಬನು ಹಂದಿಯ ಎಲುಬಿನ ಒಂದು ಚೂರನ್ನು ಬಾಯಲ್ಲಿ ಹಾಕಿಕೊಂಡರೆ ತೀರಿತು, ಆತ ಹಿಂದುವಾದನಂತೆ! ಹಿಂದೂತ್ವ ಸ್ವೀಕಾರ ಇಷ್ಟೊಂದು ಸುಲಭವಾಗಿದ್ದರೆ, ಋಷಿ-ಮುನಿಗಳ, ಧರ್ಮೋಪದೇಶಕರ ಹಂಗೇ ಇಲ್ಲ. ಇಂಥ ಹಾಸ್ಯಾಸ್ಪದ ಉಪಾಯವೂ ಹಿಂದೂಧರ್ಮದ ತತ್ವವಾಗಿ ಹೋಯಿತೆ! ಇದು ಪಾಖಂಡತನವೇ ಸರಿ.

ಯಾವನೊಬ್ಬನೂ ತನ್ನ ಧರ್ಮವನ್ನು ತ್ಯಜಿಸಬೇಕೆಂದು ಹಿಂದೂ ಧರ್ಮ ಹೇಳುವದಿಲ್ಲ ಪ್ರತಿಯೊಬ್ಬನೂ ತನ್ನ ಧರ್ಮವನ್ನಾಚರಿಸಿ ಸಜ್ಜನನಾಗಲಿ, ದೇವರ ದಾಸನಾಗಲಿ, ಸಜ್ಜನಿಕೆಯ ಮತ್ತು ದೇವಸೇವಕತೆಯ ಮುಖ್ಯ ತತ್ವವನ್ನು ಹಿಂದೂ ಮುಸ್ಲಿಮರಿಬ್ಬರೂ ಬಿಟ್ಟು ಕೊಟ್ಟಿದ್ದಾರೆ. ಇಬ್ಬರೂ ಸುಳ್ಳು ಹೇಳುತ್ತಾರೆ, ಕೊಲೆಮಾಡುತ್ತಾರೆ, ಬಡವರ ಹೊಟ್ಟೆಗೆ ಕಾಲುಕೊಡುತ್ತಾರೆ ಇಷ್ಟಿದ್ದರೂ ತಾವು ಪರಮ ಧಾರ್ಮಿಕರೆಂದು ಕೊಳ್ಳುತ್ತಾರೆ. ಇದು ಶುದ್ಧಠಕ್ಕು. ಸ್ನೇಹ, ಸೌಹಾರ್ದ, ಮಾನವ ಮಾನವರಲ್ಲಿ ಪ್ರೇಮ ಸಂವರ್ಧನೆ, ಜಗಳ ಮಾಡದಿರುವದು ಇವೇ ಶುದ್ಧ ಧಾರ್ಮಿಕ ಆಚಾರಗಳು.

ಇದರಿಂದೇನು ಲಾಭ ?

ಅಣುಶಕ್ತಿಯನ್ನು ಕುರಿತು ವಾಷಿಂಗ್ಟನದಲ್ಲಿ ಮಾತಾಡುತ ಬ್ರಿಟಿಶ ಲಾರ್ಡ್ಸ ಭವನದಲ್ಲಿ ಪರಮಪೂಜ್ಯರಾದ ಯಾರ್ಕಿನ ಆರ್ಚಬಿಶಪರು ಸೂಚಿಸಿದ್ದು: "ಟ್ರೂಮನ, ಅಟ್ಲಿ ಮತ್ತು ಸ್ಟಾಲಿನ ಇವರ ನಡುವಣ ಮಾತುಕತೆ ಫಲಕಾರಿಯಾಗದಿದ್ದರೆ ಆಗ ಅಣುಶಕ್ತಿಯ ಒಂದು ಅಧಿಕಾರಿ ಮಂಡಲವನ್ನು ಸ್ಥಾಪಿಸಿ ಅದಕ್ಕೆ ವಿಧೇಯವಾಗಿ ನಡೆಯುವ ಇಚ್ಛೆಯುಳ್ಳ ರಾಷ್ಟ್ರಗಳೇ ಆದರೂ ರಶಿಯಾದ ದಾರಿ ನೋಡದೆ ಕೆಲಸ ಮುಂದುವರಿಸಬೇಕು. ಮತ್ತು ಯಾವನೇ ಭಾವೀ ಆಕ್ರಾಮಕನನ್ನು ತಮ್ಮ ಪ್ರಚಂಡ ಬಲದಿಂದ ನಿವಾರಿಸಬೇಕು." ಪೂಜ್ಯ ಆರ್ಚಬಿಶಪರು ಕಳೆದ ಎರಡು ವಿಶ್ವಯುದ್ಧಗಳ ಪಾಠವನ್ನು ಇಷ್ಟು ಬೇಗ ಮರೆತುಬಿಟ್ಟರೆ? ಅಥವಾ ಎದುರಾಳಿಗಿಂತ ಮೊದಲೇ ತಾವು ಹೊಡೆತ ಕೊಡುವದೊಳಿತೆಂದು ಅವರ ನಂಬಿಕೆಯೆ? ಬಲಪ್ರಯೋಗದಿಂದ ರಾಷ್ಟ್ರ ರಾಷ್ಟ್ರಗಳೊಳಗಿನ ಸಮಸ್ಯೆ ಬಗೆಹರಿಯುವದಿಲ್ಲೆಂದು ಕಳೆದ ಎರಡು ಯುದ್ಧಗಳು ತೋರಿಸಿಕೊಟ್ಟುದನ್ನು ನೋಡದ ಹಾಗೆ ರಾಷ್ಟ್ರಗಳ ಕಣ್ಣು ಕಟ್ಟಲಾಗುತಿ ಎಂತೆ ತೋರುತ್ತದೆ. ಬಲ್ಲರೆಂಬವರು ಈಗಾಗಲೇ ಮೂರನೆ ಮಹಾಯುದ್ಧದ ಮಾತು ಆಡುತ್ತಿದ್ದಾರೆ. ಒಂಟಾರಿಯೋ (ಕಾನಡಾ) ದ ಮುಖ್ಯಮಂತ್ರಿ ಜಾರ್ಜ ಡ್ರೂ ಅವರು ಈ ವಾರದ ಪ್ರಾರಂಭದಲ್ಲಿ ಟೋರೊಂಟೋದಲ್ಲಿ ಮಾತಾಡುತ್ತ, "ಇಂದು ನಾವು ಯುದ್ಧದಲ್ಲಿ ತೊಡಗಿದ್ದೇವೆಂದು ನಾವೀಗ ಮನಗಾಣಬೇಕಾಗಿದೆ— ಅದ್ದರಿಂದ ಆ ಶಬ್ದ ಪ್ರಯೋಗಕ್ಕೆ ಅಂಜೋಣ ಬೇಡ, ಹತ್ತಾರು ಕೋಟಿ ಜನರು ಗುಲಾಮರಾಗಿದ್ದಾರೆ. ಇನ್ನೂ ಇಪ್ಪತ್ತು ಕೋಟಿ ಜನರು ಗುಲಾಮಗಿರಿಗೆ ಬಲಿಯಾಗುವ ಭಯವಿದೆ. ಜಗತ್ತು ಎರಡು ಧ್ಯೇಯಗಳಲ್ಲಿ ಹಂಚಿ ಬಿಟ್ಟಂತಾಗಿದೆ ಯೆಂದು ಹೇಳಲಾಗಿದೆ. ಆದರೆ ಇಷ್ಟು ಸ್ಪಷ್ಟವಾದ ಬಣಗಳು ಹಿಂದೆ ಎಂದೂ ಆಗಿದ್ದಿಲ್ಲ— ಬರಿ ಧ್ಯೇಯದಲ್ಲಷ್ಟೇ ಅಲ್ಲ, ಒಂದಕ್ಕೊಂದು ಸರ್ವಥಾ ಹೊಂದಿಕೆಯಾಗದಂಥ ಎರಡು ಜೀವನ ಪದ್ಧತಿಗಳಲ್ಲಿ ಜಗತ್ತಿಂದು ಒಡೆದುಹೋಗಿದೆ" ನಿಜ, ನಿಜವಾಗಿ ಇಂದು ಹೋರಾಟವಾಗುತಿರುವದು ಎರಡು ಜೀವನ ಪದ್ಧತಿಗಳ ನಡುವೆ. ಒಂದು ಇದು ಭೌತಿಕ ಜಗತ್ತನ್ನೆ ತನ್ನ ಕೈಸೇರಿಸಿಕೊಳ್ಳಲು ಹಂಬಲಿಸುತ್ತಿದೆ ಮತ್ತೊಂದು ಜಗತ್ತನ್ನೇ ತ್ಯಜಿಸುವ ಪ್ರಸಂಗ ಬಂದರೂ ಹಿಂಸೆಯನ್ನು ತಿರಸ್ಕರಿಸುತ್ತದೆ.

(೧೧ನೆಯ ಪುಟಕ್ಕೆ)

ಪ್ರಶ್ನೋತ್ತರಗಳು

ಕಳೆದ ಎಪ್ರಿಲ ೪ ನೇ ತಾರೀಕಿಗೆ ದಿಲ್ಲಿಯಲ್ಲಿ ಕೂಡಿದ್ದ ಕಾಂಗ್ರೆಸ ಕಾರ್ಯಕರ್ತರ ಸಭೆಗೆ ಶ್ರೀ ವಿನೋಬಾ ಭಾವೆಯವರನ್ನು ಆಮಂತ್ರಿಸಿದ್ದರು. ಅವರಿಗೆ ಕೇಳಲ್ಪಟ್ಟ ಕೆಲ ಪ್ರಶ್ನೆಗಳಿಗೆ ಶ್ರೀ. ವಿನೋಬಾ ಇವರು ಕೊಟ್ಟ ಉತ್ತರಗಳ ಭಾಷಾಂತರವನ್ನು ಕೆಳಗೆ ಕೊಡಲಾಗಿದೆ. ಸಂ—

ಹರಿಜನರ ವಿಶೇಷ ಸಂಸ್ಥೆಗಳು

ಪ್ರಶ್ನೆ ೧ — ಹರಿಜನರ ವಿಶೇಷ ಸಂಸ್ಥೆಗಳು ಮತ್ತು ಪರಿಷತ್ತುಗಳು ಏಕೆ ಇರತಕ್ಕದ್ದು? ಹರಿಜನರು ಮತ್ತು ಹರಿಜನೇತರರು ಎಂಬ ಭೇದವು ಸಂಪೂರ್ಣವಾಗಿ ಏಕೆ ಅಳಿಯಲ್ಪಡಬಾರದು.?

ಉತ್ತರ— ಈ ಬೇದಭಾವನೆ ಹೋಗಲಿಕ್ಕೆ ಬೇಕೆಂಬುದನ್ನು ನಾನು ಒಪ್ಪುತ್ತೇನೆ ಮತ್ತು ವಿಶೇಷ ಸಂಸ್ಥೆಗಳಿರುವ ಅವಶ್ಯಕತೆಯಿಲ್ಲೆಂಬುದಕ್ಕೂ ನನ್ನ ಒಪ್ಪಿಗೆ. ಆದರೆ ಹರಿಜನರೆಂದು ಕರೆಯಲ್ಪಡುವವರು ಸಮಾಜದಲ್ಲಿ ಸಂಪೂರ್ಣವಾಗಿ ಲೀನವಾಗಿ ಹೋದುದಾದರೆ ಮಾತ್ರ ಇದು ಶಕ್ಯವಿದೆ. ಹರಿಜನರಿಗಾಗಿ ಪ್ರತ್ಯೇಕ ಸಾಲೆಗಳನ್ನು ತೆಗೆಯುವದರ ಬದಲು ಮತ್ತು ಅವರಿಗೆ ಶಿಷ್ಯವೃತ್ತಿಗಳನ್ನು ಕೊಡುವದರ ಬದಲು ಪ್ರತಿಯೊಬ್ಬ ಕಾರ್ಯಕರ್ತ ತನ್ನ ಮನೆಯಲ್ಲಿ ಹರಿಜನ ವಿದ್ಯಾರ್ಥಿಗೆ ಪ್ರವೇಶಕೊಟ್ಟು ತನ್ನ ಮಕ್ಕಳೊಡನೇ ಅವನಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದು ನಾನು ಸೂಚಿಸುತ್ತೇನೆ. ಪರಿಷತ್ತು ಮುಂತಾದವುಗಳನ್ನು ಕೂಡಿಸುವದರಿಂದ ಪಡೆವ ಲಾಭಕ್ಕಿಂತ ಹೀಗೆ ಮಾಡುವದರಿಂದ ಹೆಚ್ಚು ಪ್ರಯೋಜನವನ್ನು ನೀವು ಪಡೆಯಬಲ್ಲಿರಿ ಆದರೆ ನಿಮ್ಮ ಮನೆಯಲ್ಲಿಯ ಜನರು ಇದಕ್ಕೆ ಸಿದ್ಧರಿಲ್ಲೆಂದು ನೀವು ಹೇಳುವಿರಿ. ಪರಿಸ್ಥಿತಿ ಈ ರೀತಿಯಿದೆ. ಆದರೆ ನಾನು ಸೂಚಿಸಿದಂತೆ ನೀವು ಮಾಡಿದ್ದರೆ ಪರಮಾತ್ಮನ ಅನುಗ್ರಹ ನಿಮ್ಮ ಮೇಲೆ ಆಗುವದಲ್ಲದೆ, ನೀವು ಮಾಡುವ ಉಳಿದ ಎಲ್ಲ ಬಗೆಯ ಸಾರ್ವಜನಿಕ ಕಾರ್ಯಗಳಿಗಿಂತ ಹೆಚ್ಚು ಸೇವೆಯನ್ನು ನೀವು ಸಲ್ಲಿಸಿದಂತಾಗುವದು.

ಕಲಂಕಿತ ದುಡ್ಡು

ಪ್ರಶ್ನೆ ೨. ಸಾರ್ವಜನಿಕ ನಿಧಿಗಾಗಿ ನಾವು ಪಡೆಯುತ್ತಿರುವ ಎಷ್ಟೋ ಹಣ ಕಾಣಿಕೆ ಕೊಡುವವರು ಎರಡನೆಯವರನ್ನು ಸುಲಿದು ಸಂಪಾದಿಸಿದ್ದಾಗಿದೆ. ಅದುದರಿಂದ ನಮ್ಮ ಸಾರ್ವಜನಿಕ ಚಟುವಟಿಕೆಗಳೆಲ್ಲ ಕಲಂಕಿತ ಹಣದಿಂದ ಸಾಗಿಸಲ್ಪಟ್ಟಂತೆ ಆಗುವದಿಲ್ಲವೆ? ಹೀಗೆ ಮೂಲದಲ್ಲಿಯೇ ಕಲಂಕವಿರುವದರಿಂದ ಅವು ಅತ್ಯುಚ್ಚ ನೈತಿಕ ಮಟ್ಟದಲ್ಲಿ ಉಳಿಯಬಲ್ಲವೆಂತು?

ಉತ್ತರ:— ಇದೊಳ್ಳೇ ಯೋಗ್ಯ ಪ್ರಶ್ನೆ. ಪ್ರಾರಂಭದಲ್ಲಿಯೇ ನಾನು ಒಂದು ವಿಷಯವನ್ನು ಸ್ಪಷ್ಟಪಡಿಸಬಯಸುತ್ತೇನೆ. ತನ್ನ ಎಲ್ಲ ಚಟುವಟಿಕೆಗಳು ಮುಖ್ಯವಾಗಿ ಸಾರ್ವಜನಿಕ ಹಣದಿಂದಲೇ ನಡೆಯತಕ್ಕದ್ದೆಂದು ಯಾರಿಗಾದರೂ ಅನಿಸಿದರೆ, ಚಟುವಟಿಕೆಗಳನ್ನು ಎಂತು ಸಾಗಿಸಬೇಕೆಂಬುದೆ ಅವನಿಗೆ ಗೊತ್ತಿಲ್ಲೆಂದು ನನಗನಿಸುತ್ತದೆ. ಉದ್ಯಮ ಮತ್ತು ಜ್ಞಾನ ಅಂದರೆ ಪರಿಶ್ರಮ ಮತ್ತು ಬುದ್ಧಿ ಶಕ್ತಿಯೇ ಸೇವೆ ಮಾಡುವಾಗ ಮುಖ್ಯವಾಗಿ ಬೇಕಾದ ಸಾಧನಗಳು. ಹಣ ಕೆಲಮಟ್ಟಿಗೆ ಮಾತ್ರ ಸಹಾಯಕವಾಗುವದು, ಆದರೆ ತನ್ನ ಎಲ್ಲ ಭಾರವನ್ನು ಯಾವನೊಬ್ಬನು ಹಣದ ಮೇಲೆಯೇ ಹಾಕಬಾರದು. ಕಾರ್ಯವು ತನ್ನ ಸ್ವಂತ ನೈತಿಕ ಶಕ್ತಿಯನ್ನೇ ಅವಲಂಬಿಸತಕ್ಕದ್ದು. ಅದರ ಮೇಲೆಯೆ ನಿಲ್ಲತಕ್ಕದ್ದು. ಹಣವು ಬಂದರೆ ಬೇಕು. ಆದರೆ ಹಣ ಬಾರದಿದ್ದರೆ ಕೀಸಹಾಯಕನಾಗದಂತೆ ಅವನ ಯೋಜನೆಗಳು ಮತ್ತು ಮಾನಸಿಕ ಸ್ಥೈರ್ಯ ಬಲಿಷ್ಠವಾಗಿರತಕ್ಕದ್ದು.

ಎರಡನೆಯದಾಗಿ, ನನಗೆ ಕಾಣಿಕೆ ಕೊಟ್ಟವನು ತನ್ನ ಹಣವನ್ನು ನ್ಯಾಯ ಮಾರ್ಗದಿಂದ ಸಂಪಾದಿಸಿರುವನೊ ಇಲ್ಲವೆ ಅನ್ಯಾಯದಿಂದಲೊ ಎಂಬದನ್ನು ನಿರ್ಣಯಿಸುವ ಅಧಿಕಾರ ನನ್ನದಲ್ಲ. ತಾನ್ನು ಕೊಡುವ ಕಾಣಿಕೆಯಿಂದ ತನಗೆ ಸ್ವಲ್ಪ ಲಾಭವಾಗಬೇಕೆಂದು ಅವನು ಕರಾರು ಹಾಕಿದರೆ ನಾನು ಆ ಕಾಣಿಕೆಯನ್ನು ನಿರಾಕರಿಸಬಹುದು. ಉದಾಹರಣಾರ್ಥವಾಗಿ ಒಮ್ಮೆ ಒಬ್ಬನು ಹರಿಜನರಿಗಾಗಿ ಬಾವಿಯನ್ನು ತೋಡಿಸಲು ನನಗೆ ಹಣಕೊಡಮಾಡಿದನು. ಆದರೆ ಆಬಾವಿಯಮೇಲೆ ತನ್ನ ಹೆಸರು ಹಾಕಬೇಕೆಂದು ಅವನು ವಿಧಿಸಿದನು. ಬಾವಿಯಲ್ಲಿ ಮುಳುಗುವ ಹಕ್ಕು ಇಟ್ಟುಕೊಳ್ಳಬೇಕೆಂದು ನೀನು ಈ ಕರಾರು ಹಾಕುವಿಯಾ ಎಂದು ನಾನು ಅವನಿಗೆ ಕೇಳಿದೆನು. ಇಲ್ಲದಿದ್ದರೆ ಬಾವಿಯ ಮೇಲೆ ಹೆಸರು ಹಾಕಿಸಿಕೊಳ್ಳುವಲ್ಲಿ ಅರ್ಥವೇನಿದೆ? ನೀಕೆಯನ್ನು ಸ್ವೀಕರಿಸಬೇಕೋಬ ಡದೊ ಎಂಬದನ್ನು ವಿಮರ್ಶಿಸಲು ಇದೊಂದು ಒರೆ. ಉದಾಹರಣೆಯನ್ನು ಕೊಟ್ಟು ಇನ್ನೊಂದು ನಿಕಷವನ್ನು ನಾನು ಕೊಡಬಯಸುವೆ. ಒಮ್ಮೆ, ನಾಟಕ ಕಂಪನಿಯ ಒಡೆಯನೊಬ್ಬನು ನಾಟಕದಿಂದ ಬಂದ ವೆಚ್ಚ ಹೋಗಿ ಉಳಿದ ಹಣವನ್ನು ಕೊಡಲು ನನ್ನೆಡೆಗೆ ಬಂದನು ಈ ಹಣವನ್ನು ಸಂಪಾದಿಸಿದ್ದೆಂತು ಎಂಬುದನ್ನು ಹೇಳದೆ ಅದನ್ನು ನನಗೆ ಕೊಟ್ಟಿದ್ದರೆ ಬೇರೆ ಪ್ರಶ್ನೆ ಮಾಡದೆ ನಾನು ಅದನ್ನು ಸ್ವೀಕರಿಸುತ್ತಿದ್ದೆ ಎಂದು ನಾನು ಅವನಿಗೆ ಹೇಳಿದೆ. ಆದರೆ ಅವನು ಆ ಹಣ ಎಂತು ಬಂದಿತೆಂಬದನ್ನು ಹೇಳಿದ್ದರಿಂದ ನಾನು ಅದನ್ನು ಸ್ವೀಕರಿಸಲಾರದಂತಹ ಪ್ರಸಂಗ ಪ್ರಾಪ್ತವಾಯಿತು. ನಾನು ಅದನ್ನು ಸ್ವೀಕರಿಸಿದ್ದಾದರೆ ಈ ಬಗೆಯಾಗಿ ಹಣವನ್ನು ಸಂಪಾದಿಸುವದಕ್ಕೆ ನಾನು ಪ್ರೋತ್ಸಾಹನೆಯನ್ನು ಕೊಟ್ಟಂತಾಗುತಿತ್ತು. ನೀವು ಸ್ವೀಕರಿಸುವ ಕಾಣಿಕೆಯಿಂದ, ಅನ್ಯಾಯದಿಂದ ಹಣ ಸಂಪಾದಿಸುವದಕ್ಕೆ ನೀವು ಒಂದು ಬಗೆಯ ಪ್ರೋತ್ಸಾಹನೆ ಕೊಟ್ಟಂತಾಗುವದು ಒಪ್ಪಿಗೆ ಕೊಟ್ಟಂತಾಗುವದು. ಅನ್ಯಾಯದಿಂದ ಸಂಪಾದಿಸಿದ ಹಣವನ್ನು ಒಂದು ಬಗೆಯ ಪ್ರಾಯಶ್ಚಿತ್ತವೆಂದು ಕೊಡುವದಾದರೆ ಮತ್ತು ಮುಂದೆ ಆ ಬಗೆಯ ಅನ್ಯಾಯದಿಂದ ಹಣ ಸಂಪಾದಿಸುವ ಮಾರ್ಗವನ್ನು ಬಿಟ್ಟುಕೊಡುವದಾದರೆ ಮಾತ್ರ ಅಂಥ ಹಣವನ್ನು ಸ್ವೀಕರಿಸಬಹುದು ಎಂಬ ವಿಷಯವನ್ನು ನಿಮ್ಮಗಮನಕ್ಕೆ ತರಬಯಸುತ್ತೇನೆ. ಇಷ್ಟನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ನಾವೆಲ್ಲ ಒಳ್ಳೆ ಪುಣ್ಯ ಕಾರ್ಯಗಳ ಕೂಡ ಪಾಪ ಕಾರ್ಯಗಳನ್ನೂ ಮಾಡುವ ಸಂಭವವಿದ್ದುದರಿಂದ ಎರಡನೆಯವರ ಕೃತ್ಯಗಳನ್ನು ನಿರ್ಣಯಿಸುವ ಗೊಡವೆಗೆ ನಾವು ಹೋಗುವದು ಬೇಡ.

ಗಾಂಧೀ ಸ್ಮಾರಕ ನಿಧಿಗೆ ಸಹಾಯ ಸಲ್ಲಿಸುವವರಲ್ಲಿ ಧನಿಕರೂ ಇರುವರು ಬಡವರೂ ಇರುವರು. ಶ್ರೀಮಂತರಿಗಿಂತ ಬಡವರೇ ಹೆಚ್ಚು ಜನ ಇರುವರು. ಗಾಂಧೀಜಿ ಬಡವರಿಂದಲೂ ಹಣವನ್ನು ಸಂಪಾದಿಸುತಿದ್ದರುಮತ್ತು ಶ್ರೀಮಂತರಿಂದ ದೊರೆತಸಾವಿರಗಟ್ಲೆ ರೂಪಾಯಿಗಳಿಗಿಂತಬಡವರಿಂದ ದೊರೆತ ಅಣೆಪೈಗಳಿಗೇ ಅವರು ಹೆಚ್ಚುಗೌರವ ಕೊಡುತಿದ್ದರು. ಅಲ್ಲದೆ ಶ್ರೀಮಂತರಿಂದ ಕೊಡಲ್ಪಟ್ಟ ಹಣವಾದರೂ ಕೊನೆಗೆ ಬಡವರಿಂದಲೆ ಬರುವದು. ಬಡವರನ್ನು ಸುಲಿದು ಅವರು ಹಣವನ್ನು ಸಂಪಾದಿಸಿದ್ದಾದರೆ ಆ ಬಡವರ ಕಲ್ಯಾಣಕ್ಕಾಗಿಯೇ ನಾನು ಅಹಿಂಸಾ ಮಾರ್ಗದಿಂದ ಅವರಿಂದ ಆ ಹಣವನ್ನು ಸೆಳೆಯ ಬಯಸುತ್ತೇನೆ.

ಹಣದ ವಿನಿಯೋಗವನ್ನು ನಾವು ಎಂತು ಮಾಡುವೆವೆಂಬುದು ಹೆಚ್ಚು ಮಹತ್ವದ್ದಾಗಿದೆ. ನಾವು ಯೋಗ್ಯ ರೀತಿಯಿಂದ ಮತ್ತು ಸದುದ್ದೇಶಕ್ಕಾಗಿ ಹಣವನ್ನು ಉಪಯೋಗಿಸಿದ್ದಾದರೆ ನಾವು ಆ ಹಣವನ್ನು ವಿಶುದ್ಧಗೊಳಿಸುತ್ತೇವೆ. ಅಮೇಧ್ಯದಿಂದಲಾದರೂ ಕಾಂಚನವನ್ನು ತೆಗೆದುಕೊಳ್ಳಬೇಕೆಂದು ವೇದದಲ್ಲಿ ಹೇಳಿದೆ. ಪ್ರತಿಯೊಬ್ಬನು ಸ್ವಪ್ರೇರಣೆಯಿಂದ ಕೊಟ್ಟ ಹಣವನ್ನು ಸದುದ್ದೇಶಕ್ಕಾಗಿ ವಿನಿಯೋಗಿಸಿದ್ದಾದರೆ ಅದು ಪಾಪದ ಪರಿಹಾರವನ್ನೂ ಮಾಡಬಲ್ಲದು. ಗಿರಣಿಗಾರನ ಹಣದಿಂದ ಖಾದಿ ಪ್ರಚಾರವನ್ನು ನಾನು ಮಾಡಿದ್ದಾದರೆ ಅವರ ಹಣದಿಂದಲೆ ನಾನು ಅವರ ಉದ್ಯೋಗವನ್ನು ಅಭಿಯೋಗಿಸಿದಂತಾಗುವದು. ಜವಳಿ ಉದ್ಯೋಗವನ್ನು ರಾಷ್ಟ್ರೀಕರಿಸಬೇಕೆಂದು ನಮ್ಮ ಸಾಮ್ಯವಾದಿ ಬಾಂಧವರು ಹೇಳುವದುಂಟು, ಅದಕ್ಕೆ ನಾನು ಒಪ್ಪುತ್ತೇನೆ. ಆದರೆ ಇದಕ್ಕೆ ಕಾಲವಿಲಂಬವಾಗುವದು. ಅಲ್ಲಿಯ ವರೆಗೆ ನಾವು ಏನು ಮಾಡತಕ್ಕದ್ದು? ಗಿರಣಿಗಳಲ್ಲಿ ತಯಾರಾದ ಬಟ್ಟೆಗಳನ್ನು ಪಯೋಗಿಸಿ ಅವರಿಗೆ ಸಹಾಯ ಮಾಡುತ್ತ ಸಾಗಬೇಕೆ? ನಾವು ಖಾದಿಯನ್ನು ಉತ್ಪಾದಿಸಿ ಧರಿಸಹತ್ತಿದರೆ ಗಿರಣಿಗಾರರು ತಾವಾಗಿಯೆ ತಮ್ಮ ಗಿರಣಿಗಳನ್ನು ರಾಷ್ಟ್ರಕ್ಕೆ ಒಪ್ಪಿಸಿಕೊಡುವರೆಂದು ನಾನು ಹೇಳಬಯಸುತ್ತೇನೆ. ಆ ಗಿರಣಿಗಳಿಂದ ನಾವೇನು ಮಾಡತಕ್ಕದ್ದೆಂಬದನ್ನು ನಾನು ಈಗಲೆ ಹೇಳುವ ಅವಶ್ಯಕತೆಯಿಲ್ಲ.

ರಾಟೆಯ ಅಸಾಮರ್ಥ್ಯ

ಪ್ರಶ್ನೆ— ೩ ಎಂಟುಗಂಟೆ ಕೆಲಸಮಾಡಿದರೂ ಉಪಜೀವನಕ್ಕೆ ಸಾಕಾಗುವಷ್ಟು ಹಣಬಾರದೆ ಇರುವದರಿಂದ ರಾಟಿಯು ಕೂಲಿಕಾರರ ಮನಸ್ಸನ್ನು ಆಕರ್ಷಿಸಲಾರದು. ಆದರಿಂದ ಹೆಚ್ಚು ಹಣ ಬರುವಂತಾದರೆ ಹಳ್ಳಿಗಳಲ್ಲಿ ಅದು ಬೇರೂರಬಹುದು.

ಉತ್ತರ— ಇದಕ್ಕೆ ಉತ್ತರ ಬಹಳ ಸುಲಭವಾಗಿದೆ. ದಿನವೂ ಸುಮಾರು ಒಂದೂವರೆ ಗಂಟೆ ನಾನು ತಿರುಗಾಡಲಿಕ್ಕೆ ಹೋಗುವದುಂಟು. ದಿನಕ್ಕೆ ೮ ಗಂಟೆಗಳಂತೆ ನಾನು ಈ ವ್ಯಾಯಾಮವನ್ನು ಮಾಡಿದರೆ ಅದರಿಂದ ನನ್ನ ಉಪಜೀವನ ನಡೆಯಬೇಕೆ? ನಾನು ಹೆಚ್ಚು ಅಡ್ಡಾಡಿದರೆ ಅದರಿಂದ ನನಗೆ ಸ್ವಚ್ಛ ಹವೆ ಹೆಚ್ಚಾಗಿ ದೊರೆವುದು, ಆದರೆ ರೊಟ್ಟಿ ದೊರೆಯುವದಿಲ್ಲ. ನಾನು ಮಾವಿನ ಗಿಡವನ್ನು ಹಚ್ಚಿದ್ದಾದರೆ ಬಾಳೇಹಣ್ಣು ನನಗೆ ದೊರೆಯಲಾರವು ಅದೇರೀತಿಯಾಗಿ ನಾವು ನೂಲು ತೆಗೆದರೆ ಅದರಿಂದ ಬಟ್ಟೆ ಮಾತ್ರ ನಮಗೆ ಸಿಕ್ಕಬಹುದಲ್ಲದೆ. ರೊಟ್ಟಿಯಲ್ಲ. ಚರಖಾ ಸಂಘದವರು ಕೆಲಮಟ್ಟಿಗೆ ಅದನ್ನು ರೊಟ್ಟಿಯ ಗೂಡತಳಕು ಹಾಕಲು ಪ್ರಯತ್ನಿಸಿದ್ದು ನಿಜ. ಆದರೆ ಚರಖಾ ಸಂಘದ ಮುಖ್ಯ ಉದ್ದೇಶವು ನೂಲು ಉತ್ಪಾದಿಸುವದಾಗಿದೆಯಲ್ಲದೆ. ರೊಟ್ಟಿಯನ್ನು ಉತ್ಪಾದಿಸುವದಲ್ಲ.

ಇದರ ಮಹತ್ವವನ್ನು ನೀವು ತಿಳಿದುಕೊಳ್ಳುವದು ಅವಶ್ಯವಾಗಿದೆ. ಆಹಾರವೆ ಮನುಷ್ಯನಿಗೆ ಬೇಕಾದ ಮೊದಲನೆಯ ಅವಶ್ಯಕತೆ, ತದನಂತರ ಬಟ್ಟೆ ಎಂದು ಸಾಮಾನ್ಯವಾಗಿ ಹೇಳುವದುಂಟು. ಆದರೆ ನೀವು ಇನ್ನಷ್ಟು ಆಳವಾಗಿ ವಿಚಾರಿಸಿದ್ದಾದರೆ, ಸುಧಾರಿಸಿದ ಸಮಾಜದಲ್ಲಿ ಬಟ್ಟೆಯೇ ಪ್ರಥಮಾವಶ್ಯಕತೆಯ ವಸ್ತುವು, ಅನ್ನವಲ್ಲ ಎಂಬ ಮಾತು ನಿಮಗೆ ಗೊತ್ತಾಗಬಲ್ಲದು. ಅನ್ನವಿಲ್ಲದೆ ನೀವು ಒಂದೆರಡು ದಿನ ಆಸ್ತಿತ್ವ ಸಂಚರಿಸಬಲ್ಲಿರಿ. ಆದರೆ ಬತ್ತಲೆ ಕ್ಷಣ ಹೊತ್ತು ಕೂಡ ಇರಲಾರಿರಿ. ಬಟ್ಟೆ ಮಳೆಗಾಳಿಯಿಂದಷ್ಟೇ ನಮ್ಮನ್ನು ರಕ್ಷಿಸುವದಿಲ್ಲ ಆದರೆ ನಮ್ಮ ನಾಗರಿಕತೆಯ ಚಿನ್ಹೆಯನ್ನೇ ಅದು ರಕ್ಷಿಸುವದು. ನಿಜವಾಗಿ ಹೇಳುವದಾದರೆ, ಮಳೆಗಾಳಿಯಿಂದ ನಮ್ಮನ್ನು ರಕ್ಷಿಸುವದಕ್ಕಿಂತಇದೇ ಅದರಮುಖ್ಯಕರ್ತವ್ಯವಾಗಿದೆ. ಈ ರೀತಿಯಾಗಿ ಬಟ್ಟೆಯುಮಾನವನಪ್ರಥಮಅವಶ್ಯಕತೆಯಾಗಿದೆಯಲ್ಲದೆ ಗೌಣ ಅವಶ್ಯಕತೆಯಲ್ಲ ಮತ್ತು ರಾಟೆಯು ಈ ಅವಶ್ಯಕತೆಯನ್ನು ಪೂರೈಸುತ್ತದೆ ನಿಮ್ಮ ಮರ್ಯಾದೆಯನ್ನೇ ಮುಚ್ಚುವ ಮಹತ್ವದ ಹೊಣೆ ಹೊತ್ತ ರಾಟೆಯಿಂದ ನಾವು ಇದಕ್ಕೂ ಹೆಚ್ಚು ಏನನ್ನು ಅಪೇಕ್ಷಿಸತಕ್ಕದ್ದು.?

ನೂಲಿನ ನಿರ್ಬಂಧ

ಪ್ರಶ್ನೆ ೪:— ನೂಲಿನ ನಿರ್ಬಂಧದಿಂದ ಅಸತ್ಯಕ್ಕೆ ಅವಕಾಶ ದೊರೆಯುವದಾದ್ದರಿಂದ ಆ ನಿರ್ಬಂಧವನ್ನು ಏಕೆ ತೆಗೆದುಹಾಕಬಾರದು ?

ಉತ್ತರ:— ಒಳ್ಳೇದು. ಅದರಿಂದ ನಿಮಗೆ ಸಮಾಧಾನವಾಗುವಂತಿದ್ದರೆ, ಇನ್ನು ಕೆಲ ದಿನಗಳಲ್ಲಿ ಆ ನಿರ್ಬಂಧ ತೆಗೆದು ಹೋಗುವದು. ಆದರೆ ಖಾದಿ ಭಾಂಡಾರಗಳಿಂದಲೇ ನೀವು ಖಾದಿಯನ್ನು ಕೊಳ್ಳಬಯಸಿದರೆ ಖಾದಿಯು ಜೀವಂತ ಉಳಿಯಲಾರದೆಂದು ನಾನು ಅದೇ ಕಾಲಕ್ಕೆ ಎಚ್ಚರಿಕೆ ಕೊಡಬಯಸುತ್ತೇನೆ. ಹಳ್ಳಿಗರು ತಮ್ಮ ಆಹಾರವನ್ನು ಉತ್ಪಾದಿಸುತಿರುವಂತೆ ತಮಗೆ ಬೇಕಾದ ಖಾದಿಯನ್ನೂ ಉತ್ಪಾದಿಸಬೇಕಾಗುವದು. ನಗರಗಳಲ್ಲಿಯ ಪರಿಸ್ಥಿತಿಗಾಗಿ ನಗರವಾಸಿಗಳು ಆಹಾರವನ್ನು ಉತ್ಪಾದಿಸಲಾರರು. ಆದರೆ ಅವರು ತಮ ಮನೆಗಳಲ್ಲಿ ಬಟ್ಟೆಯನ್ನಾದರೂ ಉತ್ಪಾದಿಸಲಿ. ಅದರಿಂದ ಅವರ ದೈನಿಕ ಕಾರ್ಯಕಲಾಪಗಳಲ್ಲಿ ಒಂದು ಬಗೆಯ ಆರೋಗ್ಯಕರ ಬದಲಾವಣೆಯುಂಟಾಗುವದು. ಮನೆಯಲ್ಲಿ ಅದರಿಂದ ಸಂತೋಷದ ವಾತಾವರಣವುಂಟಾಗುವದಲ್ಲದೆ ಪರಸ್ಪರ ಸಹಕಾರ ಭಾವನೆಯುಂಟಾಗುವದು. ಮನೆಯಲ್ಲಿ ಒಬ್ಬನು ಹತ್ತಿ ಹಿಂಜಬಹುದು ಮತ್ತೊಬ್ಬನು ಹಂಜಿ ಮಾಡಬಹುದು. ಮೂರನೆಯವನು ನೂಲು ತೆಗೆಯಬಹುದು. ನಾಲ್ಕನೆಯವನು ಅದಕ್ಕೆ ಹುರಿಹಾಕಬಹುದು. ಹೀಗೆ ಇಮ್ಮಡಿ ಹುರಿಹಾಕಿದ ನೂಲಿನಿಂದ ಸುಲಭವಾಗಿ ನೆಯ್ಯಲಿಕ್ಕೆ ಬರುವದು ನೀವು ಮನೆಯಲ್ಲಿ ಒಂದು ಮಗ್ಗವನ್ನೂ ಹಾಕಬೇಕೆಂದು ಸೂಚಿಸುವದರಲ್ಲಿ ನಾನೇನು ಹಿಂದುಮುಂದೆ ನೋಡುವದಿಲ್ಲ. ನಿಮ್ಮ ಕುಟುಂಬದವರಿಗೆ ಇಡೀ ವರ್ಷ ಬೇಕಾಗುವಷ್ಟು ಬಟ್ಟೆಯನ್ನು ನಿಮ್ಮ ಕುಟುಂಬದವರು ಒಂದು ತಿಂಗಳಲ್ಲಿಯೇ ನೇಯಬಹುದು. ನಿಮ್ಮ ಮನೆಗಳಲ್ಲೆಲ್ಲ ನೀರಿನ ನಳಗಳುಂಟು. ಆ ನೀರು ಪ್ರವಾಹರೂಪವಾಗಿ ಬರುವುದುಂಟು. ಆದರೆ ಹನಿಹನಿಯಾಗಿ ಬೀಳುವ ಮಳೆಯ ನೀರಿನೊಡನೆ ಅದು ಸರಿ ಹೋಗಲಾರದು. ಮಳೆಯು ಹನಿ ಹನಿ ಬಿದ್ದರೂ ಇಡೀ ದೇಶದಲ್ಲೆಲ್ಲ ಅದು ಪ್ರಸಾರವಾಗಿ ನಳಗಳಲ್ಲಿಯ ನೀರಿಗಿಂತ ಹೆಚ್ಚು ಉಪಯುಕ್ತವಾಗುವದು. ರಾಟಿಯನ್ನು ಮಳೆ ನೀರಿಗೆ ಹೋಲಿಸಬಹುದು. ಅದು ಪ್ರತಿಮನೆಗೂ ತನ್ನ ಕಾಣಿಕೆಯನ್ನು ಸಲ್ಲಿಸುತ್ತದೆ. ಸಂಪತ್ತಿನ ನ್ಯಾಯ್ಯವಾದ ಹಂಚಿಕೆಯ ಆರ್ಥಿಕ ಸಮಸ್ಯೆಯನ್ನು ಅದು ಇಂತು ಬಿಡಿಸುವದು.

ಬಂಡವಲುಗಾರರ ಪವಡೆಯೊಳಗಿಂದ ನೀವು ಪಾರಾಗಬಯಸುತ್ತಿದ್ದರೆ ನೀವು ರಾಟೆಯನ್ನು ತಿರುವಲಿಕ್ಕೆಬೇಕು. ತಾಯಿಯು ರಾಟೆಯ ಮೂಲಕವಾಗಿಯೆ ಮಕ್ಕಳಲ್ಲಿ ದೇಶಪ್ರೇಮವನ್ನು ಬಿಂಬಿಸಬಲ್ಲಳು. ಮುಂಜಾವಿನ ನ್ಯಾಹರಿಯನ್ನು ತಿನ್ನುವ ಮೊದಲು ತುಳಸೀ ಗಿಡಕ್ಕೆ ನೀರು ಹಾಕಲಿಕ್ಕೇಬೇಕೆಂದು ನನ್ನ ತಾಯಿ ಒತ್ತಾಯಪಡಿಸುತಿದ್ದಳು. ನಾನು ಆಹಾರವನ್ನು ತೆಗೆದುಕೊಳ್ಳುವ ಮೊದಲು ವನಸ್ಪತಿಗಳಿಗೂ ಆಹಾರವನ್ನು ಕೊಡಬೇಕೆಂಬ ಪಾಠವನ್ನು ಅವಳು ನನಗೆ ಕಲಿಸಿದಳು. ಅದೇ ರೀತಿಯಾಗಿ ದೇಶದ ಸಲುವಾಗಿ ನೂಲಲಿಕ್ಕೆಬೇಕೆಂದು ತಾಯಿಯು ಮಕ್ಕಳಿಗೆ ಬೋಧಿಸಿದ್ದಾದರೆ ಬಾಲ್ಯದಿಂದಲೆ ಅವಳು ಮಕ್ಕಳಿಗೆ ದೇಶಾಭಿಮಾನದ ಪಾಠವನ್ನು ಕಲಿಸಿದಂತಾಗುವದು. ಪ್ರತಿಯೊಬ್ಬನು ದೈಹಿಕ ಶ್ರಮವನ್ನು ಮಾಡಲಿಕ್ಕೆಬೇಕು. ನೀವು ನಿತ್ಯ ನೂಲು ತೆಗೆಯುವದನ್ನು ಪ್ರಾರಂಭಿಸಿದರೆ, ಬಡವರೊಡನೆ ನೀವು ಸಾಮರಸ್ಯ ಹೊಂದುವಿರಿ.

ರಾಷ್ಟ್ರೀಯ ಸರಕಾರದ ಔದ್ಯಮಿಕ ಧೋರಣ

ಸ್ವತಂತ್ರ ಹಿಂದುಸ್ತಾನ ಸರಕಾರವು ದೇಶದ ಔದ್ಯಮಿಕ ಉನ್ನತಿಗಾಗಿ ನಿಶ್ಚಿತ ಧೋರಣವನ್ನು ಕಟ್ಟಕಡೆಗೆ ಕಳಿದಿದೆ. ಎಪ್ರಿಲ್ ೭ ರಲ್ಲಿ ಔದ್ಯಮಿಕ ಧೋರಣವನ್ನು ಸರಕಾರವು ಸಾರಿತು ಮತ್ತು ಮುಖ್ಯವಾದ ಒಂದು ಚರ್ಚೆ ನಡೆದ ಮೇಲೆ ಹಿಂದೀ ಪಾರ್ಲಮೆಂಟು ಅದಕ್ಕೆ ಒಪ್ಪಿಗೆ ಕೊಟ್ಟಿತು.

ಸ್ಪಷ್ಟವಾಗಿ ಹೇಳಾವುದಾದರೆ ಔದ್ಯಮಿಕ ಧೋರಣವು ಬಹಳ ಮಧ್ಯಮ ರೀತಿಯದೂ ಸಾಮಾನ್ಯವಾದುದೂ ಆಗಿದೆ. ಸ್ವಾತಂತ್ರ್ಯದ ಶಾಂತ ಪ್ರಕಾಶವನ್ನು ಅನುಭವಿಸಲು ಹಾತೊರೆವ ಸಾಮಾನ್ಯ ಜನತೆಗೆ ಆಕರ್ಷಕವಾಗುವಂಥ ವಿಷಯ ಅದರಲ್ಲೊಂದೂ ಇಲ್ಲ. ಅದು ಗಾಂಧೀ ಸಾಮ್ಯವಾದದ ಗೆಲುವೆಂದು ಹೇಳುವದನ್ನು ಒಪ್ಪುವುದು ಕಷ್ಟ. ಬಹುಶಃ ಅದು ಮಿಶ್ರ ಆರ್ಥಿಕ ಪದ್ಧತಿಯ ಪುರಸ್ಕರ್ತರ ವಿಜಯವೆಂದು ಹೇಳಬಹುದು. ಆಧುನಿಕ ವಿಚಾರಲಹರಿಯಂತೆ ಮಿಶ್ರಪದ್ಧತಿಯೆಂದರೆ ಹೆಚ್ಚು ಕಡಿಮೆ ಬಂಡವಾಲಿಗರ ಅರ್ಥಪದ್ಧತಿ. ಔದ್ಯಮಿಕ ಧೋರಣವು ೧೦ ವರ್ಷಗಳ ಸುದೀರ್ಘ ಕಾಲದ ಅವಕಾಶವನ್ನು ಸದ್ಯದ ಖಾಸಗಿ ಉದ್ಯಮಗಳಿಗೆ ಕೊಟ್ಟಿದೆ. ಅದರ ಜೊತೆಗೆ ಚೆನ್ನಾಗಿ ಕೆಲಸ ಸಾಗುವ ಬಗ್ಗೆ ಮತ್ತು ನ್ಯಾಯವಾದ ಬೆಳವಣಿಗೆಗಾಗಿ ಎಲ್ಲ ಸವಲತ್ತುಗಳನ್ನು ಕೊಡುವದಾಗಿ ಆಶ್ವಾಸನೆವಿತ್ತಿದೆ. ಈ ಅವಧಿಯ ಕೊನೆಯಲ್ಲಾದರೂ ರಾಷ್ಟ್ರೀಕರಣ ಮಾಡುವ ನಿಶ್ಚಿತ ಘೋಷಣವಿಲ್ಲ. ಆ ಕಾಲದ ಪರಿಸ್ಥಿತಿಯ ದೃಷ್ಟಿಯಲ್ಲಿ ಎಲ್ಲ ಸಂಗತಿಗಳನ್ನು ಪುನಃ ಪರಿಶೀಲಿಸಲಾಗುವುದು ಎಂದು ಮಾತ್ರ ಹೇಳಲಾಗಿದೆ.

ರಾಷ್ಟ್ರೀಕರಿಸಲಾಗುವ ಉದ್ಯೋಗಗಳ ಪಟ್ಟಿಗಳು, ಅವುಗಳಲ್ಲಿ ಸರಕಾರ ಸ್ವತಃ ತೆಗೆದುಕೊಂಡು ನಡೆಸುವಂಥವು ಸಾಕಷ್ಟಿಲ್ಲ. ಅ. ಭಾ. ಕಾಂ. ಸಮಿತಿ ನಿಯೋಜಿಸಿದ ಆರ್ಥಿಕ ಕಾರ್ಯಕ್ರಮದ ಸಮಿತಿ ಮತ್ತು ರಾಷ್ಟ್ರೀಯ ಯೋಜನಾ ಸಮಿತಿಗಳು ಮಾಡಿದ ಪುರಸ್ಕಾರಗಳನ್ನು ಬಹಳ ಮಟ್ಟಿಗೆ ಸತ್ವಹೀನ ಮಾಡಲಾಗಿದೆ.

ಸರಕಾರವು ಮನೆ ಕೈಗಾರಿಕೆಗಳಿಗೆ ಪ್ರಾಮುಖ್ಯ ಕೊಟ್ಟಿದೆ. ಸ್ಥಳೀಯ ಸಾಮುಗ್ರಿಗಳನ್ನು ಬಳಸಿಕೊಳ್ಳುವ ದೃಷ್ಟಿಯಿಂದ ಹಾಗೆ ಮಾಡಿದ್ದು ಸ್ಥಳೀಯ ಸ್ವಾವಲಂಬನವನ್ನು ಕೆಲವು ವಿಶಿಷ್ಟ ಬಳಕೆಯ ಸಾಮಾನುಗಳಲ್ಲಿ ಸಾಧಿಸುವುದೂ ಅದರ ಉದ್ದೇಶ. ಆದರೂ ಗಾಂಧಿಯವರ ಆದರ್ಶಗಳಾದ ಸರಳತೆ, ಸುಲಿಗೆಗಾರಿಕೆಯ ಅಭಾವ, ಮಾನವ್ಯಮೌಲ್ಯ ಇವುಗಳ ಮೇಲೆ ನಿಂತ ವಿಕೇಂದ್ರೀಕೃತವಾದ ಮನೆ ಕೈಗಾರಿಕೆ ತತ್ವದ ದೂರಸ್ಪರ್ಶಿಯಾದ ಮತ್ತು ಸಂಪೂರ್ಣವಾದ ಪರಿಣಾಮಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡಂತೆ ತೋರುವುದಿಲ್ಲ. ಈಗ ಕತ್ತಿನ ಮೇಲೆ ಕುಳಿತಿರುವ ಸಮಸ್ಯೆಗಳಾದ ಪೂರ್ಣ ಉದ್ಯೋಗ, ರಾಷ್ಟ್ರೀಯ ಸಂರಕ್ಷಣೆ ಬಂಡವಾಲಿಗ ಮತ್ತು ಕೂಲಿಕಾರರಲ್ಲಿಯ ಔದ್ಯೋಗಿಕ ಸೌಹಾರ್ದ ಇವುಗಳನ್ನು ಬಗೆಹರಿಸಲು ಸಹಕಾರಿ ತಳಹದಿಯ ಮೇಲೆ ಮಾಡುವ ಔದ್ಯೋಗಿಕ ವಿಕೇಂದ್ರೀಕರಣವೊಂದೇ ಆಧುನಿಕ ಜಗತ್ತಿನಲ್ಲಿ ಪ್ರಯೋಜನಕಾರಿಯಾದ ಸಾಧನ ಎಂಬುದನ್ನು ತಿಳಿದುಕೊಳ್ಳದಿರುವುದು ಒಂದು ಉದಾಹರಣೆ; ಹಸಿರು ಗದ್ದೆಗಳ ಮತ್ತು ತೆಮ್ಮಟಗಳ ಸನಿಹದಲ್ಲಿ ಅಸಂಖ್ಯವಾದ ಗೃಹ ಸಹಕಾರಿ ಕಾರಖಾನೆಗಳಲ್ಲಿ ಕೆಲಸಗಾರರನ್ನು ಉತ್ಪಾದನ ಸಾಧನಗಳ ಒಡೆಯರನ್ನಾಗಿ ಮಾಡದೆ, ಉತ್ಪಾದನೆ ಹೆಚ್ಚಿಸಬೇಕೆಂದು ಎಷ್ಟು ಕೂಗಿಕೊಂಡರೂ ವ್ಯರ್ಥವೇ. ಗಾಂಧೀಯವರ ಸೂತ್ರವೊಂದೇ ನಮ್ಮ ಆರ್ಥಿಕ ರೋಗ ನಿವಾರ

—೧೦ನೆಯ ಪುಟಕ್ಕೆ

ಪತ್ರಿಕಾ ಪರಿಷತ್ತಿನಲ್ಲಿ

ಪಂ. ಜವಾಹರಲಾಲರ ಗರ್ಜನೆ

ಮುಂಬಯಿಯಲ್ಲಿ ತಾ. ೨೬ಕ್ಕೆ ಕೂಡಿದ್ದ ಪತ್ರಿಕಾ ಪರಿಷತ್ತಿನಲ್ಲಿ ಅವರಿಗೆ ಕೇಳಿದ ವಿವಿಧ ಪ್ರಶ್ನೆಗಳಿಗೆ ಹಿಂದುಸ್ಥಾನದ ಮುಖ್ಯ ಮಂತ್ರಿ ಪಂ. ಜವಾಹರಲಾಲರು ಹೀಗೆ ಸ್ಪಷ್ಟವಾಗಿ ಪ್ರತ್ಯುತ್ತರಗಳನ್ನಿತ್ತರು.

ಸರಕಾರದ ತಾಳ್ಮೆ ಮೀರಿತು

ಹೈದರಾಬಾದದ ವಿಷಯದಲ್ಲಿ ಹಿಂದುಸ್ಥಾನ ಸರಕಾರದ ತಾಳ್ಮೆ ಒಡೆದು ಹೋಗುತ್ತಿದೆ. ರಜಾಕಾರರಿಂದ ಹೈದರಾಬಾದದ ಹಾಗೂ ನೆರೆಯ ಒಕ್ಕೂಟದ ಪ್ರಜೆಗಳಿಗೆ ಗಂಡಾಂತರವಿದೆಯೆಂದು ಕಂಡು ಬಂದರೆ ನಮ್ಮ ಸರಕಾರವು ಕೈಕಟ್ಟಿಕೊಂಡು ಎಂದಿಗೂ ಕೂಡಲಾರದು. ನಾವು ಹೈದರಾಬಾದಕ್ಕೆ ಈ ಗಳಿಗೆ ಸವಾಲೆಸೆದಿದೆಯೆಂದು ತೋರುತ್ತದೆ. ಹೈದರಾಬಾದ ಸರಕಾರವು ರಜಾಕಾರರನ್ನು ದಮನಿಸಲು ಅಸಮರ್ಥವಾಗಿದೆಯೋ ಅಥವಾ ಬೇಕೆಂದೇ ಸುಮ್ಮನಿದೆಯೋ ಹೇಳಲು ಬಾರದಾಗಿದೆ. ಏನೇ ಇರಲಿ ನಿಜಾಮ ಮತ್ತು ಹೈದರಾಬಾದ ಸರಕಾರವು ತಡೆಯದೆ ಹೋದರೆ ನಾವೇ ಉಪಾಯ ಯೋಚಿಸುವದು ಕ್ರಮಪ್ರಾಪ್ತವಾಗಿದೆ.

ರಾಷ್ಟ್ರಗಳ ಗುಂಪು

ಇನ್ನೊಂದು ಪ್ರಶ್ನೆಗೆ ಉತ್ತರಕೊಡುತ್ತ ಪಂಡಿತ ಜವಾಹರಲಾಲರು ಹೀಗೆ ಹೇಳಿದರು.

ರಾಷ್ಟ್ರಗಳು ಗುಂಪುಗೂಡುವ ಕಲ್ಪನೆ ತಪ್ಪು ಧೋರಣವೆಂದು ನನ್ನ ಮತ. ಆದರೂ ಆರ್ಥಿಕ, ಸಾಂಸ್ಕೃತಿಕ ವಿಷಯಗಳಲ್ಲಿ ಸರಿಯಾದ ರಾಷ್ಟ್ರಗಳು ಗುಂಪು ಕಟ್ಟಿಕೊಳ್ಳಬೇಕೆಂದು ನಾನು ಅನ್ನುತ್ತೇನೆ. ಈ ದೃಷ್ಟಿಯಿಂದೇ ನಾವು ಬ್ರಿ. ಕಾಮನ್‌ವೆಲ್ಥದೊಡನೆ ಸಂಬಂಧವಿಟ್ಟುಕೊಳ್ಳಬಹುದು.

ರಾಷ್ಟ್ರ ಭಾಷೆಯ ಸ್ವರೂಪ

ಇನ್ನು ಹಿಂದುಸ್ಥಾನದ ಕಚೇರಿಗಳಲ್ಲಿ ಇಂಗ್ಲೀಷಿನ ಉಪಯೋಗವು ಕಡಿಮೆಯಾಗುತ್ತ ಸಾಗುವದು. ಕಾಂಗ್ರೆಸು ಹಿಂದುಸ್ಥಾನಿಯನ್ನು ಒಪ್ಪಿದೆ. ಆದರೆ ರಾಷ್ಟ್ರಭಾಷೆ ಹಿಂದಿಯೊ ಉರ್ದುವೊ, ಲಿಪಿಯಾವುದು ಈ ಬಗ್ಗೆ ವಾದವಿದೆ. ಉರ್ದು ಮತ್ತು ನಾಗರಿ ಲಿಪಿಯ ಹಿಂದುಸ್ಥಾನಿಯೇ ರಾಷ್ಟ್ರಭಾಷೆಯಾಗಬೇಕೆಂದು ಮಹಾತ್ಮರು ಅಭಿಪ್ರಾಯ ಪಟ್ಟಿದ್ದರು. ನನ್ನದಾದರೂ ಇದಕ್ಕೆ ಅನುಕೂಲ ಮತವಿದೆ. ನಾಗರೀ ಲಿಪಿಯು ಜನಪ್ರಿಯವಾಗಿದ್ದರೂ ಉರ್ದು ಲಿಪಿ ಬಿಡಲು ಬರುವಂತಿಲ್ಲ. ಹಿಂದೀ ಭಾಷೆಯಲ್ಲಿ ಬಳಕೆಯ ಶಬ್ದಗಳಿಗೆಲ್ಲ ಪ್ರವೇಶ ದೊರಕಬೇಕು. ಇಂಗ್ಲೀಷಿನಲ್ಲಿ ಕೂಡ ಎಲ್ಲ ಭಾಷೆಯ ಶಬ್ದಗಳು ಸೇರಿವೆ. ಪ್ರತಿ ವರ್ಷ ಇಂಗ್ಲೀಷಿಗೆ ೫ ಸಾವಿರ ಹೊಸ ಶಬ್ದಗಳು ಸೇರಿಕೊಳ್ಳುವವು. ಇದನ್ನು ನೋಡಿದರೆ ಹಿಂದಿ ಭಾಷೆಯು ಉರ್ದು ಲಿಪಿಯನ್ನೂ ಶಬ್ದಗಳನ್ನೂ ಇಟ್ಟುಕೊಟ್ಟರೆ ಅದು ಅಷ್ಟು ಬಡವಾಗದೆ?

ಕಮ್ಯುನಿಸ್ಟರ ಪ್ರತಿಗಾಮಿಗಳು

ಪ್ರತಿಕ್ರಿಯೆಗೆ ಕಾರಣವಾಗುವಂತಹ ಕೃತಿ ಧೋರಣ ತಳೆದವರೆಲ್ಲ ಪ್ರತಿಗಾಮಿಗಳೇ. ಕಳ್ಳಪೇಟೆಯ ವ್ಯಾಪಾರಿಗಳು ಸಂಗ್ರಾಹಕರು ಅಷ್ಟೇ ಪ್ರತಿಗಾಮಿಗಳಲ್ಲ. ಹಿಂದೀ ಕಮ್ಯುನಿಸ್ಟರು ದೇಶದಲ್ಲೆಲ್ಲ ವಿಧ್ವಂಸಕ ಚಳವಳಿ ನಡೆಸಬೇಕೆಂದು ಶಸ್ತ್ರಾಸ್ತ್ರ ಸಂಗ್ರಹಿಸುತ್ತಿದ್ದರು. ಈ ಬಗ್ಗೆ ಸರಕಾರದ ಬಳಿ ಸಾಕಷ್ಟು ಆಧಾರಗಳಿವೆ. ಸಂಕಟವನ್ನು ನಿವಾರಿಸಲೆಂದೇ ಪ್ರಾಂತಿಕ ಸರಕಾರಗಳು ಹಿಂಸಾಚಾರವನ್ನು ಪ್ರಚೋದಿಸುತ್ತಿದ್ದ ಕೆಲ ಕಮ್ಯುನಿಸ್ಟ ಮುಖಂಡರನ್ನು ಬಂಧಿಸಿದವಲ್ಲದೆ ಕಮ್ಯುನಿಸ್ಟ ಪಕ್ಷವನ್ನಾಗಲೀ ಅವರ ತತ್ವವನ್ನಾಗಲೀ ಬಹಿಷ್ಕರಿಸಲಿಲ್ಲ.

ಪತ್ರಿಕಾ ಸ್ವಾತಂತ್ರ್ಯ

ದೇಶದಲ್ಲೆಲ್ಲ ಕೊಲೆಸುಲಿಗೆಗಳು ಸಿಕ್ಕಾಬಟ್ಟೆ ಸಾಗಿದಾಗ ಪತ್ರಿಕಾ ಸ್ವಾತಂತ್ರ್ಯ ಕೊಟ್ಟುಬಿಟ್ಟರೆ ಪರಿಣಾಮವೇನು ಆಗಲಿಕ್ಕಿಲ್ಲ? ಹಿಂದುಸ್ಥಾನದ ಪತ್ರಿಕೆಗಳು ಇಂದು ಬಹಳಷ್ಟು ಬದಿಬಾಧವಹಿಸುತ್ತಿವೆ. ಹೊಣೆಗೇಡಿ ಬರಹಗಳೂ ಇವೆ, ಹೊಣೆಯರಿತ ಬರಹಗಳೂ ಇವೆ. ಇತ್ತೀಚೆಗೆ ಪತ್ರಿಕೆಗಳಿಗೆ ಕಂಪನಿಗಳನ್ನು ಟ್ರಸ್ಟುಗಳನ್ನು ರಚಿಸಿಕೊಳ್ಳುವ ಪ್ರವೃತ್ತಿ ಹೆಚ್ಚಿದೆ. ಇದು ನನಗೆ ಸರಿಬಂದಿಲ್ಲ. ಹೀಗೆ ಕಂಪನಿ ಕಟ್ಟಿಕೊಳ್ಳುವದರಿಂದ ಸ್ವತಂತ್ರ ಟೀಕೆಗೆ ಅವಕಾಶ ಸಿಗುವದಿಲ್ಲ. ಅವು ಕೇವಲ ಸುವ್ಯವಸ್ಥಿತವಾಗಿ ಧಂದೆ ನಡೆಸಿಕೊಂಡು ವಿಶಿಷ್ಟ ಹಿತಸಂಬಂಧಗಳ ಮುಖಪತ್ರಗಳಾಗಿ ಬಿಡುತ್ತವೆ. ಹೊಣೆಗಾರ ಪತ್ರಿಕೆಗಳು ಸಂಯಮ ತೋರಿದ್ದರೂ ಹೊಣೆಗೆಟ್ಟ ಪತ್ರಿಕೆಗಳು ಹಾರಿ ... ಅತಿರಂಜಿಸಿ ಪ್ರಕಟಿಸಿವೆ. ಅದರಿಂದ ಸರಕಾರದ ಕಾರ್ಯಕ್ಕೆ ವ್ಯತ್ಯಯ ಬರುತ್ತದೆ. ಇದನ್ನು ಯಾವ ಸರಕಾರ ಸಹಿಸೀತು? ಅದ್ದರಿಂದ ಹೊಣೆಗೆಟ್ಟ ಪತ್ರಿಕೆಗಳಿಗಷ್ಟೇ ನಿರ್ಬಂಧ ಹೇರಲು ಬರುವಂತಿಲ್ಲವಾಗಿ ಪತ್ರಿಕಾ ಸಮಿತಿಯು ದಲನ್ನು ಕೇಳದೆ ಸರಕಾರವು ದಿಲ್ಲಿಯ ಕೆಲವು ಪತ್ರಿಕೆಗಳನ್ನು ನಿರ್ಬಂಧಿಸಬೇಕಾಯ್ತು. ಸುದ್ದಿ ಸಂಗತಿ ಪ್ರಕಟಿಸುವಾಗ ಸಹ ದಕ್ಷತೆ ವಹಿಸಬೇಕಾಗುವದು. ಸರಕಾರದೊಡನೆ ಪತ್ರಿಕೆಗಳು ಸಹಕರಿಸಿ ದೇಶದ ಕಲ್ಯಾಣ ಕಾರ್ಯದಲ್ಲಿ ನೆರವಾಗಬೇಕು.

ಬೆಂಗಳೂರಿನಲ್ಲಿ

ಡಾ॰ ಶ್ಯಾಮಪ್ರಸಾದರ ಭಾಷಣ

“ಆರ್ಥಿಕ ಅಭಿವೃದ್ಧಿಯ ಯೋಜನೆಗಳನ್ನು ಜನಸಾಮಾನ್ಯರ ಜೀವನಮಟ್ಟ ಸುಧಾರಿಸಲು ಕಾರ್ಯರೂಪಕ್ಕೆ ತರದಿದ್ದರೆ ರಾಜಕೀಯ ಸ್ವಾತಂತ್ರ್ಯವು ನಿಷ್ಪ್ರಯೋಜಕವಾಗುವದು” ಎಂದು ಹಿಂದುಸ್ಥಾನದ ಔದ್ಯೋಗಿಕ ಮಂತ್ರಿಗಳಾದ ಡಾ. ಶ್ಯಾಮಪ್ರಸಾದ ಮುಕರ್ಜಿಯವರು ಕಳೆದ ೨೭ ರ ಮಧ್ಯಾಹ್ನ ಬೆಂಗಳೂರಿನಲ್ಲಿ ಪ್ರಾರಂಭವಾದ ತ್ರಿಪಕ್ಷೀಯ ಪರಿಷತ್ತಿನಲ್ಲಿ ಭಾಷಣ ಮಾಡುತ್ತ ಹೇಳಿದರು.

ಭಾಷಣದಲ್ಲಿ ಮಂತ್ರಿಗಳು—ಕೂಲಿಕಾರರೂ ಬಂಡವಾಲಿಗರೂ ಒಮ್ಮತದಿಂದ ದುಡಿಯಬೇಕಾಗಿದೆ. ಕೂಲಿಕಾರರನ್ನು ಕಾರಖಾನೆಯ ಪಾಲುಗಾರರೆಂದು ತಿಳಿಯಬೇಕು. ಔದ್ಯೋಗಿಕ ಸಂಶೋಧನೆಗೆ ಉದ್ದಿಮೆದಾರರ ಪ್ರೋತ್ಸಾಹ ಬೇಕು. ವಿದೇಶೀ ಬಂಡವಾಲ ಬೇಡವೆಂಬ ಸಂಕುಚಿತ ದೃಷ್ಟಿಯನ್ನು ಬಿಡಬೇಕು. ವಿದೇಶೀ ಬಂಡವಾಲಿಗರಿಗೆ ಆರ್ಥಿಕ ಸುಲಿಗೆ ನಡೆಸಲು ಇನ್ನು ಅವಕಾಶ ಕೊಡಲಾರೆವು. ಕೂಲಿಕಾರರೂ ಬಂಡವಾಲಿಗರೂ ಸೇರಿ ದೇಶದ ಆರೋಗ್ಯ-ಧನ-ಜ್ಞಾನ ದಾರಿದ್ರ್ಯಗಳನ್ನು ಓಡಿಸಲು ಸರಕಾರಕ್ಕೆ ನೆರವೀಯಬೇಕು ಎಂದು ಮುಂತಾಗಿ ಹೇಳಿದರು.

ಮೈಸೂರಿನ ದಿವಾನರಾದ ಸರ್. ಎ. ರಾಮಸ್ವಾಮಿ ಮುದಲಿಯಾರರು ಪರಿಷತ್ತಿನ ಪ್ರಾರಂಭದಲ್ಲಿ ಭಾಷಣ ಮಾಡುತ್ತ ಉತ್ಪತ್ತಿ ಹೆಚ್ಚಿಸುವ ಅವಶ್ಯಕತೆಯನ್ನು ಸೂಚಿಸಿ, ಒಕ್ಕಲುತನದೆತ್ತ ಸಾಕಷ್ಟು ಲಕ್ಷ್ಯ ಕೊಡದುದನ್ನು ಸಭಿಕರ ಲಕ್ಷ್ಯಕ್ಕೆ ತಂದು ಈ ವರ್ಷ ಅಂತಾರಾಷ್ಟ್ರೀಯ ಕೂಲಿಕಾರ ಸಂಘವು ಪೌರಸ್ತ್ಯ ದೇಶಗಳಲ್ಲಿಯ ಒಕ್ಕಲುತನದ ಮತ್ತು ಕೂಲಿಕಾರರ ಸ್ಥಿತಿಗತಿಗಳನ್ನು ಅಭ್ಯಸಿಸಿ ವರದಿ ಮಾಡಲು ಒಂದು ಸಮಿತಿಯನ್ನು ನಿಯಮಿಸಿದ್ದನ್ನು ಮುಂದಿಟ್ಟರು.

ಮೈಸೂರು ಸರಕಾರದ ಕೂಲಿಕಾರ ಮಂತ್ರಿಗಳಾದ ಶ್ರೀ ಕೆ. ಟಿ. ಭಾಷ್ಯಂ ಇವರು ಡಾ. ಮುಕರ್ಜಿ ಮತ್ತು ಮೈಸೂರು ದಿವಾನರಿಗೆ ಸ್ವಾಗತ ಬಯಸಿ ಹಿಂದುಸ್ಥಾನ ಸರಕಾರದ ಕೂಲಿಕಾರ ಮಂತ್ರಿಗಳಾದ ಶ್ರೀ ಜಗಜೀವನರಾಮರಿಂದ ಬಂದ ಸಂದೇಶವನ್ನು ಓದಿ ಹೇಳಿದರು.

ಈಶ್ವರ-ಅಲ್ಲಾ ಸಂಘ

ಮಹಾತ್ಮಾ ಗಾಂಧಿ ಅಧ್ಯಕ್ಷರು

ತಾ. ೨೩ ರಂದು ಲಖನೌದಲ್ಲಿ ಈಶ್ವರ ಅಲ್ಲಾ ಸಂಘ ಎಂಬ ಸಂಸ್ಥೆಯೊಂದು ಸ್ಥಾಪಿತವಾಯಿತು. ಮಹಾತ್ಮಾ ಗಾಂಧಿಯವರನ್ನೇ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಜಾತೀಯ ಐಕ್ಯವನ್ನು ಸಾಧಿಸುವದೇ ಇದರ ಗುರಿ. ಹಿಂದು—ಮುಸಲ್ಮಾನರ ಸಂಯುಕ್ತ ಪ್ರಯತ್ನದ ಫಲವಾಗಿ ಈ ಸಂಸ್ಥೆಯು ಅಸ್ತಿತ್ವದಲ್ಲಿ ಬಂದಿದೆಯೆಂದೂ ಮಹಾತ್ಮಾ ಗಾಂಧಿಯವರು ದಿವಂಗತರಾಗಿದ್ದರೂ ಅವರ ಆತ್ಮವು ಅಮರವಾಗಿರುವದರಿಂದ ಅವರನ್ನೇ ಅಧ್ಯಕ್ಷರನ್ನಾಗಿ ಇರಿಸಲಾಗಿದೆಯೆಂದೂ ಸಂಘವು ಮಾರ್ಗದರ್ಶನಕ್ಕೆ ಅವರ ಸೂಕ್ಷ್ಮ ಚೈತನ್ಯವನ್ನು ಆವಾಹಿಸಲಾಗಿದೆಯೆಂದೂ ಸಂಸ್ಥೆಯ ಪುರಸ್ಕರ್ತರೋರ್ವರು ಹೇಳಿದರು.

ಬೆಂಗಳೂರನ್ನು ಪ್ರಥಮ ದರ್ಜೆಯ ಸೈನ್ಯ ಠಾಣೆಯನ್ನಾಗಿ ಬೆಳೆಸುವ ಸಾಧ್ಯಾಸಾಧ್ಯತೆಯನ್ನು ಕುರಿತು ವಿಚಾರಿಸುವದಕ್ಕಾಗಿ ಹಿಂದುಸ್ಥಾನ ಸರಕಾರದ ಸಂರಕ್ಷಣ ಮಂತ್ರಿಗಳಾದ ಸರದಾರ ಬಲದೇವಸಿಂಗರು ಮೇ ೭ ಕ್ಕೆ ಬೆಂಗಳೂರಿಗೆ ಬರತಕ್ಕವರಿದ್ದಾರೆ. ಮೈಸೂರಿನ ಮಂತ್ರಿವರ್ಯ ಶ್ರೀ. ಭಾಷ್ಯಂರು ದಿಲ್ಲಿಗೆ ಮೊನ್ನೆ ಮೊನ್ನೆ ಹೋದಾಗ ಈ ವಿಷಯವನ್ನು ಕುರಿತು ಸರದಾರರೊಡನೆ ಚರ್ಚಿಸಿದ್ದರಂತೆ.

ಇದರಿಂದೇನು ಲಾಭ?

(೮ ನೆಯ ಪುಟದಿಂದ)

ಜಗತ್ತನ್ನು ಆಳುವದೆಂಬವರು ಬುದ್ಧಿಹೀನ ದೃಷ್ಟಿಯಿಂದ ಕೂಡ ಹಿಂಸೆಗೆ ಚಿಕ್ಕಾಸಿನ ಬೆಲೆಯಿಲ್ಲವೆಂಬದನ್ನು ಮರೆತುಬಿಟ್ಟಿದ್ದಾರೆ. ಬ್ರಿಟನ್ನು ೭೦೦೦ ಲಕ್ಷ ಪೌಂಡುಗಳನ್ನು ಯುದ್ಧ ಸನ್ನಾಹಕ್ಕೆ ಖುಂದುವಮಾಡುತ್ತಿದೆ. ವಿಮಾನ ಬಲಕ್ಕೆ ೧೬೦೦ ಲಕ್ಷ ಪೌಂಡು ವೆಚ್ಚವಾಗುತ್ತದೆ, ಸೈನ್ಯಕ್ಕೆ ೩೦೦೦ ಲಕ್ಷ ಹಿಡಿದರೆ ನೌಕಾಪಡೆಯಂತೂ ಬ್ರಿಟನ್ನಿನ ನೋಹದ ಮಗು. ಅದರ ಮೇಲೆ ಎಷ್ಟು ಹಣಸುರಿದರೂ ತೃಪ್ತಿಯಾಗದು ಇಷ್ಟೆಲ್ಲ ಉತ್ಪಾದಕ ಶಕ್ತಿಯನ್ನು ಧ್ವಂಸಕಾರ್ಯಕ್ಕೋಸ್ಕರ ವಿನಿಯೋಗಿಸಲಾಗಿದೆಂದು ಈ ಅಂಕೆ ಸಂಖ್ಯೆಗಳು ತೋರಿಸುವದಿಲ್ಲವೆ? ಇನ್ನು ಅಸಂಖ್ಯ ಜನಹಾನಿಯೇನೂ ಈ ಲೆಕ್ಕದಲ್ಲಿ ಬಂದೇ ಇಲ್ಲ. ರಾಷ್ಟ್ರಗಳು ಬೇಗನೆ ಎಚ್ಚರದಿದ್ದರೆ, ನವು ಇನ್ನೊಮ್ಮೆ ಕುದಿಯುವ ಎಣ್ಣೆಯಲ್ಲಿ ಮುಳುಗುವದು ಖಂಡಿತ— ಈ ಚಾರಿ ಮಾತ್ರ ಅದರಿಂದ ಜೀವಸಹಿತ ಹೊರಗೆ ಬರುವ ಹಾದಿಯಿಲ್ಲ.

ಹಿಂದುಸ್ಥಾನ ಕೂಡ ಈ ಹಿಂಸೆಯ ಸುಳಿಯತ್ತ ಎಳೆಯಲ್ಪಡುತ್ತಿದೆ. ರಾಷ್ಟ್ರೀಯ ಸರಕಾರದ ಕೆಳಗೆ ನಮ್ಮ ಸೈನ್ಯವೆಚ್ಚ ಮೇಲೆ ಮೇಲೆ ಏರುತ್ತಿದೆ. ನಮಗೆ ತೋರುವ ಮಟ್ಟಿಗೆ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ಅಭಿಲಾಷೆಯುಳ್ಳ ಸತ್ವಗಳು ನಮ್ಮನ್ನು ಪಾತಾಳದಲ್ಲಿ ಕೆಡಹುವಂಥ ಔದ್ಯೋಗೀಕರಣದ ಹೂಲಿಯೆಬ್ಬಿಸಿವೆ.

ಈಚೆಗೆ ಪಂ. ಜವಾಹರಲಾಲ ನೆಹರೂ ಅವರು ರೇಖಿಸಿದ “ಔದ್ಯೋಗಿಕ ಧೋರಣ”ವನ್ನು ನೋಡಿದರೆ ಅಂಥ “ಧೋರಣ”ದಲ್ಲಿ ಹುದುಗಿರುವ ಗಂಡಾಂತರಗಳು ಸರಕಾರದ ಮನಸ್ಸಿಗೆ ನಾಟವೆಯೆಂಬ ಆಸೆಯು ಉಳಿಯುವದಿಲ್ಲ. ಸರಕಾರದ ಹೇಳಿಕೆಗಳೂ ಕೃತಿಗಳೂ ದೇಶದ ಆರ್ಥಿಕ ಬೆಳವಣಿಗೆಯ ವಿಷಯಕ್ಕೆ ವಿಚಾರಪೂರ್ಣವಾದ ಧೋರಣೆ ಗೊತ್ತುಮಾಡಲ್ಪಟ್ಟಿಲ್ಲವೆಂದು ತೋರಿಸುತ್ತವೆ. ಸದ್ಯದ ಪರಿಸ್ಥಿತಿಯು ಒತ್ತಾಯವೊಂದೇ ಸಂಕಾರವನ್ನು ಪ್ರೇರೇಪಿಸಿದಂತಿದೆ ತತ್ಕಾಲಕ್ಕೆ ಯಾವ ಪಂಗಡದ ಬಾಯಿ ಬಡಕತನ ಬಹಳವಾಗಿರುವದೊ ಅದಕ್ಕೆ ವಿಶಿಷ್ಟ ವಾಗ್ದಾನ ದೊರಕುತ್ತದೆ. ಇದರಿಂದ ಒಟ್ಟಿನ ಮೇಲೆ ದೇಶಕ್ಕೆ ಏನು ಹಿತಾಹಿತವಾಗಬಹುದೆಂದು ಗಮನಿಸುವವರಿಲ್ಲ. ಪ್ರವಾಹ ಸೆಳೆದತ್ತ ತೇಲುತ ಈ ಕಾರ್ಯಕ್ರಮದಿಂದ ಪ್ರಯೋಜನವಿಲ್ಲ. ನಮಗೆ ಬೇಕಾಗಿರುವದೆಂದರೆ, ದೇಶದ ಭವಿತವ್ಯವನ್ನು ಚಿತ್ರಿಸಿಕೊಂಡು ಅದಕ್ಕೆ ತಕ್ಕ ಉಪಾಯಗಳನ್ನು ಸೂಚಿಸುವದು. ಉಳಿದೆಲ್ಲ ವಿಚಾರಗಳು ಈ ಮುಖ್ಯ ಉದ್ದೇಶದಮುಂದೆ ಗೌಣವಾಗಿರತಕ್ಕದ್ದು ಅಂಥ ಧ್ಯೇಯವೊಂದಿದ್ದರೆ, ಅದು ನಮ್ಮದೇಶಕ್ಕೆ ಶಾಂತಿ ಸಮಾಧಾನಗಳನ್ನು ತಂದುಕೊಡಬಲ್ಲ ಧೋರಣವನ್ನು ಸಿದ್ಧಗೊಳಿಸಬಹುದಿಷ್ಟೆ ಅಲ್ಲ, ಶಂಕಾಭೀತಿಗಳಿಂದ ವಿಕೃತವಾದ ಈ ಜಗತ್ತಿಗೆ ಆಶಾಜ್ಯೋತಿಯನ್ನೂ ತೋರಬಲ್ಲದು.

—ಜೆ. ಸಿ. ಕುಮಾರಪ್ಪ

ರಾಷ್ಟ್ರೀಯ ಸರಕಾರದ ಔದ್ಯಮಿಕ ಧೋರಣ

(೯ ನೆಯ ಪುಟದಿಂದ)

ಹೀಗೆ ಮಾಡಬಹುದಾದ ಮದ್ದು. ಅದೆಂದರೆ ಮೂಲಭೂತ ಉದ್ಯಮಗಳ ಮತ್ತು ಸಾರ್ವಜನಿಕ ಪ್ರಯೋಜನಸಂಸ್ಥೆಗಳ ರಾಷ್ಟ್ರೀಕರಣ ಮಾಡುವುದು, ಅಲ್ಲದೆ, ಬಳಕೆಯ ಸಾಮಾನುಗಳನ್ನು ತಯಾರಿಸುವ ಉದ್ಯಮಗಳೆಲ್ಲವುಗಳನ್ನೂ ಧೈರ್ಯದಿಂದ ವಿಕೇಂದ್ರೀಕರಿಸುವುದು. ಬದಲಾವಣೆ ಯೇನೋ ನಿಧಾನವಾಗಿ ಆಗಬೇಕಾಗಿದೆ. ಆದರೆ ನಿಧಾನವಾಗಿ ಆಗಲಿ ಎಂದೊಡನೆ ಅದನ್ನೆ ಹಿಡಿದುಕೊಂಡು ವರ್ತಮಾನ ಪರಿಸ್ಥಿತಿಯನ್ನು ಅದಷ್ಟು ಕಾಲ ಹಾಗೇ ಇಡುವದು ಒಳ್ಳೆಯದಲ್ಲ.

ಆದುದರಿಂದ ಎಷ್ಟೇ ಪ್ರಯತ್ನಿಸಿದರೂ ಬಹಳ ಕಾಲದಿಂದ ನಿರೀಕ್ಷಿಸಿದ ರಾಷ್ಟ್ರೀಯ ಸರಕಾರದ ಔದ್ಯಮಿಕ ಧೋರಣವು ನಮ್ಮಲ್ಲಿ ಹುರುಪನ್ನು ಉಂಟುಮಾಡಲಿಲ್ಲವೆಂದು ವ್ಯಸನದಿಂದ ಹೇಳಬೇಕಾಗಿದೆ; ಅದು ನಮ್ಮನ್ನು ತಣ್ಣೀರಲ್ಲಿ ತೂರಿದೆ.

ವರ್ಧಾ, ೧೫-೪-೪೮ ಎಸ್. ಎನ್. ಅಗರವಾಲ

[ಸ್ಪಷ್ಟವಾಗಿ ಹೇಳುವದಾದರೆ, ಸರಕಾರೀ ನೀಲಪತ್ರ (Blue Print)ವನ್ನು ಮನಸ್ಸಿಟ್ಟು ಅಭ್ಯಸಿಸಲು ನನಗಿನ್ನೂ ಸಾಧ್ಯವಾಗಿಲ್ಲ. ಆದುದರಿಂದ ಪ್ರಿನ್ಸಿಪಾಲ ಅಗರವಾಲರ ಟೀಕೆಗೆ ಸಮ್ಮತಿಯನ್ನಾಗಲಿ ಅಸಮ್ಮತಿಯನ್ನಾಗಲಿ ನಾನು ಹೇಳಹೋಗುವದಿಲ್ಲ. —ಕೆ. ಜಿ. ಮಶ್ರೂವಾಲಾ]



ಮುಂಬಯಿಯಲ್ಲಿ ಕಳೆದವಾರ ಪಂ. ಜವಾಹರರಿಗೆ ಕಾರ್ಪೊರೇಶನ್ನಿನವರು ಮಾನಪತ್ರ ಅರ್ಪಿಸಿದರು. ಮೇಯರ ಮಸ್ಕರೆನ್ಹಸರು ಮಾನಪತ್ರ ಅರ್ಪಿಸುತ್ತಿದ್ದಾರೆ. ಮುಖ್ಯ ಮಂತ್ರಿಗಳನ್ನು ಹಿಂಗಡೆ ಕಾಣಬಹುದು



ಉದ್ಯಮ ಮಂತ್ರಿ ಡಾ. ಶ್ಯಾಮಪ್ರಸಾದರು ಮದ್ರಾಸಿನಲ್ಲಿ ತಾ. ೨೪ಕ್ಕೆ ಕೇಂದ್ರ ಚರ್ಮ ಸಂಶೋಧನ ಸಂಸ್ಥೆಯ ಅಡಿಗಲ್ಲನ್ನು ಹಾಕಿದ್ದು.

ಹವಾನಾ ಪರಿಷತ್ತಿನ ಫಲಶ್ರುತಿ

(ಅರ್ಥಶಾಸ್ತ್ರದ ಅಭ್ಯಾಸ)

❋ ಭಯ ಸಂಶಯಗಳ ಆವರಣ
❋ ಉದ್ದೇಶ ಭಂಗದ ಭೀತಿ
❋ ಹೊರಲಾಗದ ಸಂರಕ್ಷಕರ ಮತ್ತು ತಾರತಮ್ಯದಕರ

ಈಗ ನಾಲ್ಕು ತಿಂಗಳಿಂದಲೂ ನಡೆಯುತ್ತಿದ್ದ ಸಂಯುಕ್ತ ರಾಷ್ಟ್ರಗಳ ವ್ಯಾಪಾರ ಮತ್ತು ಉದ್ಯೋಗಗಳ ನೌಕರಿ ಪರಿಷತ್ತು (ಕೆಲವು)ದಿನಗಳ ಹಿಂದೆ ಮುಕ್ತಾಯವಾಯಿತು. ಪ್ರಪಂಚದ ೫೩ ಮುಖ್ಯ ರಾಷ್ಟ್ರಗಳು ಈ ಪರಿಷತ್ತಿನಲ್ಲಿ ಭಾಗ ವಹಿಸಿದ್ದವು. ಇದೇ ತರಹದ ಪರಿಷತ್ತೊಂದು ಕಳೆದ ವರ್ಷ ಜಿನಿವಾ ನಗರದಲ್ಲಿ ಸೇರಿದ್ದು ಅದಕ್ಕೆ ಕೇವಲ ೨೩ರಾಷ್ಟ್ರಗಳು ಮಾತ್ರ ತಮ್ಮ ಪ್ರತಿನಿಧಿಗಳನ್ನು ಕಳಿಸಿದ್ದವು. ಈ ಎರಡು ಪರಿಷತ್ತುಗಳ ಮುಖ್ಯ ಉದ್ದೇಶವು ಒಂದೇ.

ಸಂರಕ್ಷಕ ಸುಂಕ

ಪ್ರಪಂಚದ ಮೊದಲನೇ ಮಹಾಯುದ್ಧದ ನಂತರ ಎಲ್ಲ ದೇಶಗಳು ತಮ್ಮ ತಮ್ಮ ರಾಷ್ಟ್ರೀಯ ಆರ್ಥಿಕ ಹಿತದೃಷ್ಟಿಗೆ ಅನುಕೂಲಿಸುವಂತೆ ದೇಶದ ಆಮದು, ರಫ್ತು ವ್ಯಾಪಾರವನ್ನು ಹೆಚ್ಚು ಹೆಚ್ಚು ನಿರ್ಬಂಧಗೊಳಿಸಿದವು. ಪರದೇಶಗಳಿಂದ ದೇಶದೊಳಗೆ ಬರುವ ಸಾಮಾನುಗಳು ಎತ್ತರವಾದ ಸುಂಕದ ಗೋಡೆಗಳನ್ನು ಏರಿ ಬರಬೇಕಾಯಿತು. ರಾಷ್ಟ್ರೀಯ ಔದ್ಯೋಗಿಕ ಉನ್ನತಿಗೆ ಸಂರಕ್ಷಕ ಸುಂಕಗಳು (ಪ್ರೊಟೆಕ್ಟಿವ್ಹ ಟ್ಯಾರಿಫ) ಅಗತ್ಯವೆಂದು ಎಲ್ಲ ರಾಷ್ಟ್ರಗಳು ಗಣಿಸುತ್ತ ಬಂದವು. ೧೯ನೇ ಶತಮಾನದಲ್ಲಿ ಇದ್ದ ಜಾಗತಿಕ ಸ್ವತಂತ್ರ ವ್ಯಾಪಾರವು ಕೇವಲ ಶಾಸ್ತ್ರಜ್ಞರ ಪುಸ್ತಕಗಳಲ್ಲಿ ಮಾತ್ರ ಉಳಿಯಿತು. ಅಮೇರಿಕಾ, ಜರ್ಮನಿ, ಫ್ರಾನ್ಸ ಮತ್ತು ರಶಿಯಾ ದೇಶಗಳು ಸಂರಕ್ಷಕ ಕರಗಳ ಆಶ್ರಯದಲ್ಲಿ ತಮ್ಮ ದೇಶದ ಅಭಿವೃದ್ಧಿಯನ್ನು ಸಾಧಿಸಿದವು. ಮೊದಲಿನಿಂದಲೂ ಯಾವ ಕರಗಳ ತಡೆಯೂ ಇಲ್ಲದೆ ಸ್ವತಂತ್ರ ಅಂತರ್‌ರಾಷ್ಟ್ರೀಯ ವ್ಯಾಪಾರದ ಧೋರಣವನ್ನು ಪಾಲಿಸುತ್ತ ಬಂದಿದ್ದ ಗ್ರೇಟ ಬ್ರಿಟನ್ ಸಹ ಕಾಲಚಕ್ರಕ್ಕೆ ತಕ್ಕಂತೆ ತಾನೂ ಸಂರಕ್ಷಕ ಸುಂಕಗಳನ್ನು ಹಾಕಬೇಕಾಯಿತು. ಆದ್ದರಿಂದ ೧೯ನೇ ಶತಮಾನದ ಮಾದರಿಯ ಸ್ವತಂತ್ರ ಅಂತರರಾಷ್ಟ್ರೀಯ ವ್ಯಾಪಾರವು ಮಾಯವಾಯಿತು. ಇದರಿಂದ ಪರದೇಶದ ವ್ಯಾಪಾರದ ಗಾತ್ರ ಸಂಕುಚಿತವಾಗುತ್ತ ಹೋಗಿ ಪ್ರಪಂಚದ ಔದ್ಯೋಗಿಕ ಉತ್ಪತ್ತಿ ಕಡಿಮೆಯಾಯಿತು.

ಈ ಸುಂಕ ಕಿತ್ತು ಕೆಲಸ ಒದಗಿಸುವದೇ ದಾರಿ

ಇದರಿಂದ ಎಲ್ಲರಿಗೂ ಕೆಲಸ ಒದಗಿಸಲು ಸಾಧ್ಯವಾಗಲಿಲ್ಲ. ಈ ತರಹದ ಹಾನಿಕಾರಕವಾದ ಸಂರಕ್ಷಕ ಕರಗಳನ್ನು ಕಿತ್ತೊಗೆದು ಸ್ವತಂತ್ರ ಅಂತರ್‌ರಾಷ್ಟ್ರೀಯ ವ್ಯಾಪಾರವನ್ನು ಸ್ಥಾಪಿಸುವದರ ಮೂಲಕ ಜಾಗತಿಕ ಔದ್ಯೋಗಿಕ ಉತ್ಪತ್ತಿಯನ್ನು ಹೆಚ್ಚಿಸುವದು ಮತ್ತು ಎಲ್ಲರಿಗೂ ಕೆಲಸವನ್ನು ಒದಗಿಸುವದು—ಇವೇ ಈ ಎರಡು ಪರಿಷತ್ತುಗಳ ಉದ್ದೇಶವಾಗಿದ್ದವು. ಹವಾನಾ ಪರಿಷತ್ತಿನಲ್ಲಿ ಭಾಗವಹಿಸಿದ್ದ ೫೩ ರಾಷ್ಟ್ರಗಳೂ ಒಂದು ಅಂತರ್‌ರಾಷ್ಟ್ರೀಯ ವ್ಯಾಪಾರದ ಒಪ್ಪಂದದ ಕರಡಿಗೆ ಸಹಿ ಹಾಕಿವೆ. ಆಯಾ ದೇಶಗಳ ಶಾಸನ ಸಭೆಗಳ ಮಂಜೂರಾತಿಯಾದ ನಂತರ ಈ ಒಪ್ಪಂದದ ಹೆಜ್ಜೆಯಲ್ಲಿಯೇ ಮುಂದಿನ ಪ್ರಪಂಚದ ವ್ಯಾಪಾರ ನಡೆಯಬೇಕಾಗಿದೆ. ಇದರಿಂದ ಜಗತ್ತಿನ ಒಟ್ಟು ಮುಕ್ಕಾಲು ಪಾಲಿನಷ್ಟು ವ್ಯಾಪಾರವು ಸ್ವತಂತ್ರಗೊಳಿಸಲ್ಪಡುವುದೆಂದು ನಂಬಲಾಗಿದೆ.

ಭಯ..ಸಂಶಯಗಳ ಆವರಣದಲ್ಲಿ

ಹವಾನಾ ಪರಿಷತ್ತು ಕ್ಯೂಬಾ ದೇಶದ ಸುಪ್ರಸಿದ್ಧ ರಾಜಧಾನಿಯಾದ ಹವಾನಾದಲ್ಲಿ ಸೇರಿತ್ತು. ಪರಿಷತ್ತಿಗೆ ಬಂದಿದ್ದ ೫೩ ರಾಷ್ಟ್ರಗಳ ಪ್ರತಿನಿಧಿಗಳಲ್ಲಿ ಮುಕ್ಕಾಲು ಪಾಲು ಪ್ರತಿನಿಧಿಗಳು ಭಯಗ್ರಸ್ತರಾಗಿದ್ದರು. ಕೆಲವರು ನಿರಾಶೆಗೊಂಡಿದ್ದರು. ಹಿಂದುಳಿದ ರಾಷ್ಟ್ರಗಳ ಪ್ರತಿನಿಧಿಗಳು ಮುಂದುವರಿದ ರಾಷ್ಟ್ರಗಳ ಮೇಲೆ ತಮ್ಮ ಸಂಶಯವನ್ನು ವ್ಯಕ್ತಮಾಡಿದರು. ಇಷ್ಟೇ ಅಲ್ಲದೆ ಪರಿಷತ್ತು ಸೇರಿದ ವಾತಾವರಣ ಎಲ್ಲವೂ ಅನಿಶ್ಚಿತ ಸ್ಥಿತಿಯಲ್ಲಿದ್ದದ್ದು. ದಿನೇ ದಿನೇ ಹೆಚ್ಚುತ್ತ ನಡೆದಿರುವ ಅಮೇರಿಕ-ರಶಿಯಾಗಳ ವೈಮನಸ್ಸು, ಮಾರ್ಶಲ್ ಸಹಾಯ ಪದ್ಧತಿಯಿಂದ ಸಹಾಯ ಪಡೆಯಬೇಕೆಂದಿದ್ದ ಯುರೋಪದ ರಾಷ್ಟ್ರಗಳು ತಮ್ಮ ಆರ್ಥಿಕ ಸ್ವಾತಂತ್ರ್ಯವನ್ನು ಕಳೆದುಕೊಂಡೇವೆಂಬ ಸಂಶಯ ಮತ್ತು ಇಂಗ್ಲಂಡಿನ ಹೊಂದಿನ ಪ್ರದೇಶಗಳಲ್ಲಿ ಬ್ರಿಟಿಷ್ ವಸಾಹತು ದೇಶಗಳು ತಮ್ಮದೇ ಒಂದು ವ್ಯಾಪಾರದ ಬಣವನ್ನು ಕಟ್ಟಿಕೊಂಡಿದ್ದು, ಈ ಅಂಶಗಳೆಲ್ಲವೂ ಮುಂಬರುವ ಅಂತರ್‌ರಾಷ್ಟ್ರೀಯ ವ್ಯಾಪಾರದ ಒಪ್ಪಂದದ ಸಫಲತೆಗೆ ಸಂಶಯವನ್ನು ತಂದೊಡ್ಡಿದ್ದವು. ಹಿಂದುಳಿದ ರಾಷ್ಟ್ರಗಳ ಪ್ರತಿನಿಧಿಗಳು ಮುಂದುವರಿದ ರಾಷ್ಟ್ರಗಳ ಬಣಗಳಿಂದ ತಮ್ಮ ತಮ್ಮ ದೇಶಗಳು ಹಿಂದೆಯೇ ಬಿದ್ದಿವೆಎಂದೂ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಮುಂದುವರಿದ ದೇಶಗಳು ಸಹಾಯ ಮಾಡುವುದು ಅಗತ್ಯವೆಂದೂ ಅಭಿಪ್ರಾಯಪಟ್ಟರು. ಮುಂದುವರಿದ ರಾಷ್ಟ್ರಗಳಾದರೋ, ಹಿಂದುಳಿದ ರಾಷ್ಟ್ರಗಳು ತಮ್ಮ ಸಂರಕ್ಷಕ ಕರಗಳ ಭಾರವನ್ನು ತಗ್ಗಿಸಬೇಕೆಂದೂ ಇದರಿಂದ ಸ್ವತಂತ್ರ ವ್ಯಾಪಾರಕ್ಕೆ ಧಕ್ಕೆ ಬಂದಿದೆಯೆಂದೂ ವಾದಿಸಿದರು.

ಮುಖ್ಯ ಮಸೂದೆಗಳು

ಹವಾನಾ ಪರಿಷತ್ತಿನ ಮುಂದೆ ಒಟ್ಟು ಆರು ಮುಖ್ಯ ವಿಷಯಗಳು ಬಂದವು. ಪರಿಷತ್ತಿನವರು ತಯಾರಿಸಿದ ವ್ಯಾಪಾರದ ಒಪ್ಪಂದದ ಕರಡಿನ ಮೇಲೆ ಒಟ್ಟು ಎಂಟು ನೂರು ತಿದ್ದುಪಡೆಗಳು ಸೂಚಿಸಲ್ಪಟ್ಟವು. ಈ ತಿದ್ದುಪಡೆಗಳ ಸಂಖ್ಯೆಯನ್ನು ಕಡಿಮೆ ಮಾಡಿ, ಅಗತ್ಯವೆನಿಸಿದ ತಿದ್ದುಪಡೆಯನ್ನು ಮಾತ್ರ ಪರ್ಯಾಲೋಚಿಸುವುದೂ ಪರಿಷತ್ತಿಗೆ ಒಂದು ದೊಡ್ಡ ಕಷ್ಟವಾಗಿ ಪರಿಣಮಿಸಿತು.

ಪರಿಷತ್ತಿನಲ್ಲಿ ಚರ್ಚಿಸಲು ಬಂದ ಆರು ಮುಖ್ಯ ವಿಷಯಗಳಲ್ಲಿ ಮೊದಲನೆಯದು ಹಿಂದುಳಿದ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ್ದು. ಸದ್ಯಕ್ಕೆ ಅಮೇರಿಕದಿಂದ ಮುಖ್ಯ ಯಂತ್ರ ಸಾಮುಗ್ರಿ ಮತ್ತು ಅವಶ್ಯ ಬೇಕಾಗುವ ಕಚ್ಚಾ ವಸ್ತುಗಳು ಕೇವಲ ಯುರೋಪ ರಾಷ್ಟ್ರಗಳಿಗೆ ಮಾತ್ರ ಹೋಗುತ್ತಿರುವುದು ಅನ್ಯಾಯವೆಂದೂ ಹಿಂದುಳಿದ ರಾಷ್ಟ್ರಗಳಾದ ಏಶಿಯ ಮತ್ತು ಲಾಟಿನ್ ಅಮೇರಿಕಗಳೂ ಈ ಪದಾರ್ಥಗಳನ್ನು ಅಮೇರಿಕದಿಂದ ಪಡೆಯಬೇಕೆಂದೂ ಸೂಚಿಸಿತು ಮುಂದುವರಿದ ದೇಶಗಳೂ ಹಿಂದುಳಿದ ದೇಶಗಳೊಡನೆ ಇರುವ ತಮ್ಮ ಜವಾಬ್ದಾರಿಯನ್ನು ಒಪ್ಪಿದವು. ಯುರೋಪಕ್ಕೆ ಸದ್ಯ ಒದಗಿಸುತ್ತಿರುವ ಮಾರ್ಶಲ್ ಸಹಾಯವನ್ನು ಏಶಿಯ ಮತ್ತು ಲ್ಯಾಟಿನ್ ಅಮೇರಿಕ ದೇಶಗಳಿಗೂ ಒದಗಿಸಬೇಕೆಂದೂ ಮೆಕ್ಸಿಕೋದ ಪ್ರತಿನಿಧಿಗಳು ತಿಳಿಸಿದರು. ಇದಕ್ಕೆ ಅಂತರ್‌ರಾಷ್ಟ್ರೀಯ ವ್ಯಾಪಾರ ಸಂಸ್ಥೆಯಪರವಾಗಿ ಒಂದು ಸಮಿತಿಯನ್ನು ನೇಮಿಸಬೇಕೆಂದೂ ಅವರು ಹಿಂದುಳಿದ ದೇಶಗಳ ಅಭಿವೃದ್ಧಿಯನ್ನು ಸಾಧಿಸಬೇಕೆಂದೂ ಗೊತ್ತಾಯಿತು.

ಪರದೇಶದ ಬಂಡವಾಳ

ಪರಿಷತ್ತಿನ ಮುಂದೆ ಬಂದ ಎರಡನೇ ಮುಖ್ಯ ವಿಷಯ ಹಿಂದುಳಿದ ದೇಶಗಳಲ್ಲಿದ್ದ ಪರದೇಶದ ಬಂಡವಾಳಕ್ಕೆ ಸಂಬಂಧಿಸಿದ್ದು. ಹಿಂದುಸ್ತಾನದ ಪ್ರತಿನಿಧಿಗಳು ಸದ್ಯಕ್ಕಿರುವ ಪರದೇಶದ ಬಂಡವಾಳ ಮತ್ತು ಮುಂದೆ ಪರದೇಶದ ಬಂಡವಾಳದಿಂದ ಅಭಿವೃದ್ಧಿಗೊಳಿಸಹುದಾದ ಕೈಗಾರಿಕೆಗಳ ಮೇಲೆ ಆಯಾ ರಾಷ್ಟ್ರವು ಒಪ್ಪಬಹುದಾದ ಶಾಸನಗಳನ್ನು ವಿಧಿಸುವುದು ಅಥವಾ ಸಮಯ ಬಿದ್ದರೆ ಅಂತಹ ಪರದೇಶೀ ಕೈಗಾರಿಕೆಗಳನ್ನು ರಾಷ್ಟ್ರೀಕರಿಸುವುದು, ಇವೇ ಕೆಲವು ವಿಷಯಗಳನ್ನು ಮುಂದಿಸಿದರು ಅಂತರ್‌ರಾಷ್ಟ್ರೀಯ ಬಂಡವಾಳದ ಅವಶ್ಯಕತೆಯು ಎಲ್ಲ ರಾಷ್ಟ್ರಗಳಿಂದಲೂ ಒಪ್ಪಲ್ಪಟ್ಟಿತು. ಆದರೆ ಅಂತಹ ಬಂಡವಾಳಕ್ಕೆ ತಕ್ಕ ಆಶ್ರಯವೂ ಅಗತ್ಯವೆಂದು ಗಣಿಸಲ್ಪಟ್ಟಿತು. ಈ ವಿಷಯಗಳನ್ನೊಳಗೊಂಡ ಸಮಂಜಸವಾದ ಒಪ್ಪಂದವನ್ನು ಅಮೇರಿಕೆಯು ಬಗೆಹರಿಸುವುದೆಂದು ನಂಬಲಾಗಿದೆ.

ಆಯಾತ ನಿರ್ಯಾತ ನಿಯಂತ್ರಣ

ಪರಿಷತ್ತಿನಲ್ಲಿ ಅತಿ ಮುಖ್ಯವಾಗಿ ಚರ್ಚಿಸಲ್ಪಟ್ಟ ವಿಷಯವೆಂದರೆ ಆಯಾ ದೇಶವು ತನ್ನ ಆಯಾತ ನಿರ್ಯಾತಗಳನ್ನು ದೇಶದ ಉದ್ದಿಮೆಗಳ ರಕ್ಷಣೆಯ ದೃಷ್ಟಿಯಿಂದ ನಿರ್ಬಂಧಗೊಳಿಸುತ್ತಿರುವುದು. ಇಂತಿಂತಹ ಸಾಮಾನುಗಳನ್ನು ಪರದೇಶದಿಂದ ಇಷ್ಟೇ ತರಿಸಬೇಕೆಂದೂ ಪರದೇಶಗಳಿಗೆ ಕಳಿಸುತ್ತಿರುವ ಸಾಮಾನುಗಳು ಇಷ್ಟೇ ಮತ್ತು ಇಂತಿಂತಹವೇ ಇರಬೇಕೆಂದೂ ನಿರ್ಬಂಧಿಸುತ್ತಿರುವುದೇ ಪ್ರಪಂಚದ ವ್ಯಾಪಾರ ಸದ್ಯಕ್ಕೆ ಕುಗ್ಗುತ್ತಿರುವುದಕ್ಕೆ ಕಾರಣ. ಆದ್ದರಿಂದ ಅಂತರ್‌ರಾಷ್ಟ್ರೀಯ ವ್ಯಾಪಾರ ಸಂಸ್ಥೆಯವರು ಈ ತರಹದ ನಿರ್ಬಂಧವನ್ನು ಬಹುಕಡಿಮೆ ಮಾಡಬೇಕೆಂದಿದ್ದಾರೆ. ಸಾಧಾರಣವಾಗಿ ಈ ತರಹದ ಆಯಾತ ನಿರ್ಯಾತಗಳ ಮೇಲೆ ನಿರ್ಬಂಧಗಳನ್ನು ಹಿಂದುಳಿದ ದೇಶಗಳು ಹಾಕುತ್ತಿರುವವು. ಅವು ತಮ್ಮ ಬೆಳವಣಿಗೆಯ ದೃಷ್ಟಿಯಿಂದ ಹೀಗೆ ಮಾಡಲೇಬೇಕಾಗಿದೆ. ಮುಂದುವರಿದ ದೇಶಗಳು ಇದಕ್ಕೆ ಸಾಮಾನ್ಯವಾಗಿ ವಿರೋಧವಾಗಿಯೇ ಇದ್ದಾರೆ. ಏಕೆಂದರೆ ಅವರು ಆದಷ್ಟು ಹೆಚ್ಚು ತಮ್ಮ ತಯಾರಾದ ಸಾಮಾನನ್ನು ಕಳಿಸಲು ಪ್ರಯತ್ನಿಸತಕ್ಕವರೇ. ಈ ತರಹದ ಅಡೆತಡೆಗಳನ್ನೂ ಕಿತ್ತೊಗೆಯಬೇಕೆಂದು ಅಮೇರಿಕವು ಅಭಿಪ್ರಾಯಪಡುತ್ತದೆ.

೧೯೩೦ ರಲ್ಲಿ ಸಂಭವಿಸಿದ ಪ್ರಪಂಚದ ಮಹಾ ಮುಗ್ಗಟ್ಟು ಎಲ್ಲ ದೇಶಗಳೂ ಈ ತರಹದ ನಿರ್ಬಂಧಗಳನ್ನು ಹೇರಿದ್ದರಿಂದಲೇ ಒದಗಿದುದು ಎಂದು ಅವರ ಅಭಿಪ್ರಾಯ. ಆದರೆ ತಕ್ಕಮಟ್ಟಿಗಾದರೂ ತಮ್ಮ ಆಯಾತ ನಿರ್ಯಾತಗಳ ಮೇಲೆ ನಿರ್ಬಂಧವನ್ನು ತಾವು ಆರ್ಥಿಕ ದೃಷ್ಟಿಯಿಂದ ತುಸು ಮುಂದುವರೆಯುವವರೆಗಾದರೂ ಇರಿಸಬೇಕೆಂದು ಹಿಂದುಸ್ತಾನ ಮತ್ತು ಲ್ಯಾಟಿನ್ ಅಮೇರಿಕದ ಪ್ರತಿನಿಧಿಗಳು ವಾದಿಸಿದ್ದಾರೆ. ಆದರೆ ರಶಿಯದೇಶದಂತೆ ಆಯಾತ ನಿರ್ಯಾತಗಳನ್ನು ಸರಕಾರದವರೇ ತಮ್ಮ ಯೋಜನೆಗನುಸಾರವಾಗಿ ನಿರ್ಬಂಧಗೊಳಿಸುವದು ದೇಶವನ್ನು ಸಮಾಜವಾದಿತ್ವಕ್ಕೊಳಪಡಿಸುವದೇ ಎಂದು ಅವರ ಮತ. ಆದ್ದರಿಂದ ಅಂತರ್‌ರಾಷ್ಟ್ರೀಯ ವ್ಯಾಪಾರ ಸಂಸ್ಥೆ (I. T. O.)ಯವರ ಮೇಲ್ವಿಚಾರಣೆಗೊಳಪಟ್ಟು ತುಸುಮಟ್ಟಿಗೆ ಆಯಾತ ನಿರ್ಯಾತಗಳನ್ನು ಅವರ ಅಪ್ಪಣೆಯ ಮೇರೆಗೆ ನಿರ್ಬಂಧಗೊಳಿಸುವದು ಹಿಂದುಳಿದ ದೇಶಗಳಿಗೆ ಸಾಧ್ಯವಾಗಿದೆ.

ಆಡಳಿತ ವರ್ಗದ ಆಯ್ಕೆ

ಈ ಸಂದರ್ಭದಲ್ಲಿ ಅಂತರ್‌ರಾಷ್ಟ್ರೀಯ ಆಡಳಿತ ವರ್ಗವು ಹೇಗಿರಬೇಕೆಂಬ ಪ್ರಶ್ನೆಯೂ ಏಳುತ್ತದೆ. ಒಂದೊಂದು ರಾಷ್ಟ್ರಕ್ಕೆ ಒಂದೊಂದು ಮತದಂತೆ ಲೆಕ್ಕಾಚಾರ ಮಾಡಿ ಅವರು ಆರಿಸುವ ಆಡಳಿತ ವರ್ಗವು ಅಂತರ ರಾಷ್ಟ್ರೀಯ ವ್ಯಾಪಾರ ಸಂಸ್ಥೆಯ ಕಾರ್ಯಕಲಾಪಗಳನ್ನೂ ನೋಡಿಕೊಂಡರೆ ಹಿಂದುಳಿದ ರಾಷ್ಟ್ರಗಳಿಗೆ ಅನ್ಯಾಯವಾಗುವ ಭಯವಿಲ್ಲ. ಇದನ್ನು ಬಿಟ್ಟು ರಾಜಕೀಯ ದೃಷ್ಟಿಯಿಂದ ಹೆಚ್ಚು ಪ್ರಾಮುಖ್ಯತೆಯನ್ನು ಅಮೇರಿಕದಂತಹ ದೇಶಗಳಿಗೆ ಕೊಟ್ಟು ಅವರು ಕೊಡುವ ಮತಗಳನ್ನೂ ಹೆಚ್ಚಿಸಿದರೆ ಸಂಸ್ಥೆಯ ಆಡಳಿತ ವರ್ಗವು ಮುಂದುವರಿದ ದೇಶಗಳ ಪ್ರತಿನಿಧಿಗಳಿಂದಲೇ ತುಂಬಲ್ಪಟ್ಟು ಹಿಂದುಳಿದ ದೇಶಗಳಿಗೆ ನ್ಯಾಯಸಿಗದಂತಾಗಬಹುದು ಆದ್ದರಿಂದ ಒಂದು ರಾಷ್ಟ್ರಕ್ಕೆ ಒಂದೇ ಮತದಂತೆ ತಾರತಮ್ಯವಿಲ್ಲದೆ ಆಡಳಿತ ವರ್ಗವನ್ನು ಆರಿಸುವದು ಸಮಂಜಸವಾಗಿದೆ. ಈ ವಿಷಯವೂ ಹವಾನಾದಲ್ಲಿ ಚರ್ಚಿಸಲ್ಪಟ್ಟಿದೆ.

ತಾರತಮ್ಯದ ಕರಗಳು

ಕೊನೆಯದಾಗಿ ನಮಗೆ ಬೇಕಾದ ದೇಶಗಳಿಂದ ತರಿಸಿಕೊಳ್ಳುವ ಸಾಮಾನಿನ ಮೇಲೆ ಕಡಿಮೆ ಸುಂಕ ಹಾಕಿ ಇನ್ನಿತರ ದೇಶಗಳಿಂದ ತರಿಸಿಕೊಳ್ಳುವ ಸಾಮಾನಿನ ಮೇಲೆ ಅದಕ್ಕಿಂತ ಹೆಚ್ಚು ಸುಂಕ ಹಾಕುವ ಪದ್ಧತಿಯಾದ ತಾರತಮ್ಯ ಕರಗಳ (ಪ್ರಿಫರೆನ್ಸಿಯಲ್ ಟ್ಯಾರಿಫ್) ಮೇಲೆಯೂ ಹವಾನಾ ಪರಿಷತ್ತಿನಲ್ಲಿ ಬಿಸಿ ಬಿಸಿ ಚರ್ಚೆಯಾಯಿತು. ಈಗಿರುವ ಬ್ರಿಟಿಷ ಕಾಮನ್‌ವೆಲ್ಥ ದೇಶಗಳಲ್ಲಿ ಈ ತರಹದ ತಾರತಮ್ಯ ಕರಗಳ ಪದ್ಧತಿ ಇದೆ. ಲ್ಯಾಟಿನ್ ಅಮೇರಿಕವೂ ಈ ತರಹದ ಕರಗಳಲ್ಲಿ ಒಪ್ಪಂದವನ್ನು ಅಮೇರಿಕದೊಡನೆ ಮಾಡಿಕೊಂಡಿದೆ. ಇಂತಹ ಒಪ್ಪಂದಗಳನ್ನು ಅರಬ ರಾಷ್ಟ್ರಗಳು ಬಹುವಾಗಿ ಟೀಕಿಸಿವೆ ಅಂತರ್‌ರಾಷ್ಟ್ರೀಯ ವ್ಯಾಪಾರ ಸಂಸ್ಥೆಯು ಈ ತರಹ ತಾರತಮ್ಯ ಕರಗಳನ್ನು ಸ್ವಲ್ಪ ಮಟ್ಟಿಗೆ ಮನ್ನಿಸುವುದಾದರೂ ವಿಶೇಷತಃ ಇದಕ್ಕೆ ಪ್ರಾಮುಖ್ಯತೆ ಕೊಡುವಂತಿಲ್ಲ. ಏಕೆಂದರೆ ರಾಜಕೀಯ ಬಣಗಳನ್ನು ಕಟ್ಟಿಕೊಂಡಂತೆಯೇ ಈ ತರಹದ ಆರ್ಥಿಕ ಬಣಗಳನ್ನೂ ಕಟ್ಟಿಕೊಂಡು ಪ್ರಪಂಚದ ವ್ಯಾಪಾರವು ಸುಲಲಿತವಾಗಿ ಮತ್ತು ಸ್ವಾಭಾವಿಕವಾಗಿ ಪಸರಿಸುವಂತೆ ಆಗುವದಿಲ್ಲ. ಆದ್ದರಿಂದ ತಕ್ಕಮಟ್ಟಿಗೆ ತಾರತಮ್ಯ ಕರಗಳನ್ನು ಈ ಸಂಸ್ಥೆ ಮನ್ನಿಸುವುದಾದರೂ ಅಂತಹ ಕರಗಳನ್ನು ಈ ಸಂಸ್ಥೆಯ ಒಪ್ಪಿಗೆಯಿಂದಲೇ ಹಾಕಬೇಕಾಗುತ್ತದೆ. ಇಲ್ಲಿಯೂ ಅಂತರ್‌ರಾಷ್ಟ್ರೀಯ ವ್ಯಾಪಾರ ಸಂಸ್ಥೆಯ ಆಡಳಿತ ವರ್ಗ ಹೇಗಿದೆ ಎಂಬುದರ ಮೇಲೆ ಈ ವಿಷಯ ಹೆಚ್ಚು ಅವಲಂಬಿಸಿರುತ್ತದೆ. ದೊಡ್ಡ ದೊಡ್ಡ ರಾಷ್ಟ್ರಗಳೇ ಆಡಳಿತ ವರ್ಗಕ್ಕೆ ಬಂದರೆ ತಾರತಮ್ಯ ಕರಗಳು ಹೆಚ್ಚಿ ಪ್ರಪಂಚದ ವ್ಯಾಪಾರವು ಕಡಿಮೆಯಾಗುತ್ತ ಹೋಗುತ್ತದೆಯೇ ವಿನಾ ಹೆಚ್ಚುವದಿಲ್ಲ. ಇದರಿಂದ ಹವಾನಾ ಪರಿಷತ್ತಿನ ಉದ್ದೇಶವೇ ನಿಷ್ಫಲವಾದಂತಾಗುತ್ತದೆ.

ಶ್ರೀ ದ. ಪ. ಕರಮರಕರರು



ಹವಾನಾ ಪರಿಷತ್ತಿಗೆ ಹೋದ ಹಿಂದೀ ಪ್ರತಿನಿಧಿ

ಕಡೆಗೆ ಒಂದು ಪ್ರಶ್ನೆ

ಈ ಅಂತರ್‌ರಾಷ್ಟ್ರೀಯ ವ್ಯಾಪಾರ ಸಂಸ್ಥೆಯು ಪ್ರಪಂಚದ ವ್ಯಾಪಾರವನ್ನು ಹೆಚ್ಚಿಸಿ ಎಲ್ಲ ದೇಶಗಳ ಅಭಿವೃದ್ಧಿಯನ್ನು ಸಾಧಿಸುವುದರಲ್ಲಿ ಯಶಸ್ವಿಯಾಗಬಹುದೆ? ಸದ್ಯಕ್ಕೆ ಈ ಪ್ರಶ್ನೆಗೆ ಉತ್ತರ ಕೊಡುವುದು ಕಠಿಣ. ಇದುವರೆಗೆ ಅಂತರ್‌ರಾಷ್ಟ್ರೀಯ ಬ್ಯಾಂಕು ಮಾಡಿರುವ ಕೆಲಸ ನಮಗೆ ಗೊತ್ತಿದೆ. ಹಿಂದುಳಿದ ದೇಶಗಳಿಗೆ ಸಾಲ ಕೊಡಬೇಕೆಂದಿದ್ದ ಧ್ಯೇಯ ಸುಗಮವಾಗಿ ಸಾಗಲಿಲ್ಲ. ಅಲ್ಲದೆ ಅಮೇರಿಕೆಯು ಈ ಬ್ಯಾಂಕಿನ ಅಪ್ಪಣೆ ಇಲ್ಲದೆ ೩೫೦೦ ದಶಲಕ್ಷ ಪೌಂಡುಗಳ ಸಾಲವನ್ನು ಇಂಗ್ಲಂಡಿಗೆ ಕೊಟ್ಟಿದೆ ಇದಕ್ಕೂ ಎಷ್ಟೋ ಪಟ್ಟು ಹೆಚ್ಚು ಹಣವನ್ನು ಮಾರ್ಶಲ್ ಸಹಾಯವೆಂಬ ಸೋಗಿನಲ್ಲಿ ಅಮೇರಿಕವು ಯುರೋಪಕ್ಕೆ ಕೊಟ್ಟಿದೆ. ಅಂತರ್‌ರಾಷ್ಟ್ರೀಯ ವ್ಯಾಪಾರ ಸಂಸ್ಥೆಯ ವಿಷಯದಲ್ಲೂ ಈ ರೀತಿ ದೊಡ್ಡ ದೇಶಗಳು ತಪ್ಪಿನಡೆದರೆ ಮಾಡುವುದೇನು?

ರಾಜಕೀಯ ಸ್ವಾತಂತ್ರ್ಯವೆಂದರೆ ಆರ್ಥಿಕ ಸ್ವಾತಂತ್ರ್ಯ ಅಲ್ಲ

ಪ್ರಪಂಚದಲ್ಲಿ ಇತ್ತೀಚೆಗೆ ಅಶಾಂತಿ, ಸಂಕುಚಿತ ಸ್ವಾರ್ಥಗಳು ಎಲ್ಲ ದೇಶಗಳಲ್ಲಿಯೂ ತಲೆದೋರಿದೆ; ತಮ್ಮ ರಾಜಕೀಯ ಸ್ವಾತಂತ್ರ್ಯವೆಂದರೆ ಆರ್ಥಿಕ ಸ್ವಾತಂತ್ರ್ಯವೂ ಹೌದೆಂದು ದೇಶಗಳು ತಿಳಿದಿವೆ. ತಮ್ಮ ಮನಬಂದಕೆ ತಾವು ಕರಗಳನ್ನು ಹಾಕಬಹುದೆಂದೂ ಇತರ ರಾಷ್ಟ್ರಗಳ ವ್ಯಾಪಾರದ ಗೊಡವೆ ತಮಗೇಕೆಂದೂ ಭಾವಿಸಿವೆ. ಎಲ್ಲ ದೇಶಗಳು ಒಟ್ಟಿಗೆ ಸೇರಿ ಎಲ್ಲರ ಹಿತದ ದೃಷ್ಟಿಯನ್ನು ಮುಂದಿಟ್ಟುಕೊಂಡು ಕೆಲಸ ಮಾಡುವಷ್ಟು ವಿಶಾಲ ಹೃದಯ ನಮ್ಮ ರಾಷ್ಟ್ರಗಳಿಗಿನ್ನೂ ಬಂದಿಲ್ಲ.

ಏತನ್ಮಧ್ಯೆ ಅಮೇರಿಕೆ ಮತ್ತು ರಶಿಯಗಳ ವೈಷಮ್ಯ ತೀವ್ರ ಬೆಳೆಯುತ್ತ ನಡೆದಿದ್ದು ಪ್ರಪಂಚದ ಮೂರನೆ ಯುದ್ಧದ ಸಂಭವ ಬೇರೆ ಇದೆ ಎಂದು ಸುದ್ದಿ. ಕೆಂಪು ಗಂಡಾಂತರ (ರೆಡ್ ಮಿನೆಸ) ವನ್ನು ದಾಟಲು "ವೆಸ್ಟರ್ನ್ ಯೂನಿಯನ್" ಎಂಬ ಸಂಘದ ಸಂಘಟನೆಯು ಸಹ ಆಗಿದೆ. ಸಂದರ್ಭ ಹೀಗಿರುವಲ್ಲಿ ಈ ಅಂತರ ರಾಷ್ಟ್ರೀಯ ವ್ಯಾಪಾರ ಸಂಸ್ಥೆಯು ಎಷ್ಟರ ಮಟ್ಟಿಗೆ ತನ್ನ ಧ್ಯೇಯಸಾಧಿಸುತ್ತದೆ ಎಂದು ಸದ್ಯ ಯಾರೂ ಹೇಳಲು ಬರುವಂತಿಲ್ಲ.

ನಾಡವರ ಸಂಘದ ಈ ವರ್ಷದ ವಾರ್ಷಿಕೋತ್ಸವು ಹಿರೇಗುತ್ತಿಯ ಶ್ರೀ ರಾಮಕೃಷ್ಣ ನಿರ್ಮಲ ನಾಯಕರ ಅಧ್ಯಕ್ಷತೆಯಲ್ಲಿ ಇದೇ ತಾ ೨೫ ರಂದು ಕೈ ಭಾರತೀಯಲ್ಲಿ ಜರುಗುವದು. ರಾಮಕೃಷ್ಣ ವೆಂಕಣ್ಣ ನಾಯಕರು ಸ್ವಾಗತಾಧ್ಯಕ್ಷರು.

ಅ. ಭಾ. ಕಾಂ. ಸಮಿತಿಯ ಅಭೂತಪೂರ್ವ ಅಧಿವೇಶನ

ಅ. ಭಾ. ಕಾಂ. ಸಮಿತಿಯ ಅಧಿವೇಶನವು ಇತಿಹಾಸಪ್ರಸಿದ್ಧ ರಾಜಕೀಯ ಗಾಂಧಿ ನಗರದಲ್ಲಿ ಏಪ್ರಿಲ ತಾ. ೨೪ರಂದು ಮಧ್ಯಾಹ್ನ ೨ ಗಂಟೆಗೆ ಅಭೂತಪೂರ್ವ ರೀತಿಯಿಂದ ನೆರೆಯಿತು. ಈ ಮೊದಲು ಈ ಸಭೆಯು ಇಷ್ಟು ವೈಭವ ಇಷ್ಟು ಉತ್ಸಾಹದಲ್ಲಿ ಎಂದೂ ನೆರೆದಿದ್ದಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗದು. ಪತ್ರಿಕಾಲಯದ ವಿಶಾಲ ರಂಗ ಮಂಟಪಕ್ಕೆ ಕೈಸೇರಿದ ಗಣಿಗೆಯ ವರೆಗೆ ಅಲಂಕಾರದ ಮೆರಗನ್ನು ಚೆಲ್ಲಲಾಯಿತು. ಕೋಟಿ ಪಟ್ಟಿಯ ರಾಷ್ಟ್ರಧ್ವಜಗಳ ತೋರಣದಿಂದ ಮಂಟಪವು ನಯನಮನೋಹರವಾಗಿ ಶೃಂಗರಿಸಿತು.

ಶಿಸ್ತು, ಸುವ್ಯವಸ್ಥೆ

ಸಭಾಸದಗಳಿಗೆ ಮೊದಲೇ ಟಿಕೆಟ ವಿತರಣ ಪ್ರಾರಂಭವು ಮಂಟಪದಲ್ಲಿ ಸ್ಥಾನಾಸೀನರಾಗಲು ಬರಕೊಡಲಾಗಿತ್ತು. ೬೦ ಸಾವಿರ ಜನರಿಗೆ ಮಂಟಪದಲ್ಲಿ ಆಸನ ವ್ಯವಸ್ಥೆ ಒದಗಿಸಲಾಗಿತ್ತು.

ಕಾಂಗ್ರೆಸ ಸ್ವಯಂಸೇವಕರ ಸಾಲುಗಳು ಹಾಗೂ ಹಸುರು ಉತ್ಸವ ಕೊಟ್ಟ ಬಿಳಿ ಖಾದಿಯ ನೀರೆಯುಟ್ಟ ಸೇವಾಸೇವಿಕೆಯರ ಸಾಲುಗಳು ಮಂಟಪದ ದಾರಿಯುದ್ದಕ್ಕೂ ಓರಣವಾಗಿ ನಿಂತು ಜನಸಂದಣಿಯನ್ನು ಅಚ್ಚುಕಟ್ಟಾಗಿ ನಿಯಂತ್ರಿಸಲು ಮತ್ತು ರಾಷ್ಟ್ರನಾಯಕರನ್ನು ಸ್ವಾಗತಿಸಲು ಅಣಿಯಾಗಿದ್ದರಲ್ಲದೆ ಪ್ರೇಕ್ಷಕ ಪ್ರತಿನಿಧಿಗಳಿಗೆ ಅವರವರ ಆಸನ ಹುಡುಕಿಕೊಳ್ಳಲು ಮಾರ್ಗದರ್ಶನ ಮಾಡುತ್ತಿದ್ದರು. ನೋಡಿದಲ್ಲೆಲ್ಲ ಗಂಭೀರ ಸ್ತಬ್ಧ ಶಾಂತತೆ ನೆಲಸಿತ್ತಲ್ಲದೆ ಎಲ್ಲ ಚಟುವಟಿಕೆಗಳೂ ಸೊಗಸಾಗಿ ಸುಗಮವಾಗಿ ಸಾಗಿದ್ದುದು ಕಂಡಿತು. ಕಾಂಗ್ರೆಸ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು, ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ ನೆಹರು ಹಾಗೂ ಇನ್ನುಳಿದ ಮುಖಂಡರುಗಳು ಗಂಭೀರ ಗತಿಯಿಂದ ಅಧಿವೇಶನ ಮಂಟಪವನ್ನು ಪ್ರವೇಶಿಸಿದಾಗ ಸ್ವಯಂಸೇವಕರ ಕಹಳೆಯ ಕೂಗು ಸಭಾಸದರ ಆನಂದಕಲರವ ಮೊಳಗಿದವು. ಸರ್ವರೂ ಎದ್ದು ನಿಂತು ಕಾಂಗ್ರೆಸ ಅಧ್ಯಕ್ಷರನ್ನೂ ಮುಖ್ಯ ಮಂತ್ರಿ ನೆಹರೂ ಅವರನ್ನೂ ಗೌರವಿಸಿದರು.

ವಿದೇಶದ ರಾಯಭಾರಿಗಳೂ ಕಾಂಗ್ರೆಸ ಮುಖಂಡರೂ ಮುಂಬಯಿ ಮುಖ್ಯ ಮಂತ್ರಿ ಶ್ರೀ. ಬಿ. ಜಿ. ಖೇರ ಮತ್ತು ಅವರ ಉಳಿದ ಮಂತ್ರಿಗಳು ಪಂ. ಗೋವಿಂದ ವಲ್ಲಭಪಂತ, ಶ್ರೀ. ಎನ್. ವಿ. ಗಾಡಗೀಳ, ಶ್ರೀ. ಕೆ. ಎಂ. ಮುನಶಿ, ಶ್ರೀ. ರಫಿ ಅಹಮ್ಮದ ಕಿದ್ವಾಯಿ ಇವರೇ ಮೊದಲಾದವರು ವೇದಿಕೆಯ ಮೇಲೆ ವಿರಾಜಮಾನರಾಗಿದ್ದರು.

ಮಹಾರಾಷ್ಟ್ರದ ಪ್ರಸಿದ್ಧ ಗಾಯಕರಾದ ಮಾಸ್ತರ ಕೃಷ್ಣರಾವ ವಂದೇಮಾತರಂ ಹಾಡಿದರು. ಅನಂತರ ಹೈ ಹಿಂದುಸ್ತಾನ ಹಮಾರಾ ಎಂಬ ಈ ಸಂದರ್ಭಕ್ಕಾಗಿಯೇ ಕೃಷ್ಣರಾಯರು ಸ್ವತಃ ರಚಿಸಿದ ಹಾಡನ್ನು ಹಾಡಿದರು.

ಡಾ. ರಾಜೇಂದ್ರರ ಭಾಷಣ

ಅಧ್ಯಕ್ಷ ರಾಜೇಂದ್ರ ಪ್ರಸಾದರು ದೇಶದ ಇಂದಿನ ಪರಿಸ್ಥಿತಿಯ ಸಮಾಲೋಚನೆಯೊಂದಿಗೆ ಅಧಿವೇಶನದ ಕಾರ್ಯಾರಂಭ ಮಾಡಿದರು. ಅವರ ಭಾಷಣದ ಸಾರಾಂಶ ಹೀಗಿದೆ—

ಹಿಂದುಸ್ತಾನವು ಸ್ವತಂತ್ರವಾದ ನಂತರವೇ ಒಂದೆಂದೂ ಕಾಣದ ಕಷ್ಟ ಕಂಡಿತು. ಈಗಲೂ ಕಷ್ಟದ ದಿನ ಮುಗಿದಿಲ್ಲ. ಇಂತಹವರಲ್ಲಿಯೇ ನಾವೆಷ್ಟೋ ಪ್ರಗತಿಯ ಹೆಜ್ಜೆ ಹಾಕಿದ್ದೇವೆಂಬುದು ಸಮಾಧಾನದ ಮಾತು. ದುರ್ಘಟನೆಯ ಮೇಲೆ ದುರ್ಘಟನೆ ಕಳೆದ ಕೆಲ ತಿಂಗಳಿಂದ ನಡೆದು ಹೋಗಿವೆ. ಮಹಾತ್ಮರ ಮರಣವು ಇವೆಲ್ಲಕ್ಕೂ ಕಳಸವಿಟ್ಟಿತು. ಮಹಾತ್ಮರು ತೋರಿದ ದಾರಿಯಲ್ಲಿಯೇ ಹೆಜ್ಜೆ ಹಾಕಿದರೆ ಲೋಕಕ್ಕೆಲ್ಲ ಸುಖವಿದೆ.

ನಿರಾಶ್ರಿತರ ಸಮಸ್ಯೆ ಜಗತ್ತಿನ ಇತಿಹಾಸದಲ್ಲಿಯೇ ಈ ವರೆಗೆ ಬಂದಿರದ ಸಮಸ್ಯೆ. ಇದನ್ನು ನಾವು ಎದುರಿಸಬೇಕಾಗಿದೆ [illegible] ಸಂಕುಚಿತ ಮನೋಭಾವದಿಂದ ವಿಧ್ವಂಸಕ ಟೀಕೆ ಮಾಡಬಾರದು. ಸರಕಾರದ ಕೆಲಸವಿಯನ್ನು ಸಹಾಯಿಸುವುದು ದೇಶದ ಎಲ್ಲರೂ ಸೇರಿ ಸ್ವಾತಂತ್ರ್ಯದ ಲಾಭ ಪಡೆಯ ಜನರಿಗೆ ದೊರಕಿಸಿಕೊಡೋಣ.

ಕಾಂಗ್ರೆಸಿನಿಂದ ಸಿಡಿದು ಹೋದವರು

[illegible]

ಗನೆ ಜನರಿಗೆ ತಿಳಿಸ ಕೆಲಸ ಮಾಡಲಿ. ಸರಕಾರ ಮತ್ತು ಜನತೆಯಲ್ಲಿ ನಿಕಟ ಸಂಬಂಧ ಬರುವಂತೆ ಪರಸ್ಪರರಲ್ಲಿ ಸರಿಯಾದ ತಿಳುವಳಿಕೆ ಉಂಟಾಗುವಂತೆ ಸರ್ವರೂ ಪ್ರಯತ್ನಿಸಬೇಕು.

ವಿದೇಶದಲ್ಲಿದ್ದ ಹಿಂದೀಯರು ನಮ್ಮ ಕಡೆಗೆ ಅಕಾಮೂರ್ಣ ದೃಷ್ಟಿಯಿಂದ ನೋಡುತ್ತಿದ್ದಾರೆ. ಸ್ವತಂತ್ರ ಭಾರತವು ತಮ್ಮ ಪರಿಸ್ಥಿತಿಯನ್ನು ತಿದ್ದಬಹುದೆಂದು ಅವರು ತಿಳಿದಿದ್ದರೆ ಅಶ್ಚರ್ಯವೇನು? ನಾವು ವಿದೇಶದ ಹಿಂದೀಯರನ್ನು ಮರೆತಿಲ್ಲ. ಹಿಂದುಸ್ತಾನವು ಅವರಿಗೆ ಸಾಧ್ಯವಿದ್ದುದನ್ನೆಲ್ಲ ಮಾಡುವದು. ದಕ್ಷಿಣ ಆಫ್ರಿಕೆಯ ಸತ್ಯಾಗ್ರಹವನ್ನೂ ನಾವು ಮರೆತಿಲ್ಲ.

ಹೈದರಾಬಾದದ ಸಮಸ್ಯೆ ಗಂಭೀರ ರೂಪ ತಾಳಿದೆ. ಅದನ್ನು ಹಿಂದುಸ್ತಾನ ಎದುರಿಸುವ ಎತ್ತುಗಡೆ ನಡೆಸಿದೆ. ಸಂಸ್ಥಾನ ಸಮಸ್ಯೆಯನ್ನು ಬಿಡಿಸಲು ತೋರಿದ ಮುತ್ಸದ್ದಿತನಕ್ಕೆ ಸರದಾರ ವಲ್ಲಭಭಾಯಿಯವರನ್ನು ನಾನು ತುಂಬ ಅಭಿನಂದಿಸುತ್ತೇನೆ. ಅವರು ಈ ಸಭೆಗೆ ಬರಲಾಗದೆ ಒಂದು ಸಂದೇಶ ಕಳಿಸಿದ್ದಾರೆ.

ಸರದಾರ ಪಟೇಲರ ಸಂದೇಶ

ಹಿಂದುಸ್ತಾನ ಸರಕಾರಕ್ಕೆ ಹೈದರಾಬಾದದ ಪರಿಸ್ಥಿತಿಯ ಪೂರ್ಣ ಅರಿವಿದೆ. ಈ ಬಗ್ಗೆ ನನ್ಯಾಯ್ಯ ಸಮಂಜಸ ಒಪ್ಪಂದವಾದರೆ ಮಾತ್ರ ಅದನ್ನು ಅಂಗೀಕರಿಸಲಾಗುವದು ಎಂದು ಮುಂಚಾಗಿ ಅ. ಭಾ. ಕಾಂ. ಸಮಿತಿಗೆ ಸರದಾರರು ಆಶ್ವಾಸನ ಕಳಿಸಿದ್ದಾರೆ. ಎಲ್ಲರ ಐಕ್ಯ ಮತ್ತು ಅನುಕೂಲ ಮತದ ಬಲದಿಂದಲೇ ಸಂಸ್ಥಾನ ಸಮಸ್ಯೆಯು ೬ ತಿಂಗಳದ ಅಲ್ಪಾವಧಿಯಲ್ಲಿ ಬಗೆಹರಿಯಿತು. ಅದ್ದರಿಂದ ಮುಂದಿನ ಕಾರ್ಯಸಾಧನೆಗೆ ಸರ್ವರೂ ಶಿಸ್ತು, ಹೊಂದಾಣಿಕೆ ಏಕಮತ ಇವುಗಳ ಬಲದಿಂದ ಒಟ್ಟಾಗಿ ಹೆಜ್ಜೆ ಹಾಕುವಾ.

ಪಂ. ಜವಾಹರಲಾಲರ ಗರ್ಜನೆ

ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದರ ಭಾಷಣದ ನಂತರ ಭಾರತದ ಮುಖ್ಯ ಮಂತ್ರಿ ಪಂ. ಜವಾಹರಲಾಲರು ಮಾತನಾಡಿ ಧೀರ ಗಂಭೀರ ವಿಷಯಗಳ ಬಗ್ಗೆ ದರ್ಪದ ಗರ್ಜನೆ ಮಾಡಿದರು. ಹೈದರಾಬಾದದ ಸಮಸ್ಯೆಯನ್ನು ಎದುರಿಸುವಾಗ ಯುದ್ಧ ಅನಿವಾರ್ಯವೆಂದು ತೋರಿದರೆ ಅದಕ್ಕೆ ನಾವು ಅಂಜಿಲ್ಲವೆಂದು ಗುಡಿಗಿದರು. ನ್ಯಾಯ ದೊರಕೀತೆಂಬ ಭರವಸೆಯಿಂದ ಕಾಶ್ಮೀರದ ಪ್ರಶ್ನೆಯನ್ನು ಭದ್ರತಾ ಮಂಡಳಕ್ಕೆ ಒಯ್ದೆವು. ಅಲ್ಲಿ ತಾರತಮ್ಯ, ಭೇದಭಾವ ಇವುಗಳಿಂದ ಬೆರಸುಗೊಂಡ ತೀರ್ಪು ಹೊರಬಂದ ಕಾರಣ ಹಿಂದುಸ್ತಾನವು ಭದ್ರತಾ ಮಂಡಲದ ಗೊತ್ತುವಳಿಯನ್ನು ಮನ್ನಿಸುವದು ಸಾಧ್ಯವಿಲ್ಲೆಂದು ಬಿಚ್ಚು ಮಾತಿನಲ್ಲಿಯೇ ಹೇಳಿದರು. ಪಂ. ಜವಾಹರಲಾಲರ ಭಾಷಣವು ೮॥ ಗೆ ಮುಗಿಯಿತು.

ಅಧಿವೇಶನದಲ್ಲಿ ದುರ್ಘಟನೆ

ಮೊದಲನೆಯ ದಿನದ ಅಧಿವೇಶನದ ಕಾಲಕ್ಕೆ ಪ್ರೇಕ್ಷಕರ ಗ್ಯಾಲರಿಯಲ್ಲಿಯ ಒಂದು ಬಾಗ ಮುರಿದು ಅಪಘಾತ ಸಂಭವಿಸಿತು. ೧೫ ಜನರು ಗಾಯಗೊಂಡರು. ೫ ಜನರ ಪರಿಸ್ಥಿತಿ ಗಂಭೀರವಾಗಿತ್ತು. ಎಲ್ಲರನ್ನೂ ಕೂಡಲೆ ಚಿಕಿತ್ಸೆಗೆ ಸಾಗಿಸಲಾಯಿತು.

ಕಾಂಗ್ರೆಸ ಘಟನೆಯ ಚರ್ಚೆ

ಕಾಂಗ್ರೆಸ ಘಟನೆಯ ಹೊಸ ಕರಡನ್ನು ಕೆಲ ಮುವಾರ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಅಧ್ಯಕ್ಷರು ಸೂಚಿಸಿದರು. ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಆಚಾರ್ಯ ಜುಗಲ ಕಿಶೋರರು ಘಟನೆಯ ಕರಡನ್ನು ಸಭೆಯ ಮುಂದಿಟ್ಟು ಕಾಂಗ್ರೆಸ್ಸನ್ನು ಜನಸೇವೆಮಾಡುವ ಸಂಸ್ಥೆಯನ್ನಾಗಿ ಮಾರ್ಪಡಿಸುವ ವಿಚಾರವಿದ್ದುದರಿಂದ ಪ್ರಾಥಮಿಕ ಸದಸ್ಯತ್ವವನ್ನು ತೆಗೆದಿದ್ದು ೨೧ ವರ್ಷದ ಪ್ರತಿಯೊಬ್ಬನು ಅದಕ್ಕೆ ಸದಸ್ಯನಾಗಬಹುದು ಎಂದು ಮುಂಚಾಗಿ ಹೇಳಿದರು.

ಕಾಂಗ್ರೆಸ ಕಾರ್ಯಕಾರೀಸಮಿತಿ ಘಟನಾ ಉಪಸಮಿತಿಗಳ ಸಭೆ

ಅಧಿವೇಶನದ ಮೊದಲು ತಾ ೨೪ ರ ಮುಂಜಾನೆ ಕಾರ್ಯಕಾರಿ ಸಮಿತಿಯು ಡಾ. ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಸೇರಿ ವಿಷಯಗಳ ಪಟ್ಟಿಯನ್ನು ವಿಚಾರಿಸಿತು.

ಕಾಂಗ್ರೆಸ ಘಟನಾ ಉಪಸಮಿತಿಯ ಸಭೆಯು ಶ್ರೀ ರಂಗರಾವ ದಿವಾಕರರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ ಘಟನೆಯ ಕರಡಿನಲ್ಲಿ ಅಲ್ಪ ತಿದ್ದುಪಡಿ ಮಾಡಲು ಸೇರಿತ್ತು. ಈ ಸಭೆಗೆ ಡಾ. ಪಟ್ಟಾಭಿ, ಬಾಬೂ ಪುರುಷೋತ್ತಮದಾಸ ಟಂಡನ, ಆಚಾರ್ಯ ಜುಗಲ ಕಿಶೋರ, ಶ್ರೀ ಎಸ್. ಕೆ. ಪಾಟೀಲ ಮೊದಲಾದವರು ಉಪಸ್ಥಿತರಿದ್ದರು.

ಎರಡನೆಯ ದಿನ

ತಾ ೨೫ ನೆಯ ಮುಂಜಾನೆ ೯ ಕ್ಕೆ ಮತ್ತೆ ಸಭೆ ಸೇರಿ ಅ. ಭಾ. ಕಾಂ. ಸಮಿತಿಯಲ್ಲಿ ಕಾಂಗ್ರೆಸ ಹೊಸಘಟನೆಯ ಕರಡಿನ ೩೦ ಕಲಮುಗಳಲ್ಲಿ ೨೦ ಕಲಮುಗಳು ಸ್ವೀಕೃತವಾದವು. ಕಾರ್ಯಕಲಾಪ ನಡೆದ ೧ ತಾಸಿನ ಮೇಲೆ ಮೌ. ಅಬ್ದುಲ ಕಲಾಂ ಅಧ್ಯಕ್ಷಸ್ಥಾನವಹಿಸಿದರು. ಕಾರ್ಯವು ವೇಗವಾಗಿ ಸಾಗಿ ೬ ಕಲಮುಗಳು ದಾಟಿದವು. ೧೧ ಗಂಟೆಗೆ ಡಾ ರಾಜೇಂದ್ರ ಪ್ರಸಾದರು ಮತ್ತೆ ಅಧ್ಯಕ್ಷಸ್ಥಾನಾಪನ್ನರಾದರು.

ಕಾರ್ಯಕಾರಿ ಮಂಡಲದ ರಚನೆ

ಕಾರ್ಯಕಾರಿ ಮಂಡಲದ ರಚನೆಯ ಬಗ್ಗೆ ಇದ್ದ ೧೭ ನೇ ಕಲಮಿನ ಚರ್ಚೆ ನಡೆದು ಮಂಡಳದ ಸದಸ್ಯರ ಸಂಖ್ಯೆಯು, ಅಧಿವೇಶನದ ಅಧ್ಯಕ್ಷ, ಕಾರ್ಯದರ್ಶಿ, ಕೋಶಾಧ್ಯಕ್ಷರನ್ನೊಳಗೊಂಡು ೨೦ ಇರಬೇಕೆಂದೂ ಕಾರ್ಯಕಾರೀ ಮಂಡಲದಲ್ಲಿ ಒಂದು ಮೂರಾಂಶಕ್ಕಿಂತ ಹೆಚ್ಚು ಜನರು ಮಂತ್ರಿಗಳಿರಬಾರದೆಂದೂ ಗೊತ್ತಾಯಿತು.

೩—೧೦ ಕ್ಕೆ ಮತ್ತೆ ಅಧಿವೇಶನ ಸೇರಿ ಚುನಾವಣೆ, ನ್ಯಾಯಮಂಡಲ, ವಾದವಿವಾದ ಇವುಗಳಿಗೆ ಸಂಬಂಧಪಟ್ಟ ೨೧ ರಿಂದ ೨೫ ರ ವರೆಗಿನ ಕಲಮುಗಳು ಚರ್ಚೆ ಇಲ್ಲದೇ ಅಂಗೀಕರಿಸಲ್ಪಟ್ಟವು.

ಪಾರ್ಲಿಮೆಂಟರಿ ಬೋರ್ಡ ಮತ್ತು ಕೇಂದ್ರ ಚುನಾವಣೆ ಮಂಡಳ

೨೬ ನೆಯ ಕಲಮು ಹಿಂದುಸ್ತಾನಿ ಭಾಷೆಗೆ ಸಂಬಂಧ ಪಟ್ಟಿದಿತ್ತು. ಇದರ ವಿಚಾರವನ್ನು ಮುಂದಿನ ಅಧಿವೇಶನದವರೆಗೆ ಮುಂದೂಡಲಾಯಿತು.

ಕಾಂಗ್ರೆಸಿನ ಧ್ವಜದ ವಿಷಯದ ೨೭ ನೇ ಕಲಮು ವಾದವಿಲ್ಲದೆ ಸ್ವೀಕೃತವಾಯಿತು. ೨೮ ನೇ ಕಲಮು, ಚುನಾವಣೆ ಮಂಡಲದ ಬಗ್ಗೆ ಇತ್ತು. ಈ ಬಗ್ಗೆ ಬಹಳ ಚರ್ಚೆಯಾಯಿತು.

ಪ್ರಾಂತಿಕ ಚುನಾವಣೆ ಮಂಡಲಗಳು ಪ್ರಾಂತಿಕ ಸಮಿತಿಯ ಸಾವಜನಿಕ ಸಭೆಯಲ್ಲಿ ಮತ್ತು ಕೇಂದ್ರ ಚುನಾವಣೆ ಸಮಿತಿ ಅ. ಭಾ. ಕಾಂ. ಸಮಿತಿಯಿಂದ ಆರಿಸಲ್ಪಡಬೇಕೆಂದು ತಿದ್ದುಪಡಿಯಾಗಿ ಈ ಕಲಮು ಸ್ವೀಕೃತವಾಯಿತು.

ಈ ಘಟನೆಯು ೧೧೨ ಬಹುಮತದಿಂದ ಬದಲಾಗಬಹುದೆಂಬ ಕೊನೆಯ ಕಲಮು ಸ್ವೀಕೃತವಾಯಿತು. ಆಮೇಲೆ ಇಡೀ ಘಟನೆಯನ್ನು ಮತಕ್ಕೆ ಹಾಕಲು ಅದು ಪಾಸಾಯಿತು.

ಕಾಂಗ್ರೆಸಿಗೆ ಅನುಗುಣ ಸರಕಾರದ ಅರ್ಥನೀತಿ

ಕಾಂಗ್ರೆಸ ಆರ್ಥಿಕ ಕಾರ್ಯಕ್ರಮ ಸಮಿತಿಯ ವರದಿಯಂತೆ ಸರಕಾರದ ಆರ್ಥಿಕ ಧೋರಣವಿರಬೇಕೆಂಬ ಗೊತ್ತುವಳಿಯು ಸ್ವೀಕೃತವಾಯಿತು. ಈ ಗೊತ್ತುವಳಿಯನ್ನು ಶ್ರೀ ಶಂಕರರಾವ ದೇವರು ಮಂಡಿಸಿದರು. ಈ ಆರ್ಥಿಕ ಧೋರಣವನ್ನು ನಿಯಂತ್ರಿಸಲು ಪಂ. ನೆಹರು ಅವರ ಅಧ್ಯಕ್ಷತೆಯಲ್ಲಿ ಒಂದು ಸ್ಥಾಯೀ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯಲ್ಲಿ, ಶ್ರೀ ರಫಿ ಅಹಮ್ಮದ ಕಿದವಾಯಿ, ಶ್ರೀ ಶಂಕರರಾವದೇವ ಪ್ರೊ. ಎನ್. ಜಿ. ರಂಗಾ, ಡಾ. ಪಟ್ಟಾಭಿ ಸೀತಾರಾಮಯ್ಯ, ಶ್ರೀ ಜಗಜೀವನರಾಮ, ಶ್ರೀ ಗುಲಝಾರಿಲಾಲ ನಂದಾ, ಶ್ರೀ ಜೆ. ಸಿ. ಕುಮಾರಪ್ಪ ಶ್ರೀ ಅನ್ನದಾ ಪ್ರಸಾದ ಚೌಧರಿ ಮೊದಲಾದವರು ಇದ್ದಾರೆ.

ಕಾಂಗ್ರೆಸ ಪಾರ್ಲಮೆಂಟರೀ ಬೋರ್ಡ ಕಾಂಗ್ರೆಸಿನ ಪಾರ್ಲಿಮೆಂಟರಿ ಚಟುವಟಿಕೆಗಳ ಮೇಲೆ ನಿಯಂತ್ರಣ ವಿಡುವಂತೆ ಈ ಆರ್ಥಿಕ ಸ್ಥಾಯಿ. ಸಮಿತಿಯು ಸರಕಾರಗಳ ಔದ್ಯೋಗಿಕ ಧೋರಣದ ಮೇಲೆ ನಿಯಂತ್ರಣವನ್ನಿಡುವದು. ಈಗ ಸ್ಥಾಯಿ ಸಮಿತಿಗೆ ಸೂಚಿತವಾದ ವ್ಯಕ್ತಿಗಳು ಕಾಂಗ್ರೆಸಿನ ಆರ್ಥಿಕ ಕಾರ್ಯಕ್ರಮ ಸಮಿತಿಯಲ್ಲಿದ್ದು ಕೆಲಸಮಾಡಿದವರಿರುವರು. ಈ ಮಸೂದೆಗೆ ಅನೇಕ ತಿದ್ದುಪಡಿಗಳು ಬಂದರೂ ಪಂ. ನೆಹರು ಅವರು ಸಮರ್ಪಕ ಉತ್ತರ ಕೊಟ್ಟ ಮೇಲೆ ಮೂಲ ಗೊತ್ತುವಳಿಯೇ ಅಂಗೀಕೃತವಾಯಿತು.

ಸಮಾರೋಪ

ರಾತ್ರಿ ೮ ಕ್ಕೆ ಅಧಿವೇಶನವನ್ನು ಮುಕ್ತಾಯಗೊಳಿಸುತ್ತ ಡಾ. ರಾಜೇಂದ್ರ ಪ್ರಸಾದರು ಮನೆ ಮಾರುಗಳನ್ನುತೊರೆದು ಬಂದ ನಿರಾಶ್ರಿತರ ಪುನರ್ವಸನಕ್ಕೆ ಎಲ್ಲರೂ ಸಹಕಾರ ನೀಡಬೇಕೆಂದೂ ಮುನ್ನಾ ದಿನದ ಚರ್ಚೆಯಲ್ಲಿ ಹಿಂದುಸ್ತಾನದ ಹೊರಗಿರುವ ಪ್ರದೇಶಗಳಲ್ಲಿ ಕಾಂಗ್ರೆಸು ಅಸ್ತಿತ್ವದಲ್ಲಿ ಉಳಿಯಬಾರದೆಂದು ನಿರ್ಧರಿಸಲಾದ ಕಾರಣ ಪೂರ್ವ ಬಂಗಾಲ ಮತ್ತು ಪಶ್ಚಿಮ ಪಂಜಾಬದ ಜನರು ತಮ್ಮ ಸಂಘಟನೆಯನ್ನ ಸ್ಥಾಪನೆಮಾಡಿಕೊಳ್ಳಬೇಕೆಂದೂ ಅವರು ಅಖಿಲ ಭಾರತ ಕಾಂಗ್ರೆಸ ಸಮಿತಿಯೊಡನೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳುವ ಅಶೆ ಬೇಡವೆಂದೂ ಇದರಿಂದ ಅವರು ತಮ್ಮ ಬಗ್ಗೆ ಕಾಂಗ್ರೆಸು ಅನಾಸ್ಥೆ ತೋರಿದೆಯೆಂದು ಗ್ರಹಿಸಬಾರದೆಂದೂ ಹೇಳಿದರು. ಮರುದಿನ ಬೆಳಿಗೆ ಕಾಂಗ್ರೆಸ ಭವನದಲ್ಲಿ ಗುಪ್ತ ಸಭೆಸೇರಿ ಹೈದರಾಬಾದ ಕಾಶ್ಮೀರಗಳ ಬಗ್ಗೆ ಚರ್ಚೆ ನಡೆವುದೆಂದು ಸಾರಿದರು. ವಂದೇಮಾತರಂ ನಂತರ ಅಧಿವೇಶನ ಮುಕ್ತಾಯವಾಯಿತು.

ಅ. ಭಾ. ಕಾಂ. ಸಮಿತಿಯ ಗುಪ್ತ ಸಭೆ

ಅಖಿಲ ಭಾರತ ಕಾಂಗ್ರೆಸ ಸಮಿತಿಯ ಅತಿ ಮಹತ್ವದ ಗುಪ್ತ ಸಭೆಯು ತಾ ೨೬ ಮುಂಜಾನೆ ಕಾಶ್ಮೀರ ಹೈದರಾಬಾದಗಳ ಪ್ರಶ್ನೆಯನ್ನೂ ಆಜಾದ ಹಿಂದ ಸೈನ್ಯದ ವಿಚಾರವನ್ನೂ ಚರ್ಚಿಸಲೋಸುಗ ಕಾಂಗ್ರೆಸಭವನದಲ್ಲಿ ಸೇರಿತ್ತು. ಹೈದರಾಬಾದ ಸಂಸ್ಥಾನಕ್ಕೆ ಹೊಂದಿಕೊಂಡಿರುವ ಮದ್ರಾಸ ಮಧ್ಯಪ್ರಾಂತ ಮತ್ತು ಮುಂಬಯಿ ಈ ಮೂರು ಪ್ರಾಂತಗಳ ಮುಖ್ಯ ಮಂತ್ರಿಗಳು ಮತ್ತು ಇನ್ನಿಬ್ಬರು ಅ. ಭಾ. ಕಾಂ ಸಮಿತಿಯ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಬೇಕೆಂದೂ ಅವರು ಹೈದರಾಬಾದ ಗಡಿಯಲ್ಲೆಲ್ಲಾ ಪ್ರವಾಸ ಮಾಡಿ ಕಾಂಗ್ರೆಸ ಅಧ್ಯಕ್ಷರಿಗೆ ಒಂದು ವರದಿ ಮಾಡಬೇಕೆಂದೂ ಆಚಾರ್ಯ ಕೃಪಲಾನಿಯವರು ಒಂದು ಸೂಚನೆ ಮಾಡಿದರಂತೆ. ಆದರೆ ಹೈದರಾಬಾದದ ಬಗ್ಗೆ ಸಂಪೂರ್ಣ ವರದಿಯು ಸರಕಾರದ ಹತ್ತಿರ ಇರುವದರಿಂದ ಈ ಬಗೆಯ ಸಮಿತಿಯ ಅವಶ್ಯಕತೆಯಿಲ್ಲವೆಂದು ಪಂ. ನೆಹರು ಅಭಿಪ್ರಾಯಪಟ್ಟರಂತೆ.

ಗಡಿಗಳಲ್ಲಿಯ ಘಟನೆಗಳ ಬಗ್ಗೆ ಸರಕಾರವು ಉಗ್ರಕ್ರಮ ಕೈಕೊಳ್ಳಬೇಕೆಂದೂ ಶಸ್ತ್ರಾಸ್ತ್ರದಳ ಇಟ್ಟು ಜನರಲ್ಲಿ ನಂಬಿಗೆ ಹುಟ್ಟುವಂತೆ ಮಾಡಬೇಕೆಂದೂ ಎಲ್ಲ ಸದಸ್ಯರು ಅಭಿಪ್ರಾಯಪಟ್ಟರಂತೆ. ಕೊನೆಗೆ ಈ ಪ್ರಶ್ನೆಯನ್ನು ಕೇಂದ್ರ ಸರಕಾರವೇ ಯೋಗ್ಯರೀತಿಯಲ್ಲಿ ಬಿಡಿಸಬೇಕೆಂದೂ ಅದಕ್ಕೆ ಜನರೆಲ್ಲ ಸಹಕಾರ ನೀಡಬೇಕೆಂದೂ ಒಂದು ನಿರ್ಣಯವು ಏಕಮತದಿಂದ ಅಂಗೀಕೃತವಾಯಿತೆಂದು ವರದಿಯಿದೆ.

ಪಂ. ಜವಾಹರಲಾಲರ ಭಾಷಣ

ಈ ಸಂದರ್ಭದಲ್ಲಿ ಪಂ. ಜವಾಹರಲಾಲರು ಭಾಷಣ ಮಾಡುತ್ತ ಹೈದರಾಬಾದ ಮತ್ತು ಹಿಂದುಸ್ತಾನ ಸರಕಾರಗಳ ನಡುವೆ ನಡೆದ ಪತ್ರವ್ಯವಹಾರದ ಸಂಪೂರ್ಣ ವರದಿಯನ್ನು ಕೊಟ್ಟರಂತೆ. ಭಾರತದ ಗೌರವಕ್ಕೆ ಭಂಗ ತರದಂತಹ ಸೂಕ್ತ ಯುಕ್ತಕ್ರಮಗಳನು ಕೈಕೊಳ್ಳುವದರಲ್ಲಿ ಹಿಂದುಸ್ತಾನ ಸರಕಾರವು ಎಳ್ಳಷ್ಟೂ ಹಿಂದುಮುಂದು ನೋಡುವದಿಲ್ಲವೆಂದು ಮುಖ್ಯಮಂತ್ರಿಗಳು ಸಭಿಕರಿಗೆ ಅಶ್ವಾಸಕೊಟ್ಟರಂತೆ. ಈ ವಿಷಯದ ಬಗ್ಗೆ ಬಹಿರಂಗ ಅಧಿವೇಶನದಲ್ಲಿ ಹೇಳಿದುದನ್ನೇ ಪಂ. ನೆಹರು ಹೇಳಿದರೆಂದು ತಿಳಿಯುತ್ತದೆ.

ಹಿಂದೀ ಒಕ್ಕೂಟದಲ್ಲಿಯ ಪ್ರಜೆಗಳ ವಿತ್ತಜೀವ ರಕ್ಷಣೆಗಾಗಿ ಪ್ರಾಂತಿಕ ಸರಕಾರಗಳು ಕೈಕೊಂಡ ಮತ್ತು ಕೈಕೊಳ್ಳಲಿರುವ ಕ್ರಮಗಳ ವರದಿಯನ್ನು ಮುಖ್ಯ ಮಂತ್ರಿಗಳು ಸಭಿಕರೆದುರು ಇಟ್ಟರಂತೆ.

ಸರದಾರ ವಲ್ಲಭಭಾಯಿ ಪಟೇಲರ ಮಾತುಗಳನ್ನೇ ಪುನರುಚ್ಚರಿಸಿ ಪಂ. ಜವಾಹರಲಾಲರು ನಿಜಾಮರಿಗೆ ಎಚ್ಚರಿಕೆಯನ್ನು ಹೇಳಿದರಂತೆ.

ಹೈದರಾಬಾದದ ಬಗ್ಗೆ ಯಾರಾದರೂ ಸಲಹೆ ಸೂಚನೆ ಮಾಡುವದಿದ್ದಲ್ಲಿ ಅವರು ಕಾಂಗ್ರೆಸ ಕಾರ್ಯಕಾರಿ ಸಮಿತಿಗೆ ಅವನ್ನು ತಿಳಿಸಬಹುದೆಂದೂ ಇದರಿಂದ ಅಧ್ಯಕ್ಷರು, ಸರಕಾರವು ಕೈಕೊಳ್ಳಬಹುದಾದ ಕ್ರಮದ ಬಗ್ಗೆ ಒಂದು ಸುಸಂಬದ್ಧವಾದ ಕ್ರಮವನ್ನು ಸೂಚಿಸಲು ಯೋಗ್ಯವಾಗುವದೆಂದೂ ಹೇಳಿದ ಡಾ. ರಾಜೇಂದ್ರಪ್ರಸಾದರ ಸೂಚನೆಗೆ ಸಭೆಯು ಸಮ್ಮತಿಸಿತೆಂದು ವರದಿಯಿದೆ.

ಮುಂಬಯಿ

ಕೊಲ್ಹಾಪುರದ ವಿವಿಧ ಪಕ್ಷಸಂಘಟನೆಗಳ ಪ್ರತಿನಿಧಿಗಳು ತಾ ೨೫ ಕ್ಕೆ ಮುಂಬಯಿಯಲ್ಲಿ ಹಿಂದುಸ್ಥಾನದ ಲೋಕೋಪಯೋಗಿ ಖಾತೆಯ ಮಂತ್ರಿ ಶ್ರೀ ಗಾಡಗೀಳರನ್ನು ಕಂಡು ಅವರಿಗೆ ಕೊಲ್ಹಾಪುರದ ಪರಿಸ್ಥಿತಿಯನ್ನು ನಿವೇದಿಸಿದರು. ಹೊಸ ಆಡಳಿತಾಧಿಕಾರಿಯು ಬಂದನಂತರ ಕೊಲ್ಹಾಪುರದಲ್ಲಿ ಗಲಭೆಯ ಬಗ್ಗೆ ೧೬ ನೂರು ಜನರು ಬಂಧಿಸಲ್ಪಟ್ಟಿದ್ದಾರೆ. ಪ್ರತಿನಿಧಿಗಳ ವಿಚಾರವನ್ನು ಸರದಾರ ಪಟೇಲರಿಗೆ ತಿಳಿಸುವದಾಗಿ ಗಾಡಗೀಳರು ಆಶ್ವಾಸನ ಕೊಟ್ಟರು.

ಮುಂಬಯಿ ಪತ್ರಿಕೋದ್ಯಮಿಗಳ ಸಂಘದವರು ತಾ ೨೬ ಕ್ಕೆ ಮಧ್ಯಾಹ್ನ ೩॥ ಗೆ ಭಾರತದ ಮುಖ್ಯ ಮಂತ್ರಿ ಪಂ. ಜವಾಹರಲಾಲರಿಗಾಗಿ ತಾಜಮಹಾಲ ಹೊಟೆಲಿನಲ್ಲಿ ಸಂತೋಷ ಕೂಟ ಏರ್ಪಡಿಸಿ ಗೌರವಿಸಿದರು.

ಮುಂಬಯಿ ಸಿ. ಆಯ್. ಡಿ. ಅಧಿಕಾರಿಗಳು ಕಮ್ಯುನಿಸ್ಟ ವಾರಪತ್ರಿಕೆ ಪೀಪಲ್ಸ ಏಜ ಮುದ್ರಿತವಾಗುತ್ತಿದ್ದ ನ್ಯೂ ಏಜ ಎಂಬ ಮುದ್ರಣಾಲಯವನ್ನು ಶೋಧಿಸಿ ಶೀಲಮಾಡಿದ್ದಾರೆ. ಮುಂಬಯಿ ಸಾರ್ವಜನಿಕ ಸುರಕ್ಷಿತತೆ ಕಾಯದೆಯನ್ವಯ ಈ ಕ್ರಮ ಕೈಕೊಳ್ಳಲಾಗಿದೆ. ಪೋಲೀಸರು ಗಿರಣಿ ಕಾಮಗಾರ ಯೂನಿಯನ್ನದ (ಕೆಂಪು ಧ್ವಜ) ಕಚೇರಿಯನ್ನು ಮುತ್ತಿ ಹೈದರಾಬಾದ ಸಂಸ್ಥಾನಕ್ಕೆ ಸಂಬಂಧಿಸಿದ ಕೆಲ ಕಾಗದಪತ್ರಗಳನ್ನು ವಶಪಡಿಸಿಕೊಂಡಿರುವರು.

ಔದ್ಯೋಗಿಕ ಶಿಕ್ಷಣದ ತರಬೇತಿ ಪಡೆಯಲಿಚ್ಛಿಸುವ ಅನೇಕ ಉಮೇದವಾರರಿಂದ ಮುಂಬಯಿ ಸರಕಾರದವರು ಅರ್ಜಿಗಳನ್ನು ಕರೆಯಲಿರುವರು. ಇವರಿಗೆ ಮುಂಬಯಿ ಮತ್ತು ಅಹಮ್ಮದಾಬಾದಗಳಲ್ಲಿಯ ಔದ್ಯೋಗಿಕ ಸಂಸ್ಥೆಗಳಲ್ಲಿ ಶಿಕ್ಷಣ ಕೊಡಲಾಗುವದು.

ಮುಂದಿನ ಚುನಾವಣೆಗಳಲ್ಲಿ ಪ್ರಚಾರ ನಡೆಸಲು ಮತ್ತು ಕೇಂದ್ರ ಹಾಗು ಪ್ರಾಂತೀಯ ಶಾಸನ ಸಭೆಗಳಿಗೆ ಹುರಿಯಾಳುಗಳನ್ನು ಆರಿಸಲು ಒಂದು ಕೇಂದ್ರ ಚುನಾವಣೆ ಸಮಿತಿಯನ್ನು ನೇಮಿಸಲಾಗುವದೆಂದು ಗೊತ್ತಾಗುತ್ತದೆ. ಈ ಚುನಾವಣೆ ಸಮಿತಿಯಲ್ಲಿ ಕಾಂಗ್ರೆಸ ಅಧ್ಯಕ್ಷರಲ್ಲದೆ ಕೇಂದ್ರ ಪಾರ್ಲಮೆಂಟರಿ ಬೋರ್ಡಿನ ೫ ಸದಸ್ಯರು ಹಾಗು ಎ. ಆಯ್. ಸಿ. ಸಿ. ಯಿಂದ ನೇಮಿಸಲ್ಪಟ್ಟ ೫ ಸದಸ್ಯರು ಇರುವರೆಂದು ತಿಳಿಯುತ್ತದೆ.

ಮುಂಬಯಿ ಮುಖ್ಯ ಮಂತ್ರಿ ಶ್ರೀ ಬಿ. ಜಿ. ಖೇರರು ಒಂದು ಪ್ರಕಟನೆ ಹೊರಡಿಸಿ ಗೋಧ್ರಾದ ಗಲಭೆಯನ್ನು ಖಂಡಿಸಿದ್ದಾರೆ.


ಶಾಂತಿಯು ನೆಲಸಿ ಊರಿಂದ ಓಡಿ ಹೋದವರು ಮರಳಿ ಬಂದು ಎಲ್ಲ ವ್ಯವಹಾರ ಸಮನಾಗಿ ಸಾಗಿದಾಗ ಮತ್ತೆ ಕೆಲ ತಲೆತಿರುಕರು ಗಲಭೆ ಎಬ್ಬಿಸಿದ್ದು ಕೇಳಿ ನನಗೆ ಸಿಡಿಲು ಬಡಿದಂತಾಗಿದೆ. ಇಂತಹರನ್ನು ಹುಡುಕಿ ತೆಗೆದು ಕಠಿಣವಾಗಿ ಶಿಕ್ಷಿಸಲು ಸರಕಾರವು ಪಣತೊಟ್ಟಿದೆ ಎಂದು ಮುಂತಾಗಿ ಮಂತ್ರಿಗಳು ನುಡಿದಿದ್ದಾರೆ.

ಜಮಾಯತ್ ಉಲ್ ಉಲೇಮಾ ಸಂಸ್ಥೆಯ ಪರಿಷತ್ತು ತಾ ೨೬ ರಂದು ಹಜರತ್ ಮೌಲಾನಾ ಮಾದನಿಯವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಮೌ ಅಝಾದ ಹಾಗು ಪಂ. ನೆಹರೂರು ಆಗ ಆಗಮಿಸಿದ್ದರು. ಮೌ. ಅಝಾದರು ಮಾತಾಡಿ ಜಯಾಮತ ಸಂಸ್ಥೆಯು ತನ್ನ ರಾಜಕೀಯ ಸ್ವರೂಪವನ್ನು ಬಿಟ್ಟುಕೊಡಲಿಕ್ಕೆ ಅನುಮತಿಕೊಡಲು ಪ್ರತಿನಿಧಿಗಳನ್ನು ಕೇಳಿಕೊಂಡರು.

ಅ. ಭಾ. ಮೋಮಿನ ಪರಿಷತ್ತಿನ ಅಧ್ಯಕ್ಷರೂ ಬಿಹಾರ ಸರಕಾರದ ಲೋಕೋಪಯೋಗಿ ಖಾತೆಯ ಮಂತ್ರಿಗಳೂ ಆದ ಅಬ್ದುಲ್ ಕಯಾಮ ಅನ್ಸಾರಿಯವರು ದ್ವಿರಾಷ್ಟ್ರವಾದದಲ್ಲಿ ಇನ್ನೂ ನಂಬಿಗೆ ಇರುವ ಹಿಂದೀ ಮುಸಲ್ಮಾನರು ಹಿಂದುಸ್ಥಾನ ಬಿಟ್ಟು ಪಾಕಿಸ್ತಾನಕ್ಕೆ ಹೊರಡುವದೇ ಲೇಸೆಂದು ಹೇಳಿದರು. ಅನ್ಸಾರಿಯವರು ಮುಂಬಯಿಯಲ್ಲಿಯ ಗೃಹ ಕೈಗಾರಿಕೆಯ ಉದ್ಯೋಗಗಳನ್ನು ಪರಿಶೀಲಿಸಲು ಮುಂಬಯಿಗೆ ಬಂದಿದ್ದು ಮುಂದೆ ನಾಗಪುರಕ್ಕೆ ತೆರಳಿದರು.

ಮುಂಬಯಿಯಲ್ಲಿಯ ಮೂರು ಸಂಚಾರಿ ಆಸ್ಪತ್ರೆಗಳ ಕೇಂದ್ರಗಳನ್ನು ಉದ್ಘಾಟಿಸುತ್ತ ಭಾರತದ ಮುಖ್ಯ ಮಂತ್ರಿ ಪಂ. ನೆಹರು ಅವರು ಹಳ್ಳಿಗರ ಪ್ರಗತಿಗೆ ಸಂಚರಿಸಿ ಈ ಆಸ್ಪತ್ರೆಗಳು ಕೆಲಸಮಾಡಲಿ ಹಾಗೂ ಹಳ್ಳಿಗರ ಬೇಡಿಕೆಗಳಿಗೆ ಅವು ಗಮನಕೊಡಲಿ. ಸಂಚಾರಿ ಆಸ್ಪತ್ರೆಗಳಿಂದ ಹಳ್ಳಿಗರ ರೋಗನಿವಾರಣೆಯನ್ನು ಮಾಡಬಹುದು. ಪ್ರತಿಯೊಂದು ಆಸ್ಪತ್ರೆಯೂ ಸಂಚಾರಿ ಆಸ್ಪತ್ರೆಯೊಂದನ್ನು ಜೋಡಿಸಿಕೊಳ್ಳಬೇಕು ಎಂದು ಮುಂತಾಗಿ ಹೇಳಿದರು.

ಹೊಸದಾಗಿ ಸ್ವೀಕೃತವಾದ ಕಾಂಗ್ರೆಸ ಘಟನೆಯನ್ನು ನುಲಕ್ಷಿಸಿ ಕಾಂಗ್ರೆಸನ್ನು ಹೇಗೆ ಸಂಘಟಿಸಬೇಕೆಂಬ ಬಗ್ಗೆ ಎಲ್ಲ ಪ್ರಾಂತೀಯ ಕಾಂಗ್ರೆಸ ...



... ವೇಶನವು ಮುಂಬಯಿಯಲ್ಲಿ ತಾ ೨೬ ಕ್ಕೆ ನಡೆದು ದೀರ್ಘ ಚರ್ಚೆ ನಡೆಯಿತೆಂದು ತಿಳಿಯುತ್ತದೆ.

ಕಾಂಗ್ರೆಸ ಕಾರ್ಯ ಸಮಿತಿಯ ಸದಸ್ಯರಾದ ಪ್ರೊ. ರಂಗಾ, ಶ್ರೀ ಟಿ. ಪ್ರಕಾಶಂ, ಶ್ರೀ ಓಬಲರೆಡ್ಡಿ ಮತ್ತು ಶ್ರೀ ಕಾಲೇಶ್ವರರಾಯರಿಂದ ಕೂಡಿದ ಒಂದು ಶಿಷ್ಟಮಂಡಲವು ತಾ ೨೫ ಕ್ಕೆ ಪಂ. ನೆಹರೂ ಅವರನ್ನು ಆಂಧ್ರ ಪ್ರಾಂತೀಕರಣದ ಬಗ್ಗೆ ಕಂಡರೆಂದೂ ಪಂ. ನೆಹರು ಅವರು, ಹೈದರಾಬಾದ ಕಾಶ್ಮೀರಗಳ ಸಮಸ್ಯೆಯನ್ನು ಈಗ ಎದುರಿಸಬೇಕಾಗಿರುವ ಕಾರಣ ಪ್ರಾಂತೀಕರಣದ ಬಗ್ಗೆ ಈಗ ಉದ್ರಿಕ್ತರಾಗಬಾರದೆಂದು ಹೇಳಿದರಾಗಿ ತಿಳಿಯುತ್ತದೆ.

ಜಾತಿಗತ ಸುದ್ಧಿ ಸ್ವಾತಂತ್ರ್ಯ ಪರಿಷತ್ತಿಗೆ ಹಿಂದೀ ಶಿಷ್ಟಮಂಡಲದ ಧುರೀಣರಾಗಿ ಹೋಗಿದ್ದ ಮೈಸೂರಿನ ದಿವಾಣರಾದ ಸರ್. ಎ. ರಾಮಸ್ವಾಮಿ ಮೊದಲಿಯಾರರು ತಾ ೨೫ ಕ್ಕೆ ಮುಂಬಯಿಗೆ ಮರಳಿ ಬಂದರು.

ಪುಣೆಯ ದಂಡಿನ ಭಾಗದಲ್ಲಿ ಸರ್ಕಸ್ಸಿನ ಒಂದು ಸಿಂಹಕ್ಕೆ ಸ್ವಾತಂತ್ರ್ಯ ಸಿಕ್ಕು ಸುತ್ತಲಿನ ಜನರಲ್ಲಿ ಹಾಹಾಕಾರ ಉಂಟಾಯಿತು. ಸಿಂಹದ ಪಂಜರವನ್ನು ಎತ್ತಿನ ಬಂಡಿಯ ಮೇಲೆ ಹಾಕಿ ಸ್ಥಾನಾಂತರ ಮಾಡುವಾಗ ಹಾದಿಯಲ್ಲಿ ಪಂಜರ ಹೊರಳಿಬಿತ್ತು. ಪಂಜರದ ಬಾಗಿಲ ಸಡಿಲಾಯಿತು. ಈ ಸಂಧಿಸಾಧಿಸಿ ಸಿಂಹವು ಗರ್ಜಿಸುತ್ತ ಹೊರಗೆ ಜಿಗಿಯಿತು; ಜನರು ದಿಕ್ಕೆಟ್ಟು ಓಡಲಾರಂಭಿಸಿದರು. ಸಿಂಹವು ಬಂಡಿಯ ಎತ್ತಿನ ಮೇಲೆ ಹಾರಿ ಗಾಯಗೊಳಿಸಿತು. ಅಷ್ಟರಲ್ಲಿ ಸರ್ಕಸ್ಸಿನ ಆಟಗಾರನು ಬಂದು ಸಿಂಹವನ್ನು ಮತ್ತೆ ಪಂಜರಕ್ಕೆ ಹಾಕಿ ಹೆಚ್ಚಿನ ಗಂಡಾತರ ತೊಲಗಿಸಿದನು.

ಅ. ಭಾ. ಕಾಂಗ್ರೆಸ ಸಮಿತಿಯ ಅಧಿವೇಶನದ ಕಾಲಕ್ಕೆ ಪ್ರೇಕ್ಷಕರ ಗ್ಯಾಲರಿಯಲ್ಲಿಯ ಒಂದು ಬಾಳು ಮುರಿದುಬಿದ್ದು ತಾ ೨೪ ರಂದು ಅಪಘಾತ ಸಂಭವಿಸಿತು. ೧೫ ಜನರು ಗಾಯಗೊಂಡರು ಐದು ಜನರ ಪರಿಸ್ಥಿತಿ ಗಂಭೀರವಿರುವದು ಎಲ್ಲರನ್ನೂ ಆಸ್ಪತ್ರಿಗೆ ಕೂಡಲೇ ಸಾಗಿಸಲಾಯಿತು.

ತಾ. ೨೫ರ ಮಧ್ಯಾಹ್ನ ನೂರಕ್ಕಿಂತ ಹೆಚ್ಚು ಕಮ್ಯುನಿಸ್ಟರು ಕಾಂಗ್ರೆಸ ವಿರೋಧಿ ಘೋಷಣೆಗಳನ್ನು ಮಾಡುತ್ತ ಅ. ಭಾ. ಕಾಂಗ್ರೆಸ ಸಮಿತಿಯ ಸಭೆಯ ಎದುರು ಮತಪ್ರದರ್ಶನ ಮಾಡಿದರು. ಅವರು ಪೀಪಲ್ಸ್ ಏಜ ಪತ್ರದ ಪ್ರತಿಗಳನ್ನು ಮಾರುತ್ತ ಸಾಗಿದ್ದರು. ಈ ಪತ್ರಿಕೆಯ ಕಚೇರಿಯನ್ನು ಪೋಲೀಸರು ಶೀಲು ಮಾಡಿರುವರು. ಶ್ರೀ. ಡಾಂಗೆಯವರ ಬಿಡುಗಡೆಯಾಗಬೇಕೆಂದೂ ಅವರು ಕೂಗುತ್ತಿದ್ದರು. ಗಾಂಧಿ ನಗರದ ಬಳಿಗೆ ಹೋಗುವದು ಅವರಿಗೆ ಸಾಧ್ಯವಾಗಲಿಲ್ಲ. ದೂರದಿಂದೇ ಮತಪ್ರದರ್ಶನ ಮಾಡಿ ಮರಳಿದರು.

ತಾ. ೨೩ರಿಂದ ಳದಿನ ಸೊಲ್ಲಾಪುರ ನಗರದ ೮ ಪೋಲೀಸ ಠಾಣೆಯ ಪ್ರದೇಶದಲ್ಲಿ ರಾತ್ರಿ ೭ರಿಂದ ಬೆಳಗಿನ ೫ರ ವರೆಗೆ ಕರ್ಫ್ಯೂ ಅಜ್ಞೆ ಜಾರಿ ಮಾಡಲಾಗಿತ್ತು. ನಗರದ ಪೂರ್ವ ಭಾಗದಲ್ಲಿ ಕೆಲವು ಚೂರಿಯ ಇರಿತಗಳಾಗಿ ವಾತಾವರಣವು ಪ್ರಕ್ಷುಬ್ಧವಾದ ಕಾರಣ ಈ ಅಜ್ಞೆಯನ್ನು ಜಾರಿ ಮಾಡಲಾಯಿತು.

ತಾ. ೨೪ರಂದು ಭಾರತದ ಮುಖ್ಯ ಮಂತ್ರಿ ಪಂ. ಜವಾಹರಲಾಲರಿಗೆ ಮುಂಬಯಿ ಗವ್ಹರ್ನರರು ಸತ್ಕಾರಕೂಟ ಏರ್ಪಡಿಸಿದ್ದರು. ಡಾ. ರಾಜೇಂದ್ರ ಪ್ರಸಾದ, ಪಂಡಿತ ಪಂತ, ಶ್ರೀ. ಬಿ. ಜಿ. ಖೇರ ಹಾಗು ಮುಂಬಯಿ ಪ್ರಾಂತದ ಇತರ ಮಂತ್ರಿಗಳು, ಶ್ರೀ. ಕೆ. ಎಂ. ಮುನಶಿ, ಹೈಕೋರ್ಟ ನ್ಯಾಯಮೂರ್ತಿಗಳು ಮೊದಲಾದವರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ತಿದ್ದುಪಡಿ

ಮುಂಬಯಿ ವಿಶ್ವವಿದ್ಯಾಲಯದ ಬಿ. ಎಸ್. ಸಿ. ಟೆಕ್ನಾಲಜಿ ಪರೀಕ್ಷೆಯಲ್ಲಿ ೧ ನೇ ವರ್ಗದಲ್ಲಿ ಪಾಸಾದವರು ಶ್ರೀ ಪ್ರಯಾಗ ಒಬ್ಬರೇ ಕನ್ನಡಿಗರೆಂದು ೧೯ ನೇ ತಾ. ನ ಕರ್ಮವೀರದಲ್ಲಿ ಪ್ರಕಟವಾಗಿತ್ತು. ಆದರೆ ಈ ಪರೀಕ್ಷೆಯಲ್ಲಿ ಕೆಳಗೆ ಕಾಣಿಸಿದವರು ಕೂಡ ೧ ನೇ ವರ್ಗದಲ್ಲಿಯೇ ಉತ್ತೀರ್ಣರಾಗಿರುವರೆಂದು ತಿಳಿಸಲು ಆನಂದವಾಗುತ್ತದೆ. ೧) ಶ್ರೀ ವಿ. ಕೆ. ಚಿಟ್ನಿ (ಧಾರವಾಡ) ೨) ಶ್ರೀ ಜಿ. ಆರ್. ಕುಲಕರ್ಣಿ (ವಿಜಾಪುರ)

ಮದ್ರಾಸ

ತನ್ನ ಅನುಮತಿಯನ್ನು ಪಡೆಯದೆ ಮದ್ರಾಸ ಪೋಲೀಸರು ಹೈದರಾಬಾದ ಸಂಸ್ಥಾನದಲ್ಲಿ ಕಾಲಿಡಬಾರದೆಂದು ಹೈದರಾಬಾದ ಸರಕಾರದವರು ಪ್ರತಿಬಂಧಿಸಿರುವರೆಂದು ಮದ್ರಾಸ ಶಾಸನ ಸಭೆಯಲ್ಲಿ ತಾ. ೨೬ರಂದು ಸಭಾಧುರೀಣರಾದ ಶ್ರೀ. ಬಿ. ಗೋಪಾಲರೆಡ್ಡಿಯವರು ತಿಳಿಸಿದರು.

ಮದ್ರಾಸ ಶಾಸನ ಸಭೆಯಲ್ಲಿ ತಾ. ೨೬ರಂದು ವಿರೋಧಿ ಪಕ್ಷದ ಧುರೀಣರಾದ ಶ್ರೀ. ಮಹಮ್ಮದ ಇಸ್ಮಾಯಿಲರು ಪ್ರತ್ಯೇಕ ಮತದಾರ ಸಂಘಗಳು ಇರಲೇಬೇಕೆಂದು ಪ್ರತಿಪಾದಿಸಿದರು.

ಆಂಧ್ರ, ಕರ್ನಾಟಕ, ಕೇರಳ ಮತ್ತು ತಮಿಳು ನಾಡುಗಳ ರಚನೆಗೆ ಅಸ್ಪದ ಕೊಡದಿರುವದರಿಂದ ದಕ್ಷಿಣದಲ್ಲಿ ಅನೇಕರಿಗೆ ನಿರಾಶೆಯಾಗಿದೆಯೆಂದೂ ಭಾಷಾವಾರ ವಿಭಜನೆಯ ಬಗ್ಗೆ ಘಟನಾ ಸಮಿತಿಯು ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದೂ ಶ್ರೀ. ಗೋಪಾಲರೆಡ್ಡಿಯವರು ಮದ್ರಾಸ ಶಾಸನ ಸಭೆಯಲ್ಲಿ ತಾ. ೨೬ರಂದು ಹೇಳಿದರು.

ಎಂ. ಎಸ್. ಎಂ. ರೇಲ್ವೆಯವರು ಒಂದು ಪ್ರಕಟನೆ ಹೊರಡಿಸಿ ರೇಲ್ವೆ ಧಾನ್ಯದ ಅಂಗಡಿಗಳ ಬಗ್ಗೆ ಹೀಗೆ ಹೇಳಿದ್ದಾರೆ:— ರೇಲ್ವೆ ಧಾನ್ಯದ ಅಂಗಡಿಗಳ ವಿಚಾರಣಾ ಸಮಿತಿಯ ಅಧ್ಯಕ್ಷ ಶ್ರೀ. ಮೋಹನಲಾಲ ಸಕ್ಸೇನಾ, ಕೆ. ಸಂತಾನಂ ಮತ್ತು ಖಂಡುಬಾಯಿ ದೇಸಾಯಿ ಮೊದಲಾದವರು ಪ್ರಮುಖ ಸ್ಟೇಶನ್ನುಗಳಿಗೆ ಭೆಟ್ಟಿಕೊಟ್ಟು ಅಲ್ಲಿಯ ಅಂಗಡಿಗಳಿಂದ ಸರಕು ಪಡೆಯುವ ಕೆಲಸಗಾರರನ್ನೂ ಕಂಡರು. ಅವರ ಕುಂದುಕೊರತೆಗಳನ್ನು ವಿಚಾರಿಸಿಕೊಂಡರು ರೇಲ್ವೆ ಶಾಖಾಧಿಕಾರಿಗಳೊಡನೆ ಈ ಬಗ್ಗೆ ಮಾತುಕತೆ ನಡೆಸಿದರು. ಈ ಸಮಿತಿಯವರು ಕೊನೆಯ ನಿರ್ಣಯ ಕೈಕೊಂಡಿಲ್ಲವಾಗಿ ಈ ಬಗ್ಗೆ ಯಾರೂ ಇಲ್ಲದ ಊಹಾಪೋಹದಲ್ಲಿ ತೊಡಗಬಾರದು ಎಂದು ಮುಂತಾಗಿ ಹೇಳಿದೆ.

ಬಿಜವಾಡದ ಕಮ್ಯುನಿಸ್ಟ ಪಕ್ಷದ ಸಂಸ್ಥೆಯಾದ ಆಂಧ್ರ ಮಹಿಳಾ ಸಂಘದ ೧೫ ಸ್ತ್ರೀಯರು, ಈ ಸಂಸ್ಥೆಯು ಪರವಾಗಿ ಕರೆಯಲಾದ ಮಹಿಳಾ ಪರಿಷತ್ತಿಗೆ ಹಾಕಿದ ಪ್ರತಿಬಂಧಾಜ್ಞೆ ಮೀರಿಹು ಮೆರವಣಿಗೆ ಹೊರಡಿಸಿದ್ದರು. ಇವರನ್ನು ಚದುರಿಸಲು ತಾ ೨೪ ರಂದು ಪೋಲೀಸರು ಅಶ್ರುವಾಯು ಉಪಯೋಗಿಸಬೇಕಾಯ್ತೆಂದೂ ಆ ಮೇಲೆ ಪೋಲೀಸರು ಮೆರವಣಿಗೆಯಲ್ಲಿ ಭಾಗವಹಿಸಿದ ೭೦ ಸ್ತ್ರೀಯರನ್ನು ಸೆರೆಹಿಡಿದರೆಂದೂ ತಿಳಿಯುತ್ತದೆ.

ಹಿಂದುಸ್ಥಾನದ ಉದ್ಯೋಗ ಮತ್ತು ಪೂರೈಕೆ ಮಂತ್ರಿ ಡಾ. ಶ್ಯಾಮಪ್ರಸಾದ ಮುಖರ್ಜಿಯವರು ತಾ. ೨೩ ಕ್ಕೆ ಮದ್ರಾಸಕ್ಕೆ ಆಗಮಿಸಿದರು.

ಕಳೆದ ೩ ತಿಂಗಳಿಂದ ಕೋಯಿಮತ್ತೂರದ ಬಟ್ಟೆ ಕೆಲಸಗಾರರು ಹೂಡಿದ ಸಂಪಿನ ಪರಿಸ್ಥಿತಿಯು ಸುಧಾರಿಸಹತ್ತಿದೆ. ಇನ್ನು ೨—೩ ದಿನಗಳಲ್ಲಿ ೩೦ ಗಿರಣಿಗಳು ಕೆಲಸವನ್ನು ಪ್ರಾರಂಭಿಸುವವೆಂದು ಅಧಿಕೃತವಾಗಿ ತಿಳಿಯುತ್ತದೆ ಎಂದು ಮುಂತಾಗಿ ಓರ್ವ ಸರಕಾರಿ ವಕ್ತಾರರು ಹೇಳಿದರು. ಸಂಪು ಹೂಡಿದ ೩೫ ಗಿರಣಿಗಳಲ್ಲಿ ೧೫ ಗಿರಣಿಗಳು ಈಗ ಕೆಲಸ ಪ್ರಾರಂಭಿಸಿವೆ. ಈ ಸಂಪಿನ ಮೂಲಕ ೪೦ ಸಾವಿರ ಬೇಲ ಅರಳೆ ಮತ್ತು ೫೦ ಲಕ್ಷ ಗಜ ಅರಿವೆಯ ಹಾನಿ ತಟ್ಟಿದೆಯೆಂದು ಅಂದಾಜು ಮಾಡಲಾಗಿದೆ.

ಮದ್ರಾಸದ ಮಂತ್ರಿಗಳಾದ ಕೆ. ಮಾಧವ ಮೆನನ್, ಕೆ. ಚಂದ್ರಮೌಳಿ ಮತ್ತು ಎಚ್. ಸೀತಾರಾಮರೆಡ್ಡಿ ಅವರು ಘಟನಾ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಇದರಿಂದ ಮದ್ರಾಸದ ಮಂತ್ರಿಗಳಲ್ಲಿ ಕೇವಲ ಮುಖ್ಯ ಮಂತ್ರಿ ಮತ್ತು ಅರ್ಥಿಕ ಮಂತ್ರಿಗಳು ಘಟನಾ ಸಮಿತಿಯ ಸದಸ್ಯರಿದ್ದಂತಾಯಿತು.

ಲೆಫ್ಟನಂಟ ಜನರಲ್ ಕೆ. ಎಂ. ಕರಿಯಪ್ಪನವರು (ಕನ್ನಡಿಗರು) ತಾ. ೨೩ರಂದು ಸಿಮುಲಾ ಗುಡ್ಡ ಪ್ರದೇಶದಲ್ಲಿಯ ಸೈನ್ಯ ಕೇಂದ್ರಗಳಿಗೆ ಭೆಟ್ಟಿಕೊಟ್ಟರು. ಜಮ್ಮು ಕಾಶ್ಮೀರಗಳಲ್ಲಿ ಗಂಡಸರು ಅತ್ತ ರಣರಂಗದಲ್ಲಿ ಇಳಿದಾಗ ಇತ್ತ ಹೆಂಗಳೆಯರು ಶಸ್ತ್ರಾಸ್ತ್ರಗಳಲ್ಲಿ ಶಿಕ್ಷಣಪಡೆದು ತಂತಮ್ಮ ಮನೆಗಳನ್ನು ಶತ್ರುಗಳಿಂದ ಸಂರಕ್ಷಿಸಲು ಸಿದ್ಧರಾಗಿರುವರು ಎಂದು ಮುಂತಾಗಿ ಅವರು ಒಂದು ...

ಹೊಸದಿಲ್ಲಿ

ಜಮ್ನೋತ್ರಿ, ಗಂಗೋತ್ರಿ, ಪಂಚಪ್ರಯಾಗ, ಅಲಕನಂದಾ, ಕೇದಾರನಾಥ, ಬದ್ರಿನಾರಾಯಣ, ಕೈಲಾಸ, ಮಾನಸಸರೋವರ ಮೊದಲಾದ ಹಿಮಾಲಯದ ಪ್ರಸಿದ್ಧ ಸ್ಥಳಗಳಲ್ಲಿ ಹಾಗೂ ಕ್ಷೇತ್ರಗಳಲ್ಲಿ ಮಹಾತ್ಮಾ ಗಾಂಧಿಯವರ ಉಳಿದ ಚಿತಾಭಸ್ಮವನ್ನು ವಿಸರ್ಜಿಸಲು, ಮಹಾತ್ಮರೊಡನೆ ಅನೇಕ ವರ್ಷಗಳಿಂದ ಸಂಬಂಧವಿದ್ದ ಶ್ರೀ. ಕೃಷ್ಣ ಮತ್ತು ಆಶ್ರಮವಾಸಿ ಶ್ರೀ. ಸುರೇಂದ್ರ ಜಿ ಮೊದಲಾದವರು ಹಿಮಾಲಯಕ್ಕೆ ಹೋಗುವರು. ಚಿತಾಭಸ್ಮವು ಹಿಮಾಲಯ ಕ್ಷೇತ್ರಗಳಲ್ಲಿ ವಿಸರ್ಜಿಸಲ್ಪಟ್ಟ ನಂತರ ಮಹಾತ್ಮರ ಉತ್ತರಕ್ರಿಯೆಯು ಮುಗಿದಂತಾಗುವದು.

ನಾವು ಬಂಡವಲದಾರರ ವೈರಿಗಳಲ್ಲ. ಆದರೆ ೧೦ ವರ್ಷಗಳಲ್ಲಿ ಬಂಡವಲಶಾಯಿತ್ವವನ್ನು ನಿರ್ಮೂಲ ಮಾಡಲು ನಿಶ್ಚಯಿಸಿದ್ದೇವೆ ಎಂದು ಹಿಂದುಸ್ಥಾನ ಸರಕಾರದ ಕೂಲಿಕಾರ ಮಂತ್ರಿ ಶ್ರೀ. ಜಗಜೀವನರಾಮರು ರಚ್ನಾತ್ಮಕ ಕಾರ್ಯಕ್ರಮವು ಸಲ್ಲಿಸಿದ ಮಾನಪತ್ರಕ್ಕೆ ಉತ್ತರ ಕೊಡುತ್ತ ಹೇಳಿದರು. ಸ್ವರಾಜ್ಯ ಸಿಕ್ಕರೂ ಜನಸಾಮಾನ್ಯರ ಆಶೆ ಆಕಾಂಕ್ಷೆಗಳು ಕೈಗೂಡಿಲ್ಲವೆಂದೂ ಕೂಲಿಕಾರರ ಬೇಡಿಕೆಗಳನ್ನು ಪೂರೈಸಲು ಅಧಿಕ ಉತ್ಪಾದನವೇ ಮದ್ದೆಂದೂ ಸಂಸ್ಥಾನಾಧಿಪರು ಕಾಲಕ್ಕೆ ತಕ್ಕಂತೆ ವರ್ತಿಸದ್ದು ಸಂತೋಷದಾಯಕವೆಂದೂ ಹೇಳಿದ್ದಾರೆ.

ಮೇ. ತಾ. ೧ ಕೂಲಿಕಾರರ ದಿನವೆಂದು ಪಾಶ್ಚಿಮಾತ್ಯ ರಾಷ್ಟ್ರಗಳು ಆಚರಿಸುತ್ತಿದ್ದು ಭಾರತದಲ್ಲಿ ಅದು ಅಷ್ಟು ಪ್ರಚಾರದಲ್ಲಿಲ್ಲ. ಆದರೂ ಈ ದಿನಾಚರಣೆಗೆ ಇತ್ತೀಚೆ ಮಹತ್ವ ಉಂಟಾಗಿರುವದರಿಂದ ಸರ್ಕಾರವು ಸಹಾನುಭೂತಿ ತೋರುವದೆಂದೂ ಕೂಲಿಕಾರರು ಪ್ರತಿಯಾಗಿ ಸರಕಾರದ ಅಧಿಕ ಉತ್ಪಾದನೆಯ ಧೋರಣೆಯನ್ನು ಎತ್ತಿಹಿಡಿದು ಸಹಕರಿಸಬೇಕೆಂದೂ ಈ ಸಂಬಂಧದ ಅಧಿಕಾರಿಗಳಿಗೆ ಮೇ. ೧ಕ್ಕೆ ಬಿಡುವು ಕೊಡಬೇಕೆಂದು ತಿಳಿಸಲಾಗಿದೆಯೆಂದೂ ಖಾಸಗಿ ಸಂಸ್ಥೆಗಳಾದರೂ ಬಿಡುವು ಕೊಡಬೇಕೆಂದೂ ಕೇಂದ್ರ ಸರಕಾರವು ಒಂದು ಪ್ರಕಟನೆ ಹೊರಡಿಸಿದೆ.

ಪಶ್ಚಿಮ ಪಾಕಿಸ್ತಾನದಿಂದ ಬಂದ ಸುಮಾರು ೨ ಲಕ್ಷ ನಿರಾಶ್ರಿತರಿಗೆ ಆಶ್ರಯ ಕೊಟ್ಟ ಕುರುಕ್ಷೇತ್ರ ನಿರಾಶ್ರಿತ ಶಿಬಿರವನ್ನು ಮುಚ್ಚಿ ಅದರಲ್ಲಿದ್ದ ನಿರಾಶ್ರಿತರನ್ನು ಪೂರ್ವ ಪಂಜಾಬದಲ್ಲೆಲ್ಲ ಕಳಿಸಿಬಿಡಲಾಗುವದೆಂದು ತಿಳಿಯುತ್ತದೆ. ಹಿಂದುಸ್ಥಾನದಲ್ಲಿಯೇ ಅತಿದೊಡ್ಡದಾದ ಈ ಶಿಬಿರವನ್ನು ಬೇಸಿಗೆಯ ಬೇಗೆಯ ಮೂಲಕ ಮತ್ತು ಸಾರ್ವಜನಿಕ ಆರೋಗ್ಯದ ವ್ಯವಸ್ಥೆಯ ಅಭಾವದ ಮೂಲಕ ಸರಕಾರದವರು ಮುಚ್ಚಿಬಿಡಲು ನಿರ್ಧರಿಸಿದ್ದಾರೆ. ಸುಮಾರು ಒಂದು ತಿಂಗಳಲ್ಲಿ ಈ ಶಿಬಿರವನ್ನು ಮುಚ್ಚಿಬಿಡಬಹುದು.

ಪಾಲಿಸ್ತಾನದ ಗ್ರ್ಯಾಂಡ ಮುಫ್ತಿಯ ಪ್ರತಿನಿಧಿಯೆನಿಸಿದ ಸಾಲೆ ಎಶಾಮೆ ಇವರಿಗೆ ಹಿಂದುಸ್ಥಾನಕ್ಕೆ ಬಂದು ಹಿಂದೀ ಮುಸಲ್ಮಾನರಿಂದ ಪಾಲಿಸ್ತಾನ ಅರಬರಿಗೆ ಸಹಾಯ ಪಡೆಯಲು ಹಿಂದುಸ್ಥಾನ ಸರಕಾರದವರು ಪಾಸಪೋರ್ಟ ಕೊಡಲು ನಿರಾಕರಿಸಿರುವರೆಂದು ತಿಳಿದುಬಂದಿದೆ.

೭೦೦ ಸೆರೆಯಾಳುಗಳ ಹೊರತಾಗಿ ಪೂರ್ವ ಪಂಜಾಬದ ಎಲ್ಲ ಸೆರೆಯಾಳುಗಳನ್ನು ಸೆರೆಯಾಳುಗಳ ವಿನಿಮಯದ ಒಡಂಬಡಿಕೆಯ ಮೇರೆಗೆ ಪೂರ್ವ ಪಂಜಾಬ ಸರಕಾರವು ಪಾಕಿಸ್ತಾನಕ್ಕೆ ಕಳುಹಿಸಿಕೊಟ್ಟಿದೆ.

ಸಿಲೋನದಲ್ಲಿ ಹಿಂದುಸ್ಥಾನದ ಹಾಯಕಮೀಶನರರಾಗಿರುವ ಶ್ರೀ ವಿ. ವಿ. ಗಿರಿಯವರು ಹೊಸದಿಲ್ಲಿಯ ವಾಯ್. ಎಂ. ಸಿ. ಎ ಭವನದಲ್ಲಿ ಮಾತನಾಡುತ್ತ, ಯುಕ್ತರಾಷ್ಟ್ರಸಂಘವು ಲೀಗ ಅಫ್ ನೇಶನ್ಸದ ಮರಿಯಾಗಿದೆ. ಇದರಲ್ಲಿ ಬಲಾಬಲ ರಾಜಕಾರಣದ ಕೈವಾಡ ನಡೆದಿದೆ. ನ್ಯಾಯ, ಸಮತೆ, ಸತ್ಯ ಇವುಗಳಿಗೆ ಯುಕ್ತರಾಷ್ಟ್ರಸಂಘದಲ್ಲಿ ಸ್ಥಾನವೇ ಇಲ್ಲ. ಕಾರಣ ಭಾರತವು ಯುಕ್ತರಾಷ್ಟ್ರ ಸಂಘದಿಂದ ಹೊರಬೀಳಬೇಕು ಎಂದು ಮುಂತಾಗಿ ಹೇಳಿದರು.

ಪಾಕಿಸ್ತಾನ

ಸಿಂಧದ ಮುಖ್ಯ ಮಂತ್ರಿಗಳಾದ ಮಹಮ್ಮದ ಅಯೂಬ ಖುಹ್ರೋರವರನ್ನು ತಾ. ೨೬ ರಂದು ಅವರ ಮುಖ್ಯ ಮಂತ್ರಿ ಪದದಿಂದ ತೆಗೆದುಹಾಕಲಾಯಿತು. ಪಾಕಿಸ್ತಾನದ ಗವ್ಹರ್ನರ ಜನರಲ್ಲರ ಆದೇಶದಂತೆ ಇವರನ್ನು ತೆಗೆದುಹಾಕಲಾಗಿದೆಯೆಂದು ಸಿಂಧ ಗವ್ಹರ್ನರರ ಭವನದಿಂದ ಹೊರಟ ಸರಕಾರೀ ಪ್ರಕಟನೆಯಲ್ಲಿ ಹೇಳಲಾಗಿದೆ. ಖುಹ್ರೋ ಅವರ ಮೇಲೆ ಹೊರಿಸಲಾದ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ಒಂದು ವಿಶೇಷ ನ್ಯಾಯಾಲಯವನ್ನು ನೇಮಿಸಲಾಗುವದೆಂದು ...

ಕರ್ನಾಟಕ

ಧಾರವಾಡ

ಹುಬ್ಬಳ್ಳಿಯ ಸಿಟಿ ಸರ್ವೆಯರಾಗಿದ್ದ ಶ್ರೀ ಎಸ್. ಕೆ. ಪಾಟೀಲರ ಮೇಲೆ ಲಂಚ ಪಿರ್ಯಾದಿನ ಪೋಲೀಸರು ಹಾಕಿದ ಖಟ್ಲೆಯಲ್ಲಿ ಅವರು ಸಂಪೂರ್ಣ ನಿರ್ದೋಷಿಗಳೆಂದು ಜಿಲ್ಲಾ ಮ್ಯಾಜಿಸ್ಟ್ರೇಟರು ತೀರ್ಪು ಕೊಟ್ಟರು.

ಗದಗ ಎನ್. ಸಿ. ಮಿಲ್ಲನ್ನು ಮುಚ್ಚಿದ್ದರ ಸಂಬಂಧವಾಗಿ ತಮ್ಮ ಅಭಿಪ್ರಾಯವನ್ನು ಕೊಲ್ಲಾಪೂರದಲ್ಲಿಯ ಔದ್ಯೋಗಿಕ ನ್ಯಾಯಾಲಯದ ಮುಂದೆ ಮುಂದಿನ ತಿಂಗಳು ೧೪ ಕ್ಕೆ ಮಂಡಿಸಬೇಕೆಂದು ಮುಂಬಯಿ ಸರಕಾರವು ಗಿರಣಿಯ ವ್ಯವಸ್ಥಾಪಕರಿಗೆ ವಿಧಿಸಿದೆ.

ಗಾಂಧಿ ಸ್ಮಾರಕ ನಿಧಿಗೆ ನೂಲಿನ ಕಾಣಿಕೆ ಕೊಡುವವರಿಗಾಗಿ ವ್ಯವಸ್ಥೆ ಮಾಡಲಾಗಿದೆ. ಜಿಲ್ಲೆಯ ಚರಖಾ ಸಂಘದ ಕೇಂದ್ರಗಳಲ್ಲಿ ನೂಲಿನ ಕಾಣಿಕೆ ಕೊಟ್ಟು ಪಾವತಿ ಪಡೆಯಬಹುದಾಗಿದೆಂದು ಅ. ಭಾ. ಚ. ಸಂಘದ ಕರ್ನಾಟಕ ಶಾಖೆಯ ಮಂತ್ರಿಗಳು ಪ್ರಕಟಿಸುತ್ತಾರೆ.

ಮುಂಡಗೋಡ ತಾಲೂಕಿನ ಇಂದೂರಲ್ಲಿ ನಿರಾಶ್ರಿತರಿಗೆ ಭತ್ತದ ಭೂಮಿಯನ್ನು ಕೊಟ್ಟು ಅವರಿಗೆ ಪುನರ್ನಿವೇಶನದ ವ್ಯವಸ್ಥೆ ಮಾಡಲು ಮುಂಬಯಿ ಸರಕಾರದವರು ಯೋಚಿಸಿದ್ದಾರೆ. ಈ ಯೋಜನೆಯ ಲಾಭ ಪಡೆಯಲು ೨೧೫ ಸಿಂಧೀ ನಿರಾಶ್ರಿತರು ಹುಬ್ಬಳ್ಳಿಗೆ ಕಳೆದ ವಾರ ಬಂದು ಮುಂಡಗೋಡಕ್ಕೆ ಹೋದರು.

ಬೆಳಗಾವಿ

ಟಿಳಕವಾಡಿ (ಬೆಳಗಾವಿ) ಯಲ್ಲಿನ ದಕ್ಷಿಣ ಭಾರತೀಯರ ಕ್ಲಬ್ಬಿನಲ್ಲಿ ಶ್ರೀ ದೇಶಪಾಂಡೆ ಗಂಗಾಧರರಾಯರು ೧೮ ಕ್ಕೆ ಪಂ. ನೆಹರೂರ ಭಾವಚಿತ್ರದ ಅನಾವರಣ ಮಾಡಿದರು. ಎಲ್ಲರೂ ಅವರ ಅನುಕರಣ ಮಾಡಬೇಕೆಂದು ರಾಯರು ಉಪದೇಶಿಸಿದರು. ಶ್ರೀ ಮುಂಡಗಿ ವಕೀಲರು ಅಧ್ಯಕ್ಷತೆ ವಹಿಸಿದ್ದರು.

ಬೆಳಗಾವಿಯ ಪುರಾತನ ಕಾಲ್ಪಲದ ಪರೇಡ ಬೈಲಿನಲ್ಲಿ ಮಹಾರಾಷ್ಟ್ರದ ಸಂಸ್ಥಾಪಕರಾದ ಶಿವಾಜಿ ಮಹಾರಾಜರ ಮೂರ್ತಿಯ ಅಡಿಗಲ್ಲು ಕೂಡಿಸುವ ಸಮಾರಂಭ ದೇವಾಸದ(ಹಿರಿ)ಮಹಾರಾಜರ ನೇತೃತ್ವದಲ್ಲಿ ೨೨ ಕ್ಕೆ ನಡೆಯಿತು.

ಹುದಲಿಯಲ್ಲಿ ೧೯ ಕ್ಕೆ ಶ್ರೀಮತಿ ಗಂಗವ್ವಾ ಕುಂದರಗಿಯವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿ ಸೌ. ಪದ್ಮಾವತಿಬಾಯಿ ಅಂಗಡಿ ಇವರ ಭಾಷಣವಾಯಿತು. ಅವರ ಹಸ್ತದಿಂದಲೆ ಕಸ್ತೂರಬಾ ಬಳಗದ ಸ್ಥಾಪನೆಯಾಯಿತು. ಸೌ. ಶಿವಕಾಂತವ್ವ ಪಾಟೀಲರು ಅಧ್ಯಕ್ಷರು, ಶಾಂತಾಬಾಯಿ ದೇಶಪಾಂಡೆ ಇವರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು.

ವಿಜಾಪುರ

ಬಾದಾಮಿಯ ಸರಾಫಿ ವ್ಯಾಪಾರಸ್ಥರಾದ ಶ್ರೀ ವಿನಾಯಕ ಪಾಂಡುರಂಗಪಾಯಕರು ತಮ್ಮ ಅಂಗಡಿಯಲ್ಲಿ ಪುನಃ ಮುದ್ರೆಯಿಲ್ಲದ ತೂಕ ಅಳತೆಗಳನ್ನು ಇಟ್ಟುಕೊಂಡ ಬಗ್ಗೆ ೨೫ ರೂಪಾಯಿಗಳ ದಂಡ ವಿಧಿಸಲಾಯಿತು.

ಬಾಗಲಕೋಟೆ ತಾಲೂಕು ಫೌಜದಾರ ಶ್ರೀ ಬಾವೂಕ ಇವರು ಇರುವ ಮನೆಯ ವಹಿವಾಟದಾರ ಶ್ರೀ ವೆಂಕಣ್ಣ ಕೊರಪಾಲಿ ಇವರು ಮನೆಯ ಬಾಡಿಗೆ ಕೇಳಲಿಕ್ಕೆ ಹೋದಾಗ ಅವರನ್ನು ಶ್ರೀ ಬಾವೂಕ ಮತ್ತು ಪೋಲೀಸರು ಕೂಡಿಕೊಂಡು ಚೆನ್ನಾಗಿ ಥಳಿಸಿ ಬಂಧಿಸಿ ಕೂಡಿಸಿದ್ದರೆಂದೂ ಅದೇ ರಾತ್ರಿ ಅವರ ವಕೀಲರಾದ ಶ್ರೀ ಜಿ. ಬಿ. ಧಾರವಾಡಕರ ಇವರು ಅವರನ್ನು ಬಿಡಿಸಿಕೊಂಡು ಬಂದರೆಂದೂ ತಿಳಿಯುತ್ತದೆ. ಈ ಬಗ್ಗೆ ಶ್ರೀ ಕೊರಪಾಲಿ ಇವರು ರೆಸಿಡೆಂಟ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಫಿರ್ಯಾದಿ ಮಾಡಿರುವರೆಂದು ತಿಳಿಯುತ್ತದೆ.

ಮುಧೋಳದಿಂದ ಏಳು ಮೈಲುಗಳ ಮೇಲಿರುವ ಮುಂಟೂರದಲ್ಲಿ ಇದೇ ಮೇ ೧ ರಿಂದ ೧೫ ದಿನಗಳ ವರೆಗೆ ಕಾಂಗ್ರೆಸ ಸೇವಾದಳದ ಶಿಕ್ಷಣ ಶಿಬಿರವು ಪ್ರಾರಂಭವಾಗಲಿದೆಯೆಂದು ಶ್ರೀ ಹನುಮಂತ ವೆಂಕಪ್ಪ ಮುಂಗಳೂರು ತಿಳಿಸುತ್ತಾರೆ.

ಬಳ್ಳಾರಿ

ಬಳ್ಳಾರಿ ಮ್ಯುನಿಸಿಪಾಲಿಟಿಯ ಹೊಸ ಲಾರಿಯೊಂದು ೧೯ ಕ್ಕೆ ಡಿಜಲ್ ಎಣ್ಣೆಯನ್ನು ಒಯ್ಯುತ್ತಿದ್ದಾಗ ಕಲೆಕ್ಟರರ ಕಂಪೌಂಡಿನಿಂದ ಒಂದು ಫರ್ಲಾಂಗು ದೂರದಲ್ಲಿರುವ ರೇಸಸಿಂಗ ಬ್ರೋಕಿಯ ಹತ್ತಿರ ಉರುಳಿಬಿದ್ದು ೭ ಕೂಲಿಕಾರರಿಗೆ ಗಾಯಗಳಾದವು. ಅವರಲ್ಲಿ ಒಬ್ಬನು ಸತ್ತನು.

ಆದವಾನಿ ಆಲೂರು ರಾಯದುರ್ಗ ತಾಲೂಕುಗಳ ಕರ್ನಾಟಕ ಮಹಾಸಭೆಯನ್ನು ಎಮ್ಮಿಗನೂರಿನಲ್ಲಿ ಇದೇ ಮೇ ೧೫ ರೊಳಗಾಗಿ ಕರೆಯಬೇಕೆಂದು ನಿರ್ಧರಿಸಲಾಗಿದೆ. ಶ್ರೀ ಕೆ. ಆರ್. ಕಾರಂತರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಕೆ. ಸಿ. ರೆಡ್ಡಿಯವರನ್ನು ಉದ್ಘಾಟಕರನ್ನಾಗಿಯೂ ಕರೆಯಬೇಕೆಂದು ಯೋಚಿಸಲಾಗಿದೆ.

ಕನ್ನಡ ಸಂಸ್ಥಾನ

ಕೊಲ್ಹಾಪುರ ಶಾಸನ ಸಭೆಯ ಸಂಬಂಧದಲ್ಲಿ ನಡೆದ ಚುನಾವಣೆಯಲ್ಲಿ ಪ್ರೌಢ ಮತದಾನ ಪದ್ಧತಿಯನ್ನನುಸರಿಸಲಾಗುವದೆಂದು ಕೊಲ್ಹಾಪುರ ಆಡಳಿತದಾರರಾದ ಕ್ಯಾ. ನಂಜಪ್ಪನವರು ಒಂದು ಸಂದರ್ಶನದಲ್ಲಿ ಹೇಳಿದರು. ಒಕ್ಕೂಟ ಪಾರ್ಲಿಮೆಂಟಿಗೆ ಸಂಸ್ಥಾನದ ಪ್ರತಿನಿಧಿಗಳನ್ನು ಆರಿಸುವವರಲ್ಲಿಯೂ ಇದೇ ಪದ್ಧತಿಯನ್ನನುಸರಿಸುವ ಸಿದ್ಧತೆಗಳು ನಡೆದಿವೆಯೆಂದೂ ಅವರು ಹೇಳಿದರು.

ಗಲಭೆಗಳಿಂದ ಸಂತ್ರಸ್ತರಾದವರಿಗೆ ಮುಂಬಯಿ ಸರಕಾರದವರಂತೆ ಕೊಲ್ಹಾಪುರ ಸಂಸ್ಥಾನ ಸರಕಾರದವರೂ ತೆರಿಗೆಯಲ್ಲಿ ಆ ಪ್ರಮಾಣದಲ್ಲಿ ಸೂಟುಬಿಡುವರೆಂದೂ ಆಡಳಿತದಾರ ಕ್ಯಾ. ನಂಜಪ್ಪನವರು ಹೇಳಿದರು. ಮುಂಬಯಿ ಹೊಲ ಸಾಗುವಳಿ ಕಾಯದೆಯನ್ನು ಕೊಲ್ಹಾಪುರ ಸಂಸ್ಥಾನದಲ್ಲಿ ಜಾರಿಯಲ್ಲಿ ತರುವ ವಿಚಾರವನ್ನು ಅವರು ನಡೆಸಿರುವರಂತೆ.

ದಕ್ಷಿಣ ಕನ್ನಡ

ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾದ ಶ್ರೀ ಜಿನರಾಜ ಹೆಗ್ಗಡೆಯವರು ಹಿಂದುಸ್ಥಾನದ ಮುಖ್ಯ ಮಂತ್ರಿಗಳಾದ ಪಂಡಿತ. ಜವಾಹರಲಾಲರಿಗೆ ತಂತಿಯನ್ನು ಕಳಿಸಿ ಭಟಕಳವನ್ನು ಮೈಸೂರಿಗೆ ಕೊಡಕೂಡದೆಂದೂ ಹಾಗೆ ಮಾಡುವದು ಒಕ್ಕೂಟ ಕರ್ನಾಟಕ ಹಾಗೂ ಅದರ ಏಕೀಕರಣ ದೃಷ್ಟಿಯಿಂದ ವಿಘಾತಕವಾಗಿದೆಯೆಂದೂ ಬಿನ್ನವಿಸಿಕೊಂಡಿರುವರು.

ದಕ್ಷಿಣ ಕನ್ನಡ ಮತ್ತು ಕೊಡಗು ಅಡಿಕೆ ಬೇಸಾಯಗಾರರ ಸಂಘದ ವಾರ್ಷಿಕ ಮಹಾಸಭೆ ೨೦ ನೇ ತಾರೀಕು ಪುತ್ತೂರಿನಲ್ಲಿ ಬಿ. ಪ್ರಭಾಕರರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಅಡಿಕೆಯ ಬೇಸಾಯಗಾರರು ತಮ್ಮ ಸರಕಿಗೆ ಸರಿಯಾದ ಪೇಟೆ ಸಿಕ್ಕುವಂತೆ ನೋಡಿಕೊಳ್ಳಬೇಕು. ಮತ್ತು ಇದರಲ್ಲಿ ಸಹಕಾರ ಪದ್ಧತಿಯನ್ನವಲಂಬಿಸಬೇಕೆಂದು ಮುಂತಾಗಿ ಭಾಷಣಗಳಾದವು. ಶ್ರೀ ಎಂ. ಎಸ್. ಭಿಡೆಯವರು ಮಲೆನಾಡಿನ ಅಭಿವೃದ್ಧಿಯನ್ನು ಕುರಿತು ಮಾತಾಡಿದರು.

ಅಧ್ಯಾಪಕವೃತ್ತಿಯವರು ರಾಜಕೀಯ ಸಂಘ ಸಂಸ್ಥೆಗಳ ಚುನಾವಣೆಗಳಲ್ಲಿ ಉಮೇದ್ವಾರರಾಗಿ ನಿಲ್ಲಕೂಡದೆಂಬ ಸರಕಾರದ ಹುಕುಂ ಹಿಂತೆಗೆಯುವಂತೆ ಸರಕಾರವನ್ನು ವಿನಂತಿಸುವ ಗೊತ್ತುವಳಿ ಜಿಲ್ಲಾ ಟೀಚರ್ಸ ಗಿಲ್ಡಿನ ಸಭೆಯಲ್ಲಿ ಸ್ವೀಕೃತವಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಪಾಣೆ ಮಂಗಳೂರು ಪುತ್ತೂರು ಕಟಪಾಡಿ ಉಡ್ಪಿ ಮೂಡಬಿದ್ರಿ ಕಳಿಗೆ ಮುಂತಾದ ಕೇಂದ್ರಗಳಿಗೆ ಭಾರತ ಸರಕಾರದ ತಾಳೆ ಬೆಲ್ಲದ ತಜ್ಞರು ಭೆಟ್ಟಿ ಕೊಟ್ಟು ಅದರ ವಿಭಾಗದ ಬಗ್ಗೆ ವಿಚಾರ ವಿನಿಮಯ ಮಾಡಿದರು ದಕ್ಷಿಣ ಭಾರತ ಸಂಸ್ಥಾನಗಳಿಗಾಗಿ ಒಂದು ತರಬೇತಿ ಕೇಂದ್ರವನ್ನು ಈ ಜಿಲ್ಲೆಯಲ್ಲಿ ತೆರೆಯುವ ಕುರಿತಾಗಿ ಸ್ಥಳದ ಆಯ್ಕೆಗಾಗಿ ಇವರು ಬಂದಿರುವರಂತೆ.

ಉತ್ತರ ಕನ್ನಡ

ಹಳ್ಯಾಳದ ಪ್ರಸಿದ್ಧ ಕಂತ್ರಾಟದಾರರೂ ಜಮೀನದಾರರೂ ಆಗಿದ್ದ ಅಬ್ದುಲ್ ರಹಿಮಾನರು ೨೫ ನೇ ತಾರೀಕು ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಎಲ್ಲರಿಗೂ ಪ್ರಿಯರಾಗಿದ್ದರು.

ಉತ್ತರ ಕನ್ನಡ ಜಿಲ್ಲೆಗೆ ಈ ಮೊದಲು ಕೊಡಮಾಡಿದ ೨೯೦೦ ಟನ್ ಆಹಾರ ಧಾನ್ಯದ ಹೊರತಾಗಿ ಇನ್ನು ೫೦೦ ಟನ್ನ ಜೋಳವನ್ನು ಮುಂಬಯಿ ಸರಕಾರವು ಕೊಡಮಾಡಿದೆ.

ವಾರದ ಭವಿಷ್ಯ

[೧೩ನೇ ಪುಟದಿಂದ]

ಕರ್ಕ

ಪ್ರಕೃತಿ ಸಾಧಾರಣ ಹೆಂಡತಿಗೂಡ ಮೇಲಿಂದ ಮೇಲೆ ವಿರೋಧ. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ತೊಂದರೆ ಬಹಳ. ಉದ್ಯೋಗದಲ್ಲಿ ಪ್ರಗತಿ ಕಡಿಮೆ. ಲಾಭ ಕಡಿಮೆ ಆದರೆ ಪ್ರತಿಷ್ಠೆ ಉತ್ತಮ. ಸತ್ತೆ ಇಲ್ಲವೆ ಅಧಿಕಾರದಲ್ಲಿ ಹೆಚ್ಚಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಆದರೆ ಶತ್ರುಗಳ ಜೋರು ಕಾಯುವುವೇ. ಮಿತ್ರತ್ವದಲ್ಲಿ ವಿರೋಧ ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಪುಷ್ಯದ ಕೊನೆಯ ೩ ಮತ್ತು ಅಶ್ಲೇಷದ ೧ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೫-೬-೭-೮ ಅನುಕೂಲ.

ಸೂರ್ಯಗ್ರಹಣ ಈ ರಾಶಿಗೆ ೧೦ನೆಯದಾಗುವದರಿಂದ ಪ್ರತಿಷ್ಠೆ ಅಧಿಕಾರದ ಹೆಚ್ಚಳ ಶತ್ರುವಿನ ಮೇಲೆ ವಿಜಯ ಮಿತ್ರವಿರೋಧ ಮೊದಲಾದ ಫಲದೊರೆಯುವದು.

ಸಿಂಹ

ನಿಮ್ಮ ಮತ್ತು ಮಕ್ಕಳ ಪ್ರಕೃತಿ ಉತ್ತಮವೇ ಆದರೆ ಹೆಂಡತಿಯದು ಕೆಡುವದು ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಮನಸ್ಸಿನಂತೆ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ದೊಡ್ಡ ಜನರಲ್ಲಿ ಪ್ರತಿಷ್ಠೆ ಮತ್ತು ಲಾಭ ತುಂಬ. ವೆಚ್ಚ ಹೆಚ್ಚು ಆದರೆ ಅದರಲ್ಲಿಯ ಹೇತು ಸಾಧ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಕೆಲ ಕೆಲಸಗಳು ಒಡಂಬಡಿಕೆಯಿಂದಬಿಡುವಸಂಭವ. ಮಿತ್ರಸುಖ ಉತ್ತಮ. ಬುದ್ಧಿಮತ್ತೆಯ ಕೆಲಸದಲ್ಲಿ ವಿಶೇಷ ಲಕ್ಷ ಕೆಲವೊಂದು ಧರ್ಮಕೃತ್ಯ. ಪ್ರವಾಸಾದಿ ಕೆಲಸ ಮನಸ್ಸಿನಂತೆ. ಮಘಾದ ಕೊನೆಯ ೩ ಮತ್ತು ಪೂರ್ವಾದ ೧ ನೇ ಚರಣಕ್ಕೆ ತೊಂದರೆಯಿಂದ ಯಶಸ್ಸು. ತಾ. ೩—೪—೮—೯ ಅನುಕೂಲ.

ಗ್ರಹಣ ೯ ನೇದಾಗುವದರಿಂದ ಭಾಗ್ಯವೃದ್ಧಿ. ಮಿತ್ರ ಪ್ರೇಮ ಹೆಂಡತಿಗೆ ಆರೋಗ್ಯ. ಆದರೆ ವೃದ್ಧ ಮತ್ತು ಪೂಜ್ಯ ವ್ಯಕ್ತಿಗಳಿಗೆ ಕ್ಲೇಶ. ಪ್ರವಾಸದಲ್ಲಿ ವಿಘ್ನಗಳು ಇತ್ಯಾದಿ ಫಲ ದೊರೆಯುವವು.

ಕನ್ಯಾ

ಪ್ರಕೃತಿಗೆ ನಿಮ್ಮ ಮತ್ತು ಮಿತ್ರರಲ್ಲಿಯೂ ಒಬ್ಬಿಬ್ಬರಿಗೆ ಸ್ವಲ್ಪ ಕ್ಲೇಶ ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಅನುಕೂಲ ಆದರೆ ಲಾಭ ಮತ್ತು ಪ್ರತಿಷ್ಠೆ ಬಹಳ ಕಡಿಮೆ. ಧಂದೆ ಮಾಡುವವರಿಗೆ ಹಾನಿಯೇ. ವೆಚ್ಚ ಹೆಚ್ಚು ಮತ್ತು ಅದರಲ್ಲಿಯ ಹೇತು ಮಾತ್ರ ಅಸಾಧ್ಯ. ಅನೇಕರೊಡನೆ ನಿರರ್ಥಕವಾಗಿ ದ್ವೇಷವುಂಟಾಗುವ ಸಂಭವ. ಮಿತ್ರರಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಅನುಕೂಲ ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯದು. ಹಸ್ತಾದ ಕೊನೆಯ ೩ ಮತ್ತು ಚಿತ್ರಾದ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೫—೬ ಅನುಕೂಲ.

ಗ್ರಹಣ ೮ ನೆಯದಾಗುವದರಿಂದ ಪ್ರಕೃತಿಗೆ ಮತ್ತು ಗೃಹ ಸುಖಕ್ಕೆ ತೊಂದರೆ ಆದರೆ ಅವಚಿತ ಲಾಭವುಂಟುಮಾಡುವದು.

ತುಲಾ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಪ್ರಾಪಂಚಿಕ ಸುಖವೂ ಅನುಕೂಲ ಆದರೆ ಕೆಲ ವಿಷಯಗಳಲ್ಲಿ ಹೆಂಡತಿಗೂ ನಿಮಗೂ ವಿತಂಡವಾದ ನಿರರ್ಥಕ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ವರಿಷ್ಠರು ಇಲ್ಲವೆ ಆಶ್ರಯದಾತರ ಗೂಡ ಸ್ವಲ್ಪ ವಿರೋಧ ಬರುವ ಸಂಭವ. ಮಿತ್ರಸುಖ ಉತ್ತಮ ಆದರೆ ಅವರಲ್ಲಿ ಒಬ್ಬರು ಕಾಯಿಲೆ ಬೀಳುವ ಇಲ್ಲವೆ ಕೆಲ ಕಾರಣಗಳಿಂದ ಬೇಸರಗೊಳ್ಳುವ ಸರತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಕೆಲ ಸ್ಥಾವರ ಸಂಗ್ರಹ-ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೩. ೪, ೮, ೯ ಅನುಕೂಲ.

ಗ್ರಹಣ ೭ ನೆಯದಾಗುವದರಿಂದ ಹೆಂಡತಿಗೆ ಕ್ಲೇಶ ವಾದದಲ್ಲಿ ತೊಂದರೆ ಕೊಡತಕ್ಕೊಳ್ಳುವ ವ್ಯವಹಾರದಲ್ಲಿ ಹಾನಿ ಆದರೆ ಮಕ್ಕಳ ಮತ್ತು ಮಿತ್ರರ ಉತ್ಕರ್ಷದಲ್ಲಿ ಅನುಕೂಲ.

ವೃಶ್ಚಿಕ

ಹೆಂಡತಿಗಿಂತ ನಿಮ್ಮ ಮತ್ತು ಮಕ್ಕಳ ಪ್ರಕೃತಿ ಹೆಚ್ಚು ಅನುಕೂಲ. ಪ್ರಾಪಂಚಿಕ ಸುಖ ಬಹಳ ಉತ್ತಮ. ಪ್ರಿಯಜನರ ಭೆಟ್ಟಿ ಸಹವಾಸ ಮೇಲಿಂದ ಮೇಲೆ ಸ್ಥಾವರ ಜಂಗಮ ಸಂಗ್ರಹ. ಮಕ್ಕಳಲ್ಲಿ ಒಬ್ಬರ ಆಶ್ಚರ್ಯಕಾರಕ ಉನ್ನತಿ. ಉದ್ಯೋಗದಲ್ಲಿ ವಿಶೇಷ ಪ್ರಗತಿ ಬಹಳ ಹೆಚ್ಚಿನ ಪ್ರತಿಷ್ಠೆ ಆದರೆ ಲಾಭ ಬಹಳ ಕಡಮೆ. ಧಂದೆ ಮಾಡುವವರಿಗೂ ಬಹಳ ಕಡಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸ್ವತಃಕ್ಕೆ ಪ್ರತ್ಯಕ್ಷ ಲಾಭ ಕಡಿಮೆ ಆದರೆ ಶತ್ರುಗಳಿಗೆ ವಿಪರೀತ ಹಾನಿ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠಾದ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೫, ೬, ೭ ಅನುಕೂಲ.

ಗ್ರಹಣ ಈ ರಾಶಿಯವರಿಗೆ ೬ನೆಯದಾಗುವದರಿಂದ ಶತ್ರು ಮತ್ತು ಸಂಕಟ ನಾಶ. ಮಿತ್ರರಿಗೆ ಕ್ಲೇಶ. ಅಧಿಕಾರ ವೃದ್ಧಿ ಮೊದಲಾದ ಫಲಗಳು ದೊರೆವವು.

ಧನು

ಪ್ರಕೃತಿ ಉತ್ತಮ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ ಆದರೂ ಮಕ್ಕಳಿಗೆ ಕ್ಲೇಶ ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ ಆದರೆ ಪ್ರತಿಷ್ಠೆ ಕಡಿಮೆ. ವರಿಷ್ಠರ ಇಲ್ಲವೆ ಆಶ್ರಯದಾತರ ತಪ್ಪು ತಿಳಿವಳಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳಯಶಸ್ಸು ಕೆಲ ವಿಷಯಗಳ ಅನಪೇಕ್ಷಿತ ಘಟನೆಗಳು ಸಂಭವಿಸುವದರಿಂದ ನೀವು ಬಹಳ ಮಟ್ಟಿಗೆ ಪಥ್ಯದಲ್ಲಿ ಬೀಳಬೇಕಾಗುವ ಪ್ರಸಂಗ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಅನುಕೂಲ ಶ್ರವಣದ ಕೊನೆಯ ೩ ಮತ್ತು ಧನಿಷ್ಠದ ೧ನೇ ಚರಣಕ್ಕೆ ತೊಂದರೆಯಿಂದಲೇ ಯಶಸ್ಸು ತಾ ೩—೭—೮ ಅನುಕೂಲ.

ಗ್ರಹಣ ಈ ರಾಶಿಯವರಿಗೆ ೫ನೆಯ ಸ್ಥಾನದಲ್ಲಿ ಆಗುವದರಿಂದ ಲಾಭ ಮತ್ತು ಉತ್ಕರ್ಷಕ್ಕೆ ಅನುಕೂಲ ಆದರೆ ಮಕ್ಕಳಿಗೆ ಕ್ಲೇಶ ಮತ್ತು ಬುದ್ಧಿ ಭ್ರಂಶವನ್ನುಂಟುಮಾಡುವದು.

ಮಕರ

ಪ್ರಕೃತಿ ಸಾಧಾರಣವೇಹೆಂಡತಿ ಗೂಡ ವಿರೋಧ ಮತ್ತು ಮಕ್ಕಳಿಂದ ಅಪ್ರಿಯ ಕೃತ್ಯಗಳು ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಕೆಲ ಮಟ್ಟಿಗೆ ಅನುಕೂಲ. ಆದರೆ ಪ್ರತಿಷ್ಠೆ ಬಹಳ ಕೆಡುವದು. ಬಹಳ ಕೆಲಸಗಳಲ್ಲಿ ಆಯತ್ತ ಹೊತ್ತಿಗೆ ವಿಪರೀತ ಬುದ್ಧಿಯುಂಟಾಗಿ ಗೊಂದಲ ಹಾನಿ ಮತ್ತು ಲೋಕಾಪವಾದ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳಿಗೆ ಹೆಚ್ಚು ಜೋರು ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಅನುಕೂಲ. ಶ್ರವಣದ ಕೊನೆಯ ೩ ಮತ್ತು ಧನಿಷ್ಠದ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೩, ೪, ೫, ೬. ಅನುಕೂಲ.

ಗ್ರಹಣ ಈ ರಾಶಿಯವರಿಗೆ ನಾಲ್ಕನೆಯ ಸ್ಥಾನದಲ್ಲಿ ಆಗುವದರಿಂದ ಆಪ್ತ ವಿರೋಧ ಸ್ಥಾವರನಾಶ ಬಗೆ ಬಗೆಯ ಉದ್ಯೋಗಜನ್ಯ ಕಾರ್ಯಗಳು. ಮಾತೃಕ್ಲೇಶ ಮೊದಲಾದ ಫಲಗಳನ್ನು ಕೊಡುವದು.

ಕುಂಭ

ಪ್ರಕೃತಿ ಸಾಧಾರಣವೇ ಕೆಲ ವಿಷಯಗಳಲ್ಲಿ ಹೆಂಡತಿ ಚೆನ್ನಾಗಿ ಕಿವಿ ಹಿಂಡುವಳು ಮತ್ತು ಅವಹೇಲನೆ ಮಾಡುವಳು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಮಕ್ಕಳಲ್ಲಿ ಬಹುತರ ಜನರ ಉತ್ಕರ್ಷ ಉದ್ಯೋಗಳಲ್ಲಿ ಒಳ್ಳೇ ಪ್ರಗತಿ ಬಹಳ ಪ್ರತಿಷ್ಠೆ. ಅನಂಭಾವ್ಯ. ಘ ಟ ನೆ ಗ ಳು ಸಂ ಭ ವಿ ಸಿ ಅವುಗಳಲ್ಲಿ ಒಳ್ಳೇಶಿಸ್ತು ಮತ್ತುದ್ರವ್ಯ ಲಾಭ. ತುಂಬ ಮಿತ್ರರ ಉತ್ಕರ್ಷ. ಮತ್ತು ಅದರಿಂದ ಆನಂದವುಂಟಾಗುವಂತೆ ಸಹಾಯ. ಮತ್ತು ಸುಖ ವಾದದಲ್ಲಿ. ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು. ಸಿಕ್ಕ ಶತ್ರುಗಳು ಪೂರ್ಣ ಪರಾಜಯ ಹೊಂದುವರು. ಸ್ಥಾವರ ಜಂಗಮಗಳ ಹೆಚ್ಚಳ ಆದರೆ ಎರಡನೆಯವರ ಉತ್ಕರ್ಷಕ್ಕಾಗಿ ಮನಸ್ಸಿನಲ್ಲಿ ಬಹಳ ಹ್ಯಾವು. ಪ್ರವಾಸಾದಿ ಕೆಲಸ ಸುಖದ್ದು. ಆದರೆ ಶತತಾರಿಕೆಯ ಕೊನೆಯ ೩, ಮತ್ತು ಪೂರ್ವಭಾದ್ರಪದದ ೧, ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೫, ೬, ೭, ೮, ಅನುಕೂಲ.

ಗ್ರಹಣ ಈ ರಾಶಿಯವರಿಗ ೩, ನೆಯ ಸ್ಥಾನದಲ್ಲಿ ಆಗುವದರಿಂದ ಬಹಳ ಪರಾಕ್ರಮ. ಮತ್ತು ಅದರಲ್ಲಿ ಯಶಸ್ಸು. ತುಂಬ ಲಾಭ. ಶಕ್ತಿ ಮತ್ತು ಗರ್ವ ಹೆಚ್ಚಳ ಬಂಧುವರ್ಗದಲ್ಲಿ ಕ್ಲೇಶ ಮೊದಲಾದಫಲಗಳುದೊರೆಯುವವು.

ಮೀನ

ನಿಮ್ಮ ಪ್ರಕೃತಿ ಉತ್ತಮ. ಆದರೆ ಹೆಂಡತಿ ಮತ್ತು ಮಕ್ಕಳಿಗೆ ಕಿರುಕುಳ ಕಾಯಿಲೆ. ಸ್ಥಾವರದಲ್ಲಿ ಹೆಚ್ಚಳ. ಆದರೆ ರೊಕ್ಕ ಸಂಗ್ರಹದಲ್ಲಿ ಸ್ವಲ್ಪ ಹಾನಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮವೇ. ಆದರೆ ನೌಕರಿ ಮಾಡುವವರಿಗೆ ಹೆಚ್ಚು ಸುಲಭವಾಗಿ ಯಶಸ್ಸು. ಮನೆಯಲ್ಲಿ ಸ್ವಲ್ಪ ಕಲಹ. ವಾಹನ ಸುಖ ಮತ್ತು ಪ್ರಿಯಜನರ ಸಹವಾಸ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು. ಮೊದಲಿನ ಎರಡು ಮೂರು ದಿನ ಮನಸ್ಸು ಗೂಢ ಚಿಂತೆಯಿಂದ ಬಹಳ ಉದಾಸೀನಗೊಳ್ಳುವದು. ಪ್ರವಾಸಾದಿ ಕೆಲಸ ಹಿತದ್ದು. ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ೧ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೫, ೬, ೭, ೮ ಅನುಕೂಲ.

ಗ್ರಹಣ ಈ ರಾಶಿಯವರಿಗೆ ೨ ನೇ ಸ್ಥಾನದಲ್ಲಿ ಆಗುವದರಿಂದ ಧನ ಸಂಕೋಚ, ಗೃಹಕಲಹ ಮುಖಪೀಡೆ ಮೊದಲಾದ ಫಲಗಳನ್ನು ಕೊಡುವನು.

ಚಿಕ್ಕ ಕಥೆ — ಅತಿಯಾಸೆಯ ಫಲ*

ಅನುವಾದಕರು, ಕೃ. ಸು. ಸುಬ್ರಹ್ಮಣ್ಯ

ಬೇಗೂರು ಒಂದು ಚಿಕ್ಕ ಗ್ರಾಮ. ಪಕ್ಕದಲ್ಲೇ ತಿಳಿನೀರಿನ ಝರಿಯೊಂದು ಹರಿದುಕೊಂಡು ಹೋಗುತ್ತಿದೆ. ಅದರ ಬಲತಡಿಯಲ್ಲಿ ಹೂಬಿಟ್ಟು ತಂಗೊಳಿಸುತ್ತಿರುವ ಫಲಪುಷ್ಪ ವೃಕ್ಷಗಳು ಹಲವಾರಿವೆ. ದೂರದಿಂದ ನೋಡುವುದಕ್ಕೇ ಒಂದು ರೀತಿಯ ಆನಂದ. ಇಷ್ಟಾದರೂ ಹೋಗಿ ಬರಲು ಸರಿಯಾದ ಮಾರ್ಗ ಸೌಕರ್ಯವಿಲ್ಲ. ಇದ್ದ ಗಾಡಿಯ ಜಾಡಿನಲ್ಲೂ ಮಧ್ಯೆ ಮಧ್ಯೆ ಮೊಳಕಾಲಿನ ವರೆವಿಗೆ ಬರುವ ಹಳ್ಳಕೊಳ್ಳಗಳಿದ್ದುವು. ಇದು ಬಿಟ್ಟರೆ ಅದರ ಇಕ್ಕಡೆಗಳಲ್ಲೂ ಹೊಲ, ಗದ್ದೆಗಳಿದ್ದುದರಿಂದ ಬೇರೆ ದಾರಿಯೇ ಇರಲಿಲ್ಲ.

ಅಂದು ಆ ಹಳ್ಳಿಯಲ್ಲಿ ಸಂತೆ. ಗ್ರಾಮಗಳ ಕಡೆ ಗ್ರಾಮಸ್ಥರಿಗೆ ಬೇಕಾದ ಸಾಮಾನುಗಳನ್ನು ಕೊಳ್ಳಬೇಕೆಂದರೆ ಆ ಒಂದು ದಿನ ಮಾತ್ರ ಸಾಧ್ಯ. ಇದಕ್ಕಾಗಿಯೇ ಎಂದೂ ಇಲ್ಲದ ಜನಸಂದಣಿ ಆ ದಿನ ಕಂಡುಬರುತ್ತದೆ. ಸುತ್ತುಮುತ್ತಲ ಹಳ್ಳಿಯವರೆಲ್ಲಾ ಸೇರುತ್ತಾರೆ. ಹಲವಾರು ದಿನಗಳಿಂದ ನೋಡಿರದ ಗೆಳೆಯರುಗಳೂ ಅಂದು ಕೂಡುತ್ತಾರೆ. ನಮಗೆ ಹಬ್ಬದ ದಿನ ಇರುವ ಸಂತೋಷ ಅಂದು ಅವರು ಪಡೆಯುತ್ತಾರೆ.

ಹೋಗಿ ಬರುತ್ತಿದ್ದ ಜನ ವಿಪರೀತವಾಗಿತ್ತು. ಅವರ ನಡಿಗೆಯಿಂದ ಏಳುತ್ತಿದ್ದ ಧೂಳು ಆ ರಸ್ತೆಯ ಅಕ್ಕಪಕ್ಕಗಳಲ್ಲಿದ್ದ ಮನೆಗಳನ್ನು ಒಂದು ರೀತಿಯ ಮಸುಕುಗೊಳಿಸಿತ್ತು.

ಆ ಸಮಯದಲ್ಲಿ ಒಬ್ಬ ಹಣ್ಣು ಮಾರುವವನು ಸಂತೆಗಾಗಿ, ವ್ಯಾಪಾರಮಾಡಿ ಲಾಭ ಸಂಪಾದಿಸುವೆನೆಂಬ ಹಿರಿ ಆಸೆಯಿಂದ ಒಂದು ಕೈಗಾಡಿಯ ತುಂಬ ಹಣ್ಣುಗಳನ್ನು ಹಾಕಿಕೊಂಡು, ನೂಕುತ್ತ ಬರುತ್ತಿದ್ದ. ಅಕ್ಕಪಕ್ಕಗಳನ್ನೆಷ್ಟು ತಿರುಗಿ ನೋಡಿದರೂ, ಅವನಿಗೆ ಸರಿಯೆನಿಸುವ ಸ್ಥಳಯಾವುದೂ ದೊರೆಯದಾಯಿತು. ಮತ್ತೆ ಮುಂದರಿದು, ನಾಲ್ಕು ಬೀದಿ ಸೇರುವ ರಸ್ತೆಯೊಂದರ ಅಂಚಿನಲ್ಲಿ ಗಾಡಿ ನಿಲ್ಲಿಸಿ ಕೂಗಲಾರಂಭಿಸಿದ.

ಸಕ್ರೆ ಪನ್ನೇರ್ಲೇ—ಸಕ್ರೆ ಪನ್ನೇರ್ಲೇ—
ಅಣೆಗೆರಡು—ಅಣೆಗೆರಡು,
ಬಂದು ನೋಡಿ, ತಿಂದು ನೋಡಿ,
ಕಾಸು ಕೊಟ್ಟು — ರುಚಿ ನೋಡಿ

ಅತ್ತಿತ್ತ ಓಡಾಡುತ್ತಿದ್ದ ಜನರ ಕಿವಿಗೆ ಹಣ್ಣಿನ ಹೆಸರು ಬೀಳುತ್ತಲೇ ಕೆಲವರ ಮನ ಇತ್ತ ತಿರುಗಿತು, ಕೊಂಚ ರುಚಿ ನೋಡೋಣ ಎಂದು ಕೆಲವರೂ, ಬೆಲೆ ಸರಿ ಬಂದಲ್ಲಿ ನಾವೂ ಸ್ವಲ್ಪ ತೆಗೆದುಕೊಂಡು ಹೋಗೋಣ ಎಂದು ಕೆಲವರೂ, ಅಂತೂ ಇಂತು ಮಾರುತ್ತಿದ್ದವನಿಗೆ ತೃಪ್ತಿಯಾಗುವಷ್ಟು ಮಂದಿ ನಿಂತರು.

ಬಿಸಿಲಿನ ಝಳ ಜೋರಾಗಿಯೇ ಇತ್ತು. ಅನೇಕರು, ದೂರದಿಂದ ನಡೆದು ಬಂದವರು, ತಾಪ ತಡೆಯಲಾರದೆ, ಆ ತಾಪ ಪರಿಹರಿಸಿಕೊಳ್ಳುವುದಕ್ಕಾಗಿ, ಹಣ್ಣುಮಾರುವವನ ಬಳಿಬಂದು ನಿಂತರು. ಅಷ್ಟು ಮಂದಿಯೂ ವ್ಯಾಪಾರ ನಡೆಸಿದಲ್ಲಿ ತನಗೆ ನಿಜವಾಗಿಯೂ ತುಂಬ ಲಾಭ ಬರುವುದೆಂದು ಮಾರುವವನು ನೆನೆಸಿದ.

ಇನ್ನೂ ಚೌಕಾಸಿ ನಡೆಯುತ್ತಲೇ ಇತ್ತು. ಆ ಹೊತ್ತಿಗೆ ಆ ಚೌಕಕ್ಕೆ ಬಂದುಸೇರುವ ಸಂದಿಯೊಂದರಿಂದ ಯಾವುದೋ ಒಬ್ಬ ಮುದುಕ, ಹಣ್ಣುಮಾರುವವನ ಕೂಗು ಕೇಳಿ, ಇತ್ತಕಡೆ ಹೆಜ್ಜೆಯಿಡುತ್ತಾ ಬರುತ್ತಿದ್ದ. ಹರಕು ಚಿಂದಿಯುಡುಗೆಯಿಂದ ಅವನ ಮೈ ಅರೆಮುಚ್ಚಿತ್ತು. ಸುಕ್ಕಿನ ಗೆರೆಗಳಾಗಲೇ ಅವನ ಮುಖವನ್ನಾವರಿಸಿತ್ತು. ಗುಳಿಬಿದ್ದ ಕಣ್ಣು, ನಡುಗುವ ಅವನ ತಲೆ, ಎತ್ತಿ ಕಾಣುತ್ತಿತ್ತು. ಭುಜದ ಮೇಲಿದ್ದ ಅರಿವೆಯೊಂದು ಹೊರತು ಅವನದೆನ್ನುವ ವಸ್ತು ಮತ್ತಾವುದೂ ಇದ್ದಂತೆ ತೋರಬರಲಿಲ್ಲ.

ಗಂಭೀರವಾದ ಹೆಜ್ಜೆಯನ್ನಿಡುತ್ತ ಆತ ಗಾಡಿಯ ಬಳಿಗೆ ಬಂದ. ತುಂಬ ಹಸಿದಿದ್ದುದರಿಂದ ಕಣ್ಣರಳಿಸಿ ಹಣ್ಣಿನ ಕಡೆ ನೋಡಲಾರಂಭಿಸಿದ. ಕೊಳ್ಳಬೇಕೆಂಬ ಆಸೆ. ಕೊಳ್ಳಲು ಕೈಲೊಂದು ಕಾಸಿಲ್ಲ. ತನ್ನ ಸ್ಥಿತಿಗಾಗಿ ತುಂಬ ಚಿಂತೆಗೊಂಡಿದ್ದಂತೆ ಕಾಣಬರುತ್ತಿತ್ತು.

ತನ್ನ ಬಡತನದ ದೀನತೆಯಿಂದ, ಅಳುತ್ತಿದ್ದ ಮುಖದೊಡನೆ, ಮೆಲ್ಲನೆ ಹಣ್ಣಿನವನನ್ನು ಕರೆದು "ಅಯ್ಯಾ ನಾನೊಬ್ಬ ಬಡವ, ಮುದಿಯನಾಗಿದ್ದೇನೆ ಅದಲ್ಲೂ ಈ ದಿನ ಕೆಲಸವೆಲ್ಲೂ ಸಿಕ್ಕದೆ, ಕೈಲಿ ಕಾಸೊಂದಿಲ್ಲದೆ, ತುಂಬ ಹಸಿದು ಬಿಸಿಲಿನ ಬೇಗೆಗೆ ಸಿಕ್ಕಿ ಬಾಯಾರಿ ಬಂದಿದ್ದೇನೆ. ಕರುಣೆಯಿಂದ ನೀನು ಕೊಡುವದಾದರೆ, ನನ್ನ ಒಂದೇ ಹಣ್ಣು ನನ್ನ ಬಾಯಾರಿಕೆಯನ್ನು ಹಿಂಗಿಸೀತು" ಎಂದ.

ಹಾಗೆನ್ನುವಾಗ ಅವನ ಧ್ವನಿ ನಡುಗುತಿತ್ತು, ಯಾಗಿ ಕಣ್ಣಂಚಿನಲ್ಲಿ ಕೂಡ ಎಲ್ಲರೂ ಕಾಣುವಂತೆ ಭೂಮಿಯನ್ನು ಸೇರಿತು.

ಮಾರುವವನ ಸ್ವಲ್ಪ ಕಠಿಣನೇ ಸರಿ. ಮುದುಕನ ದೀನತೆಯು ಬೇಡಿಕೆ ಅವನ ಹೃದಯದೊಳ ಹೋಗಲೇ ಇಲ್ಲ. ಇನ್ನೂ ಮುದುಕನ ಮಾತು ಮುಗಿಯುವುದರೊಳಗೇ, "ಕೇಳಲೂ ನಾಚಿಕೆಯಾಗುವುದಿಲ್ಲ? ಸೋಮಾರಿತನದಿಂದ ಕೆಲಸ ಮಾಡಲಾರದೆ ಬಂದು ಹಣ್ಣು ಕೇಳುತ್ತಿದ್ದೀಯಾ? ನಿಮ್ಮ ತಾತ ಬೆಳಸಿ ಕೊಟ್ಟಿದ್ದನೇನೊ? ನಡೆ ಆಚೆ. ಯಾರಿಗೆ ತಾನೆ ಹಣ್ಣು ಕಂಡರೆ ಆಸೆಯಾಗುವುದಿಲ್ಲ. ಹಾಗೇ ಬೇಕಾಗಿದ್ದರೆ ಇಲ್ಲಿರುವವರೆಲ್ಲಾ ದುಡ್ಡು ಕೊಟ್ಟು ಕೊಂಡಿರುವಂತೆ ಕೊಂಡುಕೋ! ಇಲ್ಲದಿದ್ದಲ್ಲಿ ಬರುವ ಜನಕ್ಕೆ ಅಡ್ಡಿಯಾಗಿ ನಿಂತಿರಬೇಡ ಹೊರಡು" ಎಂದು ಗದ್ದರಿಸಿದ.

ಮುದುಕನ ಮುಖ ಚಿಕ್ಕದಾಯಿತು. ಮೊದಲೆ ನಾಚಿ, ಕೇಳಲು ಹಿಂಜರಿದು, ಹಸಿವೆಯ ಭರವನ್ನು ತಡೆಯಲಾರದೆ, ಬತ್ತಿಬರುತ್ತಿದ್ದ ಬಾಯ ಕಷ್ಟ ತಡೆಯಲಾರದೆ, ಕೇಳಿದ ಅವನಿಗೆ, ಮಾರುವವನ ಕಟುಮಾತು ಹೃದಯಕ್ಕೆ ತಟ್ಟಿತು. ತುಂಬಿ ಬರುತ್ತಿರುವ ದುಃಖದ ಭಾರದಿಂದ, ನಡುಗುವ ತುಟಿಯನ್ನು ತೆರೆಯಲಾರದೆ ತೆರೆದು ...

"ಅಯ್ಯಾ ಕೋಪಿಸಬೇಡ ಬಡವನಾಗಿ ಬಂದು ಹೊಟ್ಟೆಗಿಲ್ಲವೆಂದು ನಿನ್ನನ್ನು ಕೇಳಿಕೊಂಡೆ ಅಷ್ಟೆ. ಇಷ್ಟೊಂದು ಹಣ್ಣನ್ನು ಮಾರಿ, ಲಾಭ ಸಂಪಾದಿಸುವ ಕಡೆ, ನನಗೆ ಕನಿಕರದಿಂದ ಕೊಡುತಿದ್ದ ಒಂದೇ ಒಂದು ಹಣ್ಣಿನಿಂದ ನಿಜಕ್ಕೂ ನೊಂದಿರುವನಿಗೆ ದಾನ ಮಾಡಿದುದರಿಂದ ನಿನಗೇನೂ ಹೆಚ್ಚು ನಷ್ಟವಾಗುತ್ತಿರಲಿಲ್ಲ. ಈಗಲೂ ಹಿರಿಯ ಮನಸ್ಸಿನಿಂದ ನೀನು ಕೊಟ್ಟದ್ದೇ ಆದರೆ ನನ್ನಲ್ಲೇನೂ ಕಾಸಿಲ್ಲ ನಿಜ, ಆದರೂ, ತೃಪ್ತಪಟ್ಟ ಹೃದಯದಿಂದ, ತುಂಬಿರುವ ಸಂತೋಷದಿಂದ ಹರಸುತ್ತೇನೆ. ಮರೆಯಬೇಡ ಕೇವಲ ಕಿರಿಯ ಉಪಕಾರಕ್ಕೂ ದೇವರು ಮೆಚ್ಚುತ್ತಾನೆ. ನಿನ್ನನ್ನು ತುಂಬಿದ ಹೃದಯದಿಂದ ಹರಸುತ್ತಾನೆ" ಎಂದ.

ಇವನ ಕೊನೆಯ ಮಾತು ಕೇಳಿದ ಹಣ್ಣಿನವನು ವ್ಯಂಗವಾಗಿ ನಕ್ಕು "ಹುಚ್ಚಾ ನಾಚಿಕೆಯಿಲ್ಲದೆ, ನನಗೆ ಬೋಧನೆ ಮಾಡಲು ಬಂದೆಯಾ? ನಿನ್ನ ಮಾತಿನಿಂದ ಉದುರಿಬಿದ್ದ ಎರಡಕ್ಷರ ನನ್ನ ಸಂಸಾರವನ್ನು ನಡೆಸುತ್ತೇನೋ? ಮರ್ಯಾದೆಯಾಗಿ ಹೊರಡು. ಇಲ್ಲಿ ನಿಂತು ಸುಮ್ಮನೆ ನನಗೆ ರೇಗಿಸಬೇಡ. ಆಗುವ ವ್ಯಾಪಾರಕ್ಕೆ ಅಡಚಣೆಯಾಗಿ ನಿಂತಿರಬೇಡ." ಎಂದು ಸುತ್ತುಮುತ್ತಲಿದ್ದವರೆಲ್ಲಾ ಕೇಳಿಸುವಂತೆ ಗಟ್ಟಿಯಾಗಿ ಗದರಿಸಿದ.

ಆ ಕಡೆ ಓಡಾಡುತ್ತಿದ್ದವರೆಲ್ಲಾ ಏನು ಅನಾಹುತವಾಗಿದೆಯೋ ಏನು ನಡೆದಿದೆಯೋ ನೋಡೋಣ ಎಂದು ಹಣ್ಣಿನವನ ಸುತ್ತಲೂ ತುಂಬಿಕೊಂಡರು.

ಹಣ್ಣಿನವನ ಮಾತನ್ನು ಕೇಳಿ ಅಲ್ಲಿದ್ದ ಕೆಲವರಿಗೆ ನಿಜಕ್ಕೂ ಕೋಪ ಬಂದಿತ್ತು. ಹಾಗೂ ಮುದುಕನ ದೀನಸ್ಥಿತಿಯನ್ನು ನೋಡಿ ಕನಿಕರ ಬಂದಿತ್ತು.

ಆ ಗುಂಪಿನಲ್ಲಿದ್ದವನೊಬ್ಬ "ಪಾಪ ಆ ಮುದುಕನನ್ಯಾತಕ್ಕೆ ಸುಮ್ಮನೆ ಬಯ್ಯುತ್ತೀಯಪ್ಪಾ, ಹೋಗ್ಲಿ ಪಾಪ ಅಷ್ಟೊಂದು ಕೇಳಿಕೊಂಡದ್ದಕ್ಕೆ ಒಂದು ಹಣ್ಣು ಕೊಟ್ಟು ಬಿಡಯ್ಯಾ" ಎಂದ.

ಮತ್ತೊಬ್ಬ "ದೊಡ್ಡದಲ್ಲದಿದ್ದರೆ ಚಿಕ್ಕದನ್ನಾದರೂ ಕೊಟ್ಟು ಕಳಿಸಪ್ಪಾ ಪಾಪ ಮುದುಕ" ಎಂದ.

"ಹೌದೌದು ಅವನು ಪಾಪ ತುಂಬಾ ಬಳಲಿದ್ದಾನೆ. ಒಂದು ಹಣ್ಣು ಕೊಡಯ್ಯ ನಿನಗೇನು ಮಹಾನಷ್ಟ ಆಗುತ್ತೆ" ಎಂದು ದನಿಗೂಡಿಸಿದ ಮೂರನೆಯವನು.

ಇದನ್ನು ಕೇಳಿದ ಹಣ್ಣಿನವನಿಗೆ ಕೋಪವೇರಿತು ಅವರುಗಳ ಮಾತಿನಲ್ಲಿದ್ದ ಸಹಾನುಭೂತಿಯ ಒಳ್ಳೆಯ ನೆರಡು ಮಾತುಗಳು ಇವನಿಗೆ ಸರಿ ಬೀಳಲಿಲ್ಲ. ಎಲ್ಲರೂ ಮುದುಕನ ಕಡೆಯೇ ಆದುದನ್ನು ನೋಡಿ ರೇಗಿದ. "ಪಾಪ, ಅಷ್ಟು ಮರುಕವಿರುವವರು ನನಗೆ ಉಪದೇಶ ಮಾಡುವ ಬದಲು, ನೀವೇ ಏಕೆ ಕೊಂಡು ಕೊಡಬಾರದು. ಅದರಿಂದ ನಿಮಗೆ ತಾನೆ ಏನು ನಷ್ಟ? ಒಬ್ಬರಿಗೆ ಉಪದೇಶಿಸುವ ಬದಲು ನೀವೇ ಆ ಕಾರ್ಯ ಮಾಡಿ ತೋರಿಸುವುದು ಉತ್ತಮವಲ್ಲವೇ? ಎಂದ.

ಈ ಮಾತನ್ನು ಕೇಳಿ ಹಲವರು ಆ ಯುವಕನ ಕಡೆ ನೋಡಿ ನಕ್ಕರು ನಿಜಕ್ಕೂ ಮಾರುವವನ ಮಾತಿನಲ್ಲಿ ಕೊಂಚ ಹುರುಳಿತ್ತು.

ಎಲ್ಲರೂ ತನ್ನನ್ನು ನೋಡಿ ನಗುವದನ್ನು ... ಒಬ್ಬ ಯುವಕ ... ಅವನೇ ಜೇಬಿಗೆ ಕೈಹಾಕಿ ಎರಡಾಣೆ ತೆಗೆದ. ಹಣ್ಣಿನವನ ಗಾಡಿಯ ಮೇಲಿರಿಸಿದ ಉತ್ತಮವಾದ ನಾಲ್ಕು ಹಣ್ಣುಗಳನ್ನು ಕೊಂಡು ನಾಲ್ಕನ್ನೂ ಮುದುಕನ ಕೈಗಿತ್ತ.

"ನನಗೇಕೆ ಸ್ವಾಮಿ ನಾಲ್ಕು ಹಣ್ಣು" ಎಂದವನೇ ಮುದುಕ ಯುವಕನ ಕಡೆ ನೋಡಿ "ಬಿಸಿಲಿನ ಬೇಗೆಯಿಂದ ಬತ್ತಿದ ಬಾಯಿ. ಹಣ್ಣು ಬಯಸಿತು. ಅದಕ್ಕಾಗಿ ಕೇಳಿದೆ ಅಷ್ಟೇ. ನೀವು ಪ್ರೀತಿಯಿಂದ ಕೊಡುವ ಹಣ್ಣೊಂದೇ ಸಾಕು" ಎಂದವನೇ ಒಂದನ್ನು ಮಾತ್ರ ತನ್ನಲ್ಲಿಟ್ಟುಕೊಂಡು ಉಳಿದ ಮೂರನ್ನು ಯುವಕನ ಕೈಗೇ ಮರಳಿ ಕೊಟ್ಟ.

ಇದನ್ನು ಕಂಡು ಅಲ್ಲಿದ್ದವರೆಲ್ಲ ಆಶ್ಚರ್ಯ ಹೊಂದಿದರು ಬಡವನಾದರೂ, ಗುಣವಂತನೆಂದು ತಮ್ಮಲ್ಲೇ ಅವನನ್ನು ಹೊಗಳಿದರು. ಆ ಹರೆಯದವನ ಮುಖವೂ ಅರಳಿತು. ಮುದುಕ ತೃಪ್ತಿಪಟ್ಟ. ಕೊಟ್ಟವನಿಗೆ ಮನದಲ್ಲೇ ವಂದಿಸಿದ, ಹಾಗೂ ಪ್ರೀತಿ ಕೃತಜ್ಞತೆಯಿಂದ ಕೂಡಿದ ದನಿಯಿಂದ "ನನಗಾಗಿ ಹಣ್ಣು ಕೊಂಡಿದ್ದಕ್ಕೆ ತುಂಬಾ ವಂದನೆಗಳು. ಆದರೆ ನೀನು ಒಂದೆರಡು ನಿಮಿಷ ಕಾಯುವುದಾದರೆ ನೀನು ಕೊಟ್ಟದ್ದನ್ನೇ ಮರಳಿ ಕೊಡುತ್ತೇನೆ" ಎಂದ.

ಈ ಮಾತು ಕೇಳಿ ಜನರೆಲ್ಲಾ ಆಶ್ಚರ್ಯಪಟ್ಟರು. ಇವನೆಲ್ಲೋ ಹುಚ್ಚನಿರಬೇಕೆಂದು ಮಾತಾಡಿಕೊಂಡರು. ಕೆಲವರು ಇವನನ್ನು ನೋಡಿ ನಕ್ಕು ಅಣಗಿಸಿ, ವ್ಯಂಗವಾಗಿ ನೋಡಹತ್ತಿದರು. ಇಷ್ಟು ಹೊತ್ತಿಗೆ ಸಂತೆಗೆ ಬಂದಿದ್ದವರೆಲ್ಲಾ ಮುದುಕನ ಸುತ್ತಲೂ ಮುತ್ತಿಕೊಂಡರು.

ಎಲ್ಲರ ಮುಂದೆಯೂ, ಹಣ್ಣನ್ನು ತಿಂದ ಉಳಿದ ಬೀಜವನ್ನು ಅಂಗೈಗೆ ತೆಗೆದುಕೊಂಡ. ಸನಿಹದಿಂದ ನೆಲದಲ್ಲೊಂದು ಸಣ್ಣ ಗುಳಿ ಮಾಡಿದ. ಆ ಗುಳಿ ಎರಡು ಮೂರು ಅಂಗುಲ ಇಳಿಯುವದರೊಳಗೇ ನಿಲ್ಲಿಸಿ ಗುಂಪಿನ ಕಡೆ ನೋಡಿ "ಯಾರಾದರೂ ದಯವಿಟ್ಟು ಕೊಂಚ ಬಿಸಿನೀರನ್ನು ತಂದು ಕೊಡುವಿರಾ"? ಎಂದು ಕೇಳಿದ.

ಇವನ ಈ ಹುಚ್ಚು ಆಟ ನೋಡಿ ತಮ್ಮ ಊಹೆ ನಿಜವೆಂದು ತಿಳಿದುಕೊಂಡರು. ಕಾರಣ ಇವ ರೀತಿ ಅವರಿಗರ್ಥವಾಗದ ಸಮಸ್ಯೆಯಾಗಿತ್ತು. ಬೀಜಕ್ಕೂ, ಬಿಸಿ ನೀರಿನ ಅಗತ್ಯಕ್ಕೂ ಇರುವ ಸಂಬಂಧ ಅರಿಯದಾದರು ಅದರೂ ಮುಂದೇನಾಗುವುದೋ ನೋಡಬೇಕೆಂಬ ಕುತೂಹಲದಿಂದ, ಇದ್ದ ಜಾಗದಿಂದ ಕದಲದೆ ನಿಂತರು.

ಆ ಗುಂಪಿನೊಳಗಿದ್ದ ಒಬ್ಬ ಸಣ್ಣ ಹುಡುಗ ಹತ್ತಿರದಲ್ಲೇ ಇದ್ದ ತನ್ನ ಮನೆಗೋಡಿದ. ಒಂದು ಚಿಕ್ಕ ಪಾತ್ರೆಯಲ್ಲಿ ಬಿಸಿ ನೀರನ್ನು ಹಿಡಿದುಕೊಂಡು ಬಂದು ಆ ಮುದುಕನ ಕೈಗಿತ್ತ.

ಮುದುಕ ಹುಡುಗನ ತಿರಸ್ಕಾರ ಹುಚ್ಚನೆಂದು ಅರಿಯದೆ ಆಸಕ್ತಿಯಿಂದ ನೀರು ತಂದಿತ್ತ ಅವನಿಗೆ ಮನದಲ್ಲೇ ಆಶೀರ್ವದಿಸಿದ.

ಕೈಲಿದ್ದ ಬೀಜವನ್ನು ಗುಳಿಯೊಳಕ್ಕೆ ಹಾಕಿದ ಮಣ್ಣಿನಿಂದ ಮುಚ್ಚಿ ಬಿಟ್ಟ ಹುಡುಗನು ಒದಗಿಸಿದ ಬಿಸಿ ನೀರನ್ನು ಅದರ ಮೇಲೆ ಸುರಿದ. ಇವನ್ನು ಕಂಡು ಅಲ್ಲಿದ್ದವರಿಗೆಲ್ಲ ಆಶ್ಚರ್ಯ.

ಕಣ್ಣು ರೆಪ್ಪೆ ಹೊಡೆಯುವದರೊಳಗಾಗಿ ಬೀಜ ಮೊಳಕೆಯಿಟ್ಟಿತು. ಮತ್ತೆರಡು ನಿಮಿಷಗಳೊಳಗಾಗಿ ಮೊಳಕೆ ಇಬ್ಭಾಗವಾಯಿತು. ಎರಡು ಕುಡಿ ಹೊರಟು ಹಸುರೆಲೆ ಕಂಡಿತು. ಎಲೆಗೆರಡು ಕೊಂಬೆಯಾಯಿತು. ಕೊಂಬೆಯ ತುಂಬ ಮರಿಕೊಂಬೆಗಳು ಹುಟ್ಟಿಕೊಂಡು ಹಸುರೆಲೆಯಿಂದ ತುಂಬಿಹೋಯಿತು. ಹೀಗಾಗಿ ಕೇವಲ ಹತ್ತು ನಿಮಿಷದೊಳಗಾಗಿ ಒಂದು ದೊಡ್ಡ ಗಿಡಗಿದ್ದುದು ಮರವಾಗಿ ನಿಂತಿತು ಎಲ್ಲರೂ ನೋಡುತ್ತಿರುವಂತೆಯೇ ಹೂ ಬಿಡಲು ಆರಂಭವಾಯಿತು.

ಅಲ್ಲಿದ್ದ ಜನರೆಲ್ಲ ಆಶ್ಚರ್ಯದಿಂದ ಕೂಡಿ ಮುಗ್ಧರಾದರು. ಕಾಣುತ್ತಿದ್ದಂತೆಯೇ ಬಿಟ್ಟಿದ್ದ ಹೂ ಉದುರಿ ಕೊಂಬೆಗೆ ಸಾವಿರದಂತೆ ಅಚ್ಚಹಳದಿ ತಿರುಗಿರುವ ಉತ್ತಮವಾದ ಪನ್ನೇರಳೇ ಹಣ್ಣು. ಕೂಡಿದವರೆಲ್ಲ ನೆಗೆದಾಡ ತೊಡಗಿದರು. ಇಂತಹ ಆಶ್ಚರ್ಯವನ್ನು ಎಂದೂ ಯಾರೂ ಕಂಡುದೇ ಇಲ್ಲ. ಹಣ್ಣು ಮಾರುವವನೂ ತನ್ನ ಗಾಡಿಯನ್ನು ಮರೆತು ಎಲ್ಲರಿಗಿಂತಲೂ ಮುಂದಾಗಿ ಆ ಜನದ ಗುಂಪಿನಲ್ಲಿ ದಾರಿ ಬಿಡಿಸಿಕೊಂಡು ಬಂದು ಕಣ್ಣರಳಿಸಿ ನೋಡತೊಡಗಿದ.

ಆರನಗೆ ಬೀರುತ್ತ ಅಲ್ಲಿದ್ದವರನ್ನೆಲ್ಲಾ ನೋಡಿ "ನನ್ನ ಕಾರ್ಯ ಇನ್ನೂ ಮುಗಿದಿಲ್ಲ ನಿಮಗೆ ಮಾತು ಕೊಟ್ಟಂತೆ ಹಿಂದಾಗ ಕೊಟ್ಟ ಹಣ್ಣನ್ನು ಮರಳಿಸುತ್ತೇನೆ ಗಿಡದಲ್ಲಿರುವ ಹಣ್ಣನ್ನೆಲ್ಲಾ ಉದುರಿಸಿ, ಒಟ್ಟಾಗಿ ಸೇರಿಸಿ ನಿಮಗೇ ಕೊಡುತ್ತೇನೆ;" ಗಿಡದಲ್ಲಿರುವ ಹಣ್ಣನ್ನೆಲ್ಲಾ ಒಂದೆಡೆ ರಾಶಿ ಹಾಕಿದ. ಎಲ್ಲರಿಗೂ ಹಂಚಲು ಮೊದಲಿಟ್ಟ ಇಷ್ಟು ಹೊತ್ತಿಗೆ ಅಲ್ಲಿದ್ದ ಗುಂಪು ಸಂಖ್ಯೆಯಲ್ಲಿ ಗಣನೆ ಮೀರಿತ್ತು. ಹೀಗೆ ಮೂರು ನಾಲ್ಕು ಬಾರಿ ಹಂಚುವಷ್ಟು ಹಣ್ಣು ಜನ ಅರುವರು ನಿಂತರು ಯಾರಿಗೂ ತಪ್ಪದೆ ಹಣ್ಣು ಬಂದ ನಂತರ ಮುದುಕ "ಎಲ್ಲರಿಗೂ ಹಣ್ಣು ಬಂತೇ" ಎಂದು ಕೇಳಿದ. ಅಲ್ಲಿದ್ದವರೆಲ್ಲಾ ತಿಂದು ತೃಪ್ತಿಹೊಂದಿ, ಹೊಗಳಿದರು ಹಕ್ಕಿಯನ್ನು ತೆಗೆದು ಗಿಡದ ಮಧ್ಯಭಾಗ ಕೋರಿ ಒಂದೇಟು ಕೊಟ್ಟ. ಇದ್ದ ಹೂ, ಎಲೆ, ಕೊಂಬೆಗಳೆಲ್ಲಾ ಮಾಯವಾಗಿ ಕೇವಲ ಒಂದು ಕೋಲು ನಿಂತಿತು ಅದೂ ಅರ್ಧ ನೆಲದಲ್ಲಿ ಅರ್ಧ ಮುದುಕನ ಕೈಗೆ ಬಂತು. ಆ ಕೋಲನ್ನು ಹಿಡಿದು ಅಲ್ಲಿದ್ದವರನೆಲ್ಲಾ ವಂದಿಸಿ ಒಂದು ಹಾದಿಯ ಕಡೆ ಹೆಜ್ಜೆ ಹಾಕಿದ.

ಅದುವರೆವಿಗೂ ಆಶ್ಚರ್ಯದಿಂದ ನೋಡುತ್ತಾ ನಿಂತಿದ್ದ ಜನ, ಮುದುಕ ಕಣ್ಮರೆಯಾಗುತ್ತಲೇ ನಡೆದುದನ್ನು ನೆನೆನೆನೆದು, ನಾನಾ ರೀತಿಯಲ್ಲಿ ಮಾತಾಡಲು ಪ್ರಾರಂಭಿಸಿದರು. ಕೆಲವರು ಸಕ್ಕರು ಮತ್ತೆ ಕೆಲವರು ಮುದುಕನ ಕೈ ಚಳಕದ, ಅವನ ಅದ್ಭುತ ಕಾರ್ಯ ಸಾಮರ್ಥ್ಯವನ್ನು ಹೊಗಳಿದರು ಇನ್ನು ಕೆಲವರು ಹಣ್ಣು ಮಾರುವವನ ನೀಚ ಬುದ್ಧಿಗಾಗಿ ಬೈದರು.

ಅದುವರೆವಿಗೂ ಪ್ರಪಂಚವನ್ನೇ ಮರೆತಿದ್ದಂತೆ ನಿಂತಿದ್ದ ಹಣ್ಣಿನವನಿಗೆ ಆಗ ತಾನೆ ಗಾಡಿಯ ನೆನಪು ಬಂದಿತು ವಿದ್ಯುತ್ ಪ್ರವಾಹ ಹರಿದವನಂತೆ ಚಂಗನೆ ಹಾರಿ ಗಾಡಿಯ ಕಡೆಗೆ ನೋಡಿದ, ಕಂಡುದೇನು? ಖಾಲಿ ಗಾಡಿ. ಗಾಡಿಯಲ್ಲಾ ಬರಿದಾಗಿತ್ತು ಮಾಡಿಕೊಂಡು ಬರುವದಕ್ಕಾಗಿ ಹಾಕಿದ್ದ ಹಿಡಿಗಳೆರಡರ ಪೈಕಿ ಒಂದು ಮಾಯವಾಗಿತ್ತು.

ಇದನ್ನು ಕಂಡು ಅವನಿಗೆ ಅಳು ಬರುವಂತಾಯಿತು ಮುದುಕನನ್ನು ನಾನಾ ರೀತಿಯಲ್ಲಿ ಬೈಯ್ಯತೊಡಗಿದ. ಆದರೇನು? ಆ ಬಡ ಮುದುಕ ಅಲ್ಲಿರಲಿಲ್ಲ. ದುಃಖದ ಭಾರದಿಂದ ಗಾಡಿಯನ್ನು ನೂಕುತ್ತ ನಡೆದ.

ಮುದುಕ ತೆಗೆದಿದ್ದ ಗುಳಿಯನ್ನು ಸಮೀಪಿಸಿದೊಡನೆಯೇ ಕಾಲಿಗೇನೂ ತಾಕಿದಂತಾಯಿತು. ನೋಡ ತ್ತಾನೆ ಗಾಡಿಯ ಹಿಡಿ! ಇದನ್ನು ಕಂಡು ಮುದುಕ ತನ್ನ ಬುದ್ಧಿಯನ್ನು ತಿದ್ದಿಸಲಿಕ್ಕಾಗಿ ಈ ರೀತಿ ಪವಾಡ ನಡೆಸಿರುವನೆಂದರಿತ. ಹಸಿದು, ಬಾಯಾರಿ ಬಂದಿದ್ದವನನ್ನು ಕಡೆಗಣಿಸಿದ್ದಕ್ಕಾಗಿ ತನಗೆ ಇಷ್ಟು ಶಿಕ್ಷೆಯಾಯಿತೆಂದುಕೊಂಡ. ಕೇವಲ ಹಣವೊಂದಕ್ಕಾಗಿ ತನ್ನೆಲ್ಲವನ್ನೂ ಗರ್ವವನ್ನೂ ನಾಶಮಾಡಿದ ಮುದುಕನನ್ನು ಭಯ ಭಕ್ತಿಯಿಂದ ಮನದಲ್ಲೇ ನೆನೆದ.

ಹಣ್ಣಿನವನಿಗೆ ತನ್ನ ತಪ್ಪು ಆಗ ಮನಸ್ಸಿಗೆ ಹೊಳೆಯಿತು ಜ್ಞಾನ ತಿಳಿದೋರಿತು.

★ ಒಂದು ಇಂಗ್ಲೀಷ ಕಥೆಯ ಅನುವಾದ

Reg. No. B. 3148

LICENCE No. 3
Licenced to Post without Prepayment


KARMAVEER 3-5-48

ಮಹಾತ್ಮರ ಕೊಲೆಯ ನಂತರದ ಹಿಂಸಾಚಾರಗಳು----

ಮಹಾತ್ಮಾ ಗಾಂಧಿಯವರ ಕೊಲೆಯ ನಂತರ ಮಹಾರಾಷ್ಟ್ರದ ಕೆಲ ಭಾಗಗಳಲ್ಲೂ ಕರ್ನಾಟಕದ ಉತ್ತರ ಭಾಗದಲ್ಲೂ—ಮುಖ್ಯವಾಗಿ ಕೆಲ ಸಂಸ್ಥಾನಗಳಲ್ಲಿ—ಒಂದು ವಿಶಿಷ್ಟ ಜಾತಿಯವರ ಮೇಲೆ ನಡೆದ ಕೊಲೆ, ಸುಲಿಗೆ, ಕೊಳ್ಳಿ ಮತ್ತು ಇತರ ಭೀಕರ ರೀತಿಯ ಅತ್ಯಾಚಾರಗಳು ಓದುಗರ ನೆನಪಿನಲ್ಲಿರಬಹುದು. "ಸಂಯುಕ್ತ–ಕರ್ನಾಟಕದ" ಪ್ರತಿನಿಧಿ ಸಂತ್ರಸ್ತ ವಿಭಾಗಗಳಲ್ಲಿ ಸಂಚರಿಸಿ ತಂದ ಕೆಲ ಚಿತ್ರಗಳನ್ನು ಪ್ರಕಟಿಸಲಾಗಿದೆ.




ಸಾಂಗಲಿ ಥಿಯೇಟರ ರಸ್ತೆಯಲ್ಲಿ ಶ್ರೀ ಭಿಡೆ ಮೊದಲಾದ ವ್ಯಾಪಾರಸ್ಥರ ಸುಡಲ್ಪಟ್ಟ ಅಂಗಡಿಗಳು.



ಸಾಂಗಲಿ ಗಣಪತಿ ಪೇಟೆಯ ಭಾರತ ಬ್ಯಾಂಕ ಮತ್ತು ಆಪೆಕ್ಸ ಬ್ಯಾಂಕ ಕಟ್ಟಡಗಳ ಅವಶೇಷಗಳು.



ಸಾಂಗಲಿಯ ಸುಟ್ಟುಹೋದ ಪ್ರಭಾ ಮುದ್ರಣಾಲಯ



ಅಕೋಳ [ಬೆಳಗಾವಿ] ಅನಂತ ಕುಲಕರ್ಣಿಯವರ ವಿಧ್ವಸ್ತ ಮನೆ.





ಸಾಂಗಲಿಯ ಕೆಲ ದೃಶ್ಯಗಳು:– (ಎಡದಿಂದ ಬಲಕ್ಕೆ) [೧] ಅರುಣ ವೀವಿಂಗ್ ಮಿಲ್ಸ [೨] ಮಾರುತಿ ರೋಡಿನಲ್ಲಿರುವ ಶ್ರೀ ಪಡಸಲಗಿಯವರ ಮನೆ [೩] ಶ್ರೀರಾಮ ಪ್ರೆಸ್ ಹಿಂಭಾಗ [೪] ಭಿಡೆಯವರ ಕಬ್ಬಿಣ ಅಂಗಡಿ [೫] ಶ್ರೀರಾಮ ಪ್ರೆಸ್ ಮುಂಭಾಗ [೬] ಭಿಡೆಯವರ ಕಾರಖಾನೆ [೭] ಗಾಡಗೀಳರ ಅರಿವೆ ಅಂಗಡಿ [೮] ಮಾರುತಿ ರೋಡಿನ ಜಾಧವ ಬಿಲ್ಡಿಂಗ.

... ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತರಿಂದ ಮುದ್ರಿಸಿ ಪ್ರಕಟವಾಯಿತು.